23 September 2026 Wednesday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

**ಭಾವನಾಂತರಂಗ**

ಸತ್ಯವನ್ನು ನೆನಪಿನಲ್ಲಿಟ್ಟು ಕೊಳ್ಳುವುದು ಬೇಕಿಲ್ಲ ,ಆದರೆ ಸುಳ್ಳನ್ನು ಸರಿಯಾಗಿ ಹೇಳಲು ಪದೆ ಪದೇ ನೆನಪಿಸಿ ಕೊಳ್ಳಬೇಕಾಗುತ್ತದೆ!

-ಸ್ನೇಹಾ ಆನಂದ್

# ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ



ಜೆನ್ ಝೀಗಳಿಗೆ ಸಂವಿಧಾನವೇ ದಾರಿಯಾಗಲಿ ಪುಟ ಸಂ. 2



ಪುಟ ಸಂ. 3 ರೈತರ ಉಪವಾಸ ಸತ್ಯಾಗ್ರಹ ಎರಡನೇ ದಿನಕ್ಕೆ



ಛಾಯಾಗ್ರಾಹಕರಿಗೆ ಸಾಮಾಜಿಕ ಭದ್ರತೆ ಅಗತ್ಯ: ಗಣೇಶ್ ದೀಕ್ಷಿತ್ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 278 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಸಿದ್ದರಾಮಯ್ಯ ಕಾರು ಎತ್ತಂಗಡಿ: ಡಿಸಿಪಿ ಯೋಗೇಶ್‌ಗೆ ತರಾಟೆ



**ಬೆಂಗಳೂರು:** ವಿಧಾನಸೌಧ ಪಶ್ಚಿಮ ದ್ವಾರದ ಕೆಂಗಲ್ ಗೇಟ್ ಬಳಿ ನಿಲ್ಲಿಸಿದ್ದ ತಮ್ಮ ಕಾರನ್ನು ತೆಗೆಸಿ ಪಾರ್ಕಿಂಗ್ ಸ್ಥಳಕ್ಕೆ ಕಳುಹಿಸಿದ್ದ ಡಿಸಿಪಿ ವಿರುದ್ಧ ತೀವ್ರ ಆಕ್ರೋಶಗೊಂಡ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ವಿಧಾನಸೌಧದ ಡಿಸಿಪಿ ಯೋಗೇಶ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ವಿಧಾನಸೌಧದಲ್ಲಿ ನಡೆಯುತ್ತಿರುವ ವಿಶೇಷ ಅಧಿವೇಶನದಲ್ಲಿ ಭಾಗವಹಿಸಿದ ನಂತರ, ಮಧ್ಯಾಹ್ನದ ಊಟಕ್ಕಾಗಿ ತಮ್ಮ ಅಧಿಕೃತ ನಿವಾಸ 'ಕಾವೇರಿ'ಗೆ ತೆರಳಲು ಸಿದ್ದರಾಮಯ್ಯ ಹೊರಟಿದ್ದರು. ಈ ವೇಳೆ ಕೆಂಗಲ್ ಗೇಟ್ ಬಳಿ ನಿಲ್ಲಿಸಲಾಗಿದ್ದ ಅವರ ಕಾರನ್ನು ಡಿಸಿಪಿ ಸೂಚನೆ ಮೇರೆಗೆ ಸ್ಥಳಾಂತರಿಸಲಾಗಿತ್ತು. ಕಾರು ವಾಪಸ್ ಬರುವವರೆಗೆ ಸಿದ್ದರಾಮಯ್ಯ ಗೇಟ್ ಬಳಿ ಕಾದು ನಿಂತರು. ನಂತರ ಸಿದ್ದರಾಮಯ್ಯ ಅವರು, ಡಿಸಿಪಿ ಯೋಗೇಶ್ ಅವರನ್ನು ಕರೆಸಿ, ವಾಹನವನ್ನು ಸ್ಥಳಾಂತರಿಸಿದ ನಿರ್ಧಾರದ ಬಗ್ಗೆ ಪ್ರಶ್ನಿಸಿದರು.

ಸಿದ್ದರಾಮಯ್ಯ ಅವರು ಪುಟ 2ಕ್ಕೆ



## ನಟ ಅನಂತ್ ನಾಗ್‌ಗೆ ಫಾಲ್ಕೆ ಪ್ರಶಸ್ತಿ ಪ್ರದಾನ

**ನವದೆಹಲಿ:** ಕನ್ನಡ ಚಿತ್ರರಂಗದ ಹಿರಿಯ ನಟ ಅನಂತ್ ನಾಗ್ ಅವರಿಗೆ ಭಾರತೀಯ ಸಿನಿಮಾ ಕ್ಷೇತ್ರದ ಅತ್ಯುನ್ನತ ಗೌರವ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ಮಂಗಳವಾರ ನೀಡಿ ಗೌರವಿಸಲಾಯಿತು.

ಗುಜರಾತ್‌ನ ಕೆವಾಡಿಯಾದಲ್ಲಿ ನಡೆದ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಟ ಅನಂತನಾಗ್ ಅವರಿಗೆ 2024ನೇ ಸಾಲಿನ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಪ್ರದಾನ ಮಾಡಿದರು. ಭಾರತೀಯ ಸಿನಿಮಾದ ಪಿತಾಮಹ ದಾದಾಸಾಹೇಬ್ ಫಾಲ್ಕೆ ಹೆಸರಿನಲ್ಲಿ ಈ ಪ್ರಶಸ್ತಿ ಸ್ಥಾಪಿಸಲಾಗಿದೆ. ಸಿನಿಮಾ ರಂಗದಲ್ಲಿ ಗಣನೀಯ ಸಾಧನೆ ಮಾಡಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

# ಕೆಪಿಎಸ್‌ಸಿ 'ಬಾಗಿಲು ಬಂದ್'

## ಕಾನೂನು ತಜ್ಞರ ಜೊತೆ ಚರ್ಚಿಸಿ ನಿರ್ಧಾರ: ಸಿಎಂ ಡಿ.ಕೆ.ಶಿವಕುಮಾರ್

**ಬೆಂಗಳೂರು:** ಕೆಪಿಎಸ್‌ಸಿಯಲ್ಲಿ ಹಗರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಕಾನೂನು ಚೌಕಟ್ಟಿನಲ್ಲಿ ಮುಚ್ಚುವ ಬಗ್ಗೆ ತಜ್ಞರ ಜೊತೆ ಚರ್ಚೆ ಮಾಡುತ್ತಿದ್ದೇನೆ ಎಂದು ಸಿಎಂ ಡಿ.ಕೆ ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಂಗಳವಾರ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಕೆಪಿಎಸ್‌ಸಿಯಲ್ಲಿ ಖದೀಮರು ಸೇರಿಕೊಂಡಿದ್ದಾರೆ. ನಾವು ನಂಬಿಕೆ ಇಟ್ಟು ಆಯ್ಕೆ ಮಾಡಿದ ಅಧಿಕಾರಗಳು ಹೀಗೆಲ್ಲಾ ಮಾಡುತ್ತಿದ್ದಾರೆ. ಅಲ್ಲಿರುವ ಸದಸ್ಯರು ಅಂಗಡಿಯನ್ನೇ ತೆರೆದಿದ್ದಾರೆ. ನಮ್ಮ ಪೊಲೀಸ್ ಅಧಿಕಾರಿಗಳು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಒಂದು ದಿನ ಎಲ್ಲವೂ ಹೊರಗೆ ಬರುತ್ತದೆ ಎಂದು ಹೇಳಿದರು.

ನಮಗೆ ಮಕ್ಕಳ ಭವಿಷ್ಯ ಮುಖ್ಯ. ಇದೇ



ಕಾರಣಕ್ಕೆ ಸಿದ್ದರಾಮಯ್ಯ ಅವರು ತಮ್ಮ ಅವಧಿಯಲ್ಲಿ ಕೆಪಿಎಸ್‌ಸಿಯಲ್ಲಿದ್ದ ಸದಸ್ಯರ ಸಂಖ್ಯೆಯನ್ನು ಕಡಿತಗೊಳಿಸಿದ್ದರು. ನಾವು ನಂಬಿಕೆ ಇಟ್ಟು, ಪಾರದರ್ಶಕವಾಗಿ ಆಯ್ಕೆ ಮಾಡಿ ಅಧಿಕಾರಿಗಳನ್ನು ಕಳುಹಿಸಿದರೆ ಅವರೂ ಹೀಗೆ ಮಾಡುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ನಾನು ಇಂಧನ ಸಚಿವನಾಗಿದ್ದಾಗ 22 ಸಾವಿರ ಮಂದಿ ಲೈನ್ ಮ್ಯಾನ್, ಎಂಜಿನಿಯರ್‌ಗಳ ಹುದ್ದೆ ತುಂಬಿದ್ದೇನೆ. ಬಹಳ ಜಾಗೃತನಾಗಿ ಈ ಕೆಲಸ ಮಾಡಿದ್ದೇನೆ. ಅದಕ್ಕೂ ಮೊದಲು ಖಾಲಿ ಪೇಪರ್‌ನಲ್ಲಿ ಬರೆಸುವ ಭ್ರಷ್ಟ ಸಂಪ್ರದಾಯ ಇತ್ತು. ಆದರೆ ನಾನು ಅದಕ್ಕೆಲ್ಲಾ ಅವಕಾಶ ಕೊಡಲಿಲ್ಲ ಎಂದು ಹೇಳಿದರು.

### ತನಿಖಾಧಿಕಾರಿ ನೇಮಕ ಸರ್ಕಾರಕ್ಕೆ ಕೊಡಬೇಕಿತ್ತು

ಕೆಪಿಎಸ್ಸಿ ಹಗರಣದ ತನಿಖೆಗೆ ಹೈಕೋರ್ಟ್ ಎಸ್‌ಐಟಿ ರಚನೆಗೆ ನಿರ್ದೇಶನ ನೀಡಿರುವುದನ್ನು ಸ್ವಾಗತಿಸುತ್ತೇನೆ. ಆದರೆ, ತನಿಖಾಧಿಕಾರಿಗಳ ನೇಮಕದ ಸ್ವಾತಂತ್ರ್ಯವನ್ನು ಸರ್ಕಾರಕ್ಕೆ ಕೊಡಬೇಕಿತ್ತು. ಇ.ಡಿ ಕೂಡ ತನಿಖೆ ಮಾಡುತ್ತಿದೆ. ನಮ್ಮ ಪೊಲೀಸ್ ಇಲಾಖೆಯೂ ತನಿಖೆಯನ್ನು ಬಹಳ ಚೆನ್ನಾಗಿ ನಡೆಸುತ್ತಿದೆ. ಹೈಕೋರ್ಟ್ ಅಗತ್ಯವಿದ್ದರೆ ನಮ್ಮ ಪೊಲೀಸ್ ಇಲಾಖೆ ತನಿಖೆ ವೈಖರಿಯ ಉಸ್ತುವಾರಿ ನೋಡಬಹುದಿತ್ತು ಎಂದು ತಿಳಿಸಿದರು. ಕಾನೂನು ಪ್ರಕಾರ ನಡೆಯುತ್ತದೆ. ಸೌಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆಯುತ್ತೇನೆ. ತನಿಖೆಗೆ ಯಾರೂ ಹಸ್ತಕ್ಷೇಪ ಮಾಡುವುದಿಲ್ಲ. ಕಾನೂನು ಪ್ರಕಾರ ಎಲ್ಲವೂ ನಡೆಯುತ್ತದೆ ಎಂದರು.

### 200 ತಾಲ್ಲೂಕು ಬರಪೀಡಿತ

ಗದಗ ಜಿಲ್ಲೆಯ ಪ್ರವಾಸ ಮಾಡಿದ್ದೇನೆ. ನನ್ನ ಜೊತೆ ಎಚ್.ಕೆ.ಪಾಟೀಲ್ ಇದ್ದರು. ಅವರು ಹೇಳಿದ್ದು ಸತ್ಯ. ಮಲೆನಾಡಿನಲ್ಲೇ ಬರ ಬಂದಿದೆ ಎಂದರೆ, ಗದಗದಲ್ಲಿ ಬರ ಇರುವುದಿಲ್ಲವೇ, ಜಿಲ್ಲೆಯ ಸಮಸ್ಯೆಯ ಅರಿವು ನನಗಿದೆ. ಈಗಾಗಲೇ 124 ತಾಲೂಕುಗಳು ಬರ ಘೋಷಣೆಯಾಗಿದೆ. 200 ತಾಲೂಕು ಘೋಷಣೆಯಾಗುವ ಸಾಧ್ಯಗೆ ಇದೆ. ಈ ಬಗ್ಗೆ ಅಗತ್ಯ ವರದಿಗಳು ಬರುತ್ತಿವೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಮಾಜಿ ಸಚಿವ ಎಚ್.ಕೆ.ಪಾಟೀಲರು ಗದಗ ಜಿಲ್ಲೆಯನ್ನು ಬರ ಎಂದು ಘೋಷಣೆ ಮಾಡದೇ ಇದ್ದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ ಎಂಬ ಹೇಳಿಕೆ ಬಗ್ಗೆ ಅವರು ಪ್ರತಿಕ್ರಿಯೆ ನೀಡಿದರು.

### ಅಧಿವೇಶನ ಸಮಯ ವ್ಯರ್ಥ

ವಿರೋಧ ಪಕ್ಷಗಳು 10 ದಿನ ಅಧಿವೇಶನದ ಸಮಯ ವ್ಯರ್ಥ ಮಾಡಿದರು. ಅವರಿಗೆ ಸಮಯದ ಬೆಲೆ ತಿಳಿದಿಲ್ಲ. ರಾಜಕಾರಣ ಮಾಡುವುದು ಮಾತ್ರ ಅವರಿಗೆ ಗೊತ್ತು. ನಾನು ಕ್ಯಾಬಿನೆಟ್ ಸಭೆ ಕರೆದು ತೀರ್ಮಾನ ಮಾಡಬಹುದಿತ್ತು. ಆದರೆ ಹಾಗೆ ಮಾಡಲಿಲ್ಲ. ನಾಡಿನ ಜನರ ಸಮಸ್ಯೆ ಏನು ಅಂತ ತಿಳಿಯಬೇಕಿತ್ತು. ಸರ್ಕಾರ ಜನರ ದನಿಯಾಗಬೇಕು. ಜನರ ಮಾತಿಗೆ, ಅವರ ಬಾವನೆ ಬೆಲೆ ಕೊಡಬೇಕು ಅಂತ ವಿಶೇಷ ಅಧಿವೇಶನ ಆಯೋಜಿಸಿ ಚರ್ಚೆಗೆ ಕರೆದಿದ್ದೇನೆ ಎಂದು ಸಿಎಂ ತಿಳಿಸಿದರು.

## ನಿವೃತ್ತ ಅಧಿಕಾರಿಗೆ ಲೋಕಾಯುಕ್ತ ಶಾಕ್

**ಮಂಡ್ಯ:** ಆದಾಯ ಮೀರಿ ಆಸ್ತಿ ಗಳಿಕೆ ಆರೋಪದ ಮೇಲೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವಸತಿ ನಿಲಯದ ನಿವೃತ್ತ ಅಧೀಕ್ಷಕ ಎಂ.ಶಿವರಾಜು ಅವರ ಮನೆ ಮತ್ತು ಫಾರ್ಮ್‌ಹೌಸ್ ಮೇಲೆ ಏಕಕಾಲದಲ್ಲಿ ಮಂಡ್ಯ ಲೋಕಾಯುಕ್ತ ಪೊಲೀಸರು ಮಂಗಳವಾರ ದಾಳಿ ನಡೆಸಿದರು.

ಮದ್ದೂರು ವಿನಾಯಕ ಬಡಾವಣೆಯಲ್ಲಿ 3 ವರ್ಷಗಳ ಹಿಂದೆ ಕಟ್ಟಿಸಿರುವ ಮೂರಂತಸ್ತಿನ ಭವ್ಯ ಬಂಗಲೆ ಹಾಗೂ ತಾಲ್ಲೂಕಿನ ಕೆಸ್ತೂರು ಬಳಿಯ ಅವಸರದಹಳ್ಳಿಯ ಫಾರ್ಮ್ ಹೌಸ್ ಅಲ್ಲಿ ಲೋಕಾಯುಕ್ತ ಪೊಲೀಸರು ತಪಾಸಣೆ ಮಾಡಿದರು.

ಮನೆಯಲ್ಲಿ 2.50 ಲಕ್ಷ ನಗದು, 600 ಗ್ರಾಂ ಚಿನ್ನಾಭರಣ, 2 ಕಾರುಗಳು ಪತ್ತೆಯಾಗಿವೆ. 5 ನಿವೇಶನ, 2 ಮನೆ, 2 ವಾಣಿಜ್ಯ ಕಟ್ಟಡಗಳು, 1 ಫಾರ್ಮ್‌ಹೌಸ್, 6 ಎಕರೆ ಕೃಷಿಭೂಮಿ ಸೇರಿದಂತೆ ಒಟ್ಟು 2.71 ಕೋಟಿ ಆಸ್ತಿ ಪತ್ತೆಯಾಗಿದೆ.





### ಹಾಸ್ಟೆಲ್ ಸಾಮಗ್ರಿ ಪತ್ತೆ

ಫಾರ್ಮ್‌ಹೌಸ್‌ನಲ್ಲಿ ಮಿನಿ ಬಾರ್ ಮಾದರಿಯಲ್ಲಿ ದುಬಾರಿ ಬೆಲೆಯ ಮದ್ಯದ ಬಾಟಲಿಗಳನ್ನು ಶೇಖರಿಸಿಟ್ಟಿರುವುದು ಕಂಡುಬಂದಿದೆ. ಅಲ್ಲದೇ, ಹಾಸ್ಟೆಲ್‌ನ ಬಡ ಮಕ್ಕಳಿಗೆ ವಿತರಿಸಬೇಕಿದ್ದ ಸರ್ಕಾರಿ ಪಠ್ಯಪುಸ್ತಕ, ನೋಟ್ ಪುಸ್ತಕ, ಹಾಸಿಗೆ, ಬೆಡ್‌ಶೀಟ್‌ಗಳು, ಕೊಬ್ಬರಿ ಎಣ್ಣೆ ಡಬ್ಬಿಗಳೂ ಸೇರಿದಂತೆ ಹಲವು ಹಾಸ್ಟೆಲ್ ಸಾಮಗ್ರಿಗಳು ಸಿಕ್ಕಿವೆ. ಸೋಮನಹಳ್ಳಿ ಮತ್ತು ಬೆಸಗರಹಳ್ಳಿಯ ಹಾಸ್ಟೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸಿದ್ದ ಶಿವರಾಜು ಒಂದು ತಿಂಗಳ ಹಿಂದಷ್ಟೇ ನಿವೃತ್ತರಾಗಿದ್ದಾರೆ. ಮಂಡ್ಯ ಲೋಕಾಯುಕ್ತ ಪೊಲೀಸ್ ವರಿಷ್ಠಾಧಿಕಾರಿ ಸುರೇಶ್ ಬಾಬು ನೇತೃತ್ವದಲ್ಲಿ ದಾಳಿ ನಡೆದಿದೆ.

## ಶಿವಲಿಂಗೇಗೌಡ ವಿರುದ್ಧ ಲೋಕಾಯುಕ್ತಕ್ಕೆ ದೂರು



**ಮೈಸೂರು:** ಅಧಿಕಾರಿಗಳಿಗೆ ಗೌರವಯುತವಾಗಿ ಲಂಚ ಕೊಡುವುದು ನಿಮ್ಮ ಧರ್ಮ ಎಂಬ ಸಚಿವ ಶಿವಲಿಂಗೇಗೌಡರ ಹೇಳಿಕೆ ಭಾರೀ ವಿವಾದ ಸೃಷ್ಟಿಸಿರುವ ಬೆನ್ನಲ್ಲಿಯೇ, ಮೈಸೂರಿನ ವಾಯ್ಸ್ ಆಫ್ ಪೀಪಲ್ ಸಂಸ್ಥೆ ಸಚಿವ ಶಿವಲಿಂಗೇಗೌಡ ವಿರುದ್ಧ ಲೋಕಾಯುಕ್ತಕ್ಕೆ ದೂರು ನೀಡಿದೆ. ಸಚಿವ ಸ್ಥಾನಕ್ಕೆ ರಾಜೀನಾಮೆಗೆ ಆಗ್ರಹಿಸಿದ್ದಾರೆ.

ನಿಮ್ಮ ಕೆಲಸ ಆದ ನಂತರ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ಧರ್ಮ ಎಂದು ಸಚಿವ ಶಿವಲಿಂಗೇಗೌಡ ಹೇಳಿಕೆ ನೀಡಿದ್ದ ಹೇಳಿಕೆ ವೈರಲ್ ಆಗಿತ್ತು. ಪುಟ 2ಕ್ಕೆ

## 'ವಂದೇ ಮಾತರಂ' 2 ಚರಣಕ್ಕೆ: ರಾಜ್ಯಪಾಲ ಗೆಹ್ಲೋಟ್ ಆಕ್ಷೇಪ

### ಕೇಂದ್ರದ ಆದೇಶ ಪಾಲಿಸುವಂತೆ ರಾಜ್ಯಕ್ಕೆ ಪತ್ರ

**ಬೆಂಗಳೂರು:** ರಾಜ್ಯ ಸರ್ಕಾರದ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವಂತೆ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಈ ನಿರ್ಧಾರವನ್ನು ಮರುಪರಿಶೀಲಿಸುವಂತೆ ಸರ್ಕಾರಕ್ಕೆ ನಾಲ್ಕು ಪುಟಗಳ ಪತ್ರ ಬರೆದಿದ್ದಾರೆ.

ರಾಜ್ಯ ಸರ್ಕಾರದ ಈ ನಿರ್ಧಾರವು ಕೇಂದ್ರ ಗೃಹ ಸಚಿವಾಲಯದ ಮಾರ್ಗದರ್ಶಿ ಸೂತ್ರಗಳಿಗೆ ಮತ್ತು 'ರಾಷ್ಟ್ರೀಯ ಗೌರವಕ್ಕೆ ಅಪಮಾನ ತಡೆ (ತಿದ್ದುಪಡಿ) ಕಾಯ್ದೆ, 2026ರ ನಿಯಮಗಳಿಗೆ ವಿರುದ್ಧವಾಗಿದೆ ಎಂದು ರಾಜ್ಯಪಾಲರು ಉಲ್ಲೇಖಿಸಿದ್ದಾರೆ.

ಸಂವಿಧಾನದ ವಿಧಿ 162, 256 ಮತ್ತು 257(1)ರ ಪ್ರಕಾರ ರಾಜ್ಯಗಳು ಕೇಂದ್ರದ ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಯಾವುದೇ ಪ್ರತ್ಯೇಕ ನಿರ್ಧಾರ ತೆಗೆ



ದುಕೊಳ್ಳುವುದು ಸಂವಿಧಾನಾತ್ಮಕ ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ರಾಷ್ಟ್ರೀಯ ಸಂಕೇತಗಳ ವಿಷಯದಲ್ಲಿ ಏಕರೂಪತೆ ಮತ್ತು ಗೌರವಬವನ್ನು ಕಾಯ್ದುಕೊಳ್ಳಬೇಕು. ಈ ವಿಷಯದಲ್ಲಿ ಅನಗತ್ಯ ಕಾನೂನು ತೊಡಕು ತಪ್ಪಿಸಲು ಕೇಂದ್ರ ಸರ್ಕಾರದ ಪ್ರಸ್ತುತ ನೀತಿಯನ್ನೇ ಅನುಸರಿಸಬೇಕು ಎಂದು ಸಲಹೆ ನೀಡಿದ್ದಾರೆ.

ರಾಜ್ಯ ಸರ್ಕಾರ ಸೆಪ್ಟೆಂಬರ್ 8ರಂದು ಸರ್ಕಾರಿ ಕಾರ್ಯಕ್ರಮಗಳಲ್ಲಿ ವಂದೇ ಮಾತರಂ ಗೀತೆಯ ಮೊದಲ ಎರಡು ಚರಣಗಳನ್ನು ಮಾತ್ರ ಹಾಡುವಂತೆ ಆದೇಶಕ್ಕೆ ಹೊರಡಿಸಿತ್ತು.

## ಸರ್ಕಾರದಲ್ಲಿ ಹೊಸ ಘೋಷಣೆಗೆ ಹಣವಿಲ್ಲ!

### ಸಿಎಂ ಡಿ.ಕೆ.ಶಿವಕುಮಾರ್ ನಿರ್ಧಾರಗಳಿಗೆ ಆರ್ಥಿಕ ಇಲಾಖೆ ತಡೆ

**ಬೆಂಗಳೂರು:** ರಾಜ್ಯದ ಸಾಲದ ಪ್ರಮಾಣ ಹೆಚ್ಚಾಗಿರುವುದರಿಂದ ಹೊಸ ಘೋಷಣೆಗಳನ್ನು ಮಾಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಆರ್ಥಿಕ ಇಲಾಖೆ ತಿಳಿಸಿದೆ.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದ ನಂತರ ಘೋಷಣೆ ಮಾಡಿರುವ ಎಲ್ಲ ವಿಚಾರಗಳಿಗೂ ತಡೆ ನೀಡಿರುವುದಾಗಿ ಹೇಳಿದೆ. ಹೊಸ ಯೋಜನೆಗಳಿಗೆ ಅನುದಾನ ನೀಡಲು ಕೂಡ ಹಣವಿಲ್ಲ. ರಾಜ್ಯ ಸರ್ಕಾರವು 2 ಲಕ್ಷ ಕೋಟಿಗೂ ಹೆಚ್ಚಿನ ಮೊತ್ತದ ಬಾಕಿ ಇರುವ ಕಾಮಗಾರಿಗಳನ್ನು ಹೊಂದಿದೆ ಎಂದು ಹೇಳುವ ಮೂಲಕ ಸಿಎಂ ಡಿಕೆಶಿ ಅವರ



ಬಳಿಯಲ್ಲಿಯೇ ಇರುವ ಆರ್ಥಿಕ ಇಲಾಖೆ ಸಿಎಂಗೆ ಶಾಕ್ ನೀಡಿದೆ.

### ಯೋಜನೆ ಘೋಷಣೆ ಬಗ್ಗೆ ನನಗೂ ಗೊತ್ತಿದೆ: ಡಿಕೆಶಿ

ಸರ್ಕಾರದ ಹಿತಕ್ಕಾಗಿ ಆರ್ಥಿಕ ಇಲಾಖೆ ಸಲಹೆ ನೀಡಿದೆ. ಹಣಕಾಸು ಸಚಿವನಾಗಿ ನನಗೆ ಯಾವ ಯೋಜನೆಯನ್ನು ನಿಲ್ಲಿಸಬೇಕು, ಯಾವ ಯೋಜನೆ ಸೇರಿಸಬೇಕು ಎನ್ನುವುದು ತಿಳಿದಿದೆ. ಎಲ್ಲಾ ಬೆಲೆಗಳು ಗಗನಕ್ಕೆ ಏರಿಕೆಯಾಗಿವೆ. ಜನರ ಆದಾಯ ಕುಸಿದು ಹೋಗಿದೆ. ಹಾಗಾಗಿ 5 ಗ್ಯಾರಂಟಿಗಳನ್ನು ಕೊಟ್ಟಿದ್ದೇವೆ. ರೈತರು, ಜನರ ಬದುಕಿಗೆ ನೆರವಾಗುತ್ತಿದ್ದೇವೆ. ಕರ್ನಾಟಕ ಅಭಿವೃದ್ಧಿಯಲ್ಲಿ ಮುಂದಿದೆ ಎಂದು ಮುಖ್ಯಮಂತ್ರಿ ಡಿಕೆಶಿ ಹೇಳಿದರು. ಸರ್ಕಾರದ ಸಾಲ ಜಾಸ್ತಿ ಆಗಿರುವುದರಿಂದ ಹೊಸ ಯೋಜನೆ ಘೋಷಣೆ ಮಾಡಲಿಕ್ಕೆ ಆಗುತ್ತಿಲ್ಲ. ಆರ್ಥಿಕ ಇಲಾಖೆ ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದೆಯೇ ಎಂಬ ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ್ದಾರೆ.

### ರಾಜ್ಯ ಸರ್ಕಾರ ಪಾಪರ್: ಆರ್.ಅಶೋಕ್ ಲೇವಡಿ

**ಬೆಂಗಳೂರು:** ರಾಜ್ಯದ ಆರ್ಥಿಕ ಇಲಾಖೆಗೆ ಬರ ಬಂದಿದೆ. ಸರ್ಕಾರದ ಖಜಾನೆ ಖಾಲಿಯಾಗಿ ಪಾಪರ್ ಆಗಿರುವಂತಹ ಬರ ಎದುರಾಗಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಲೇವಡಿ ಮಾಡಿದ್ದಾರೆ.

ವಿಧಾನ ಸಭೆಯಲ್ಲಿ ಬರದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಅವರು, ರಾಜ್ಯದ ಹಣಕಾಸು ಸ್ಥಿತಿ ಬಗ್ಗೆ ಆರ್ಥಿಕ ಇಲಾಖೆ ಪತ್ರದಿಂದ ಸರ್ಕಾರದ ಮಾರ್ಯಾದೆ ಬಟಾಬಯಲಾಗಿದೆ ಎಂದು ಟೀಕಿಸಿದರು.

ಆರ್ಥಿಕ ಇಲಾಖೆಯವರು ಸರ್ಕಾರದ ಮಾನ ಮಾರ್ಯಾದೆ ಹರಾಜು ಹಾಕಿ ಬಿಟ್ಟಿದ್ದಾರೆ. ಸಾಲ ಮಾಡಲು ಕೂಡ ಅರ್ಹತೆ ಕಳೆದುಕೊಂಡಿದೆ ಎಂದು ಆರ್ಥಿಕ ಇಲಾಖೆ ಪುಟ 2ಕ್ಕೆ

## ಕಪಾಳ ಮೋಕ್ಷಕ್ಕೆ ಕ್ಷಮೆ: ಶಾಸಕ ಪುತ್ರಿಗೆ ಜಾಮೀನು



**ಮಂಡ್ಯ:** ಮಹಿಳಾ ಪಿಎಸ್‌ಐಗೆ ಕಪಾಳ ಮೋಕ್ಷ ಮಾಡಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಸುರೇಶ್‌ಗೌಡ ಪುತ್ರಿ ಐಶ್ವರ್ಯ ಗೌಡಗೆ ಮಂಗಳವಾರ ಹೈಕೋರ್ಟ್ ನಿರೀಕ್ಷಣಾ ಜಾಮೀನು ನೀಡಿದೆ.

ಮಹಿಳಾ ಪೊಲೀಸ್ ಅಧಿಕಾರಿ ಬಳಿ ಕ್ಷಮೆ ಕೇಳಿದರೆ ಮಾತ್ರ ನಿರೀಕ್ಷಣಾ ಜಾಮೀನು ಅರ್ಜಿ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿತ್ತು. ಹೀಗಾಗಿ ಐಶ್ವರ್ಯ ಗೌಡ ಮಂಗಳವಾರ ವಿಡಿಯೋ ಮೂಲಕ ಕ್ಷಮೆ ಕೇಳಿದ ನಂತರ ಪುಟ 2ಕ್ಕೆ

## ಹೈಕೋರ್ಟ್‌ಗೆ ನಟ ದರ್ಶನ್ ಪರ ಪತ್ನಿ ವಿಜಯಲಕ್ಷ್ಮಿ ಅರ್ಜಿ ಸಲ್ಲಿಕೆ

**ಬೆಂಗಳೂರು:** ರೇಣುಕಾಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರದೋಷ್ ಮಾಫಿ ಸಾಕ್ಷಿ ಆದೇಶವನ್ನು ಪ್ರಶ್ನಿಸಿ ನಟ ದರ್ಶನ್ ಪರ ಪತ್ನಿ ವಿಜಯಲಕ್ಷ್ಮಿ ಹೈಕೋರ್ಟ್‌ಗೆ ಮಂಗಳವಾರ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ಪ್ರಕರಣದ 14ನೇ ಆರೋಪಿ ಪ್ರದೋಷ್ ಮಾಫಿ ಸಾಕ್ಷಿಯಾಗಲು ವಿಚಾರಣಾ ನ್ಯಾಯಾಲಯ ಅನುಮತಿ ನೀಡಿ ಆದೇಶ ಹೊರಡಿಸಿತ್ತು. ಈ ಆದೇಶವನ್ನು ರದ್ದುಪಡಿಸಬೇಕೆಂದು ದರ್ಶನ್ ಪರವಾಗಿ ಮತ್ತೊಮ್ಮೆ ಹೈಕೋರ್ಟ್‌ಗೆ ಮನವಿ ಮಾಡಿದ್ದಾರೆ.

ನಟ ದರ್ಶನ್ ವಿರೋಧಿಗಳ ಪ್ರಭಾವ ಮತ್ತು ಚಿತಾವಣೆಗೆ ಒಳಗಾಗಿ, ಪ್ರದೋಷ್ ಸ್ವಾರ್ಥಕ್ಕಾಗಿ ಮಾಫಿ ಸಾಕ್ಷಿಯಾಗಲು ಅರ್ಜಿ ಸಲ್ಲಿಸಿದ್ದಾರೆ. ಕಳೆದ 2 ವರ್ಷಗಳಿಂದ ಯಾವುದೇ ಅರ್ಜಿ ಸಲ್ಲಿಸದೆ, ಈಗ ದಿಢೀರನೆ ಮಾಫಿ ಸಾಕ್ಷಿಯಾಗಲು ಮುಂದಾಗಿರುವುದು ಅನುಮಾನಾಸ್ಪದವಾಗಿದೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಸದ್ಯ ಜೈಲಿನಲ್ಲಿರುವ ಪ್ರದೋಷ್ ಅನಧಿಕೃತವಾಗಿ ಮೊಬೈಲ್ ಬಳಸಿ ತಮ್ಮ ಪತ್ನಿಯೊಂ





ದಿಗೆ ಸಂಪರ್ಕದಲ್ಲಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಎನ್‌ಸಿಆರ್ ದಾಖಲಾಗಿದೆ. ತನಿಖೆ ನಡೆಯುತ್ತಿದೆ ಎಂದು ಕೂಡ ಅರ್ಜಿಯಲ್ಲಿ ತಿಳಿಸಲಾಗಿದೆ.

ಈ ಅನಧಿಕೃತ ಮೊಬೈಲ್ ಅನ್ನೇ ಬಳಸಿ ಮಾಫಿ ಸಾಕ್ಷಿಯಾಗಲು ಒಪ್ಪಿದ್ದಾರೆ ಎಂಬ ಶಂಕೆ ವ್ಯಕ್ತವಾಗಿದೆ. ಈ ವಿಚಾರವಾಗಿ ವಿಚಾರಣಾ ನ್ಯಾಯಾಲಯಕ್ಕೆ ಸಲ್ಲಿಸಿದ್ದ ಮೆಮೊವನ್ನು ಪರಿಗಣಿಸದೆ ಆದೇಶ ಹೊರಡಿಸಲಾಗಿದೆ. ಮಾಫಿ ಸಾಕ್ಷಿಗೆ ಒಪ್ಪಿಗೆ ನೀಡಿರುವ ಆದೇಶವನ್ನು ರದ್ದುಗೊಳಿಸಬೇಕು ಎಂದು ಮನವಿ ಮಾಡಲಾಗಿದೆ.

## ಸರ್ಕಾರದ ನಿರ್ಣಯಗಳೇನು?

**ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿ ಕೇವಲ ಅಧಿಸೂಚಿತ ಅರಣ್ಯ ಪ್ರದೇಶಗಳು, ಇತರೆ ಅರಣ್ಯ ಪ್ರದೇಶಗಳು ಮಾತ್ರ ಸೇರಿಸಬೇಕು. ಈಗಾಗಲೇ ಮಂಜೂರಾದ ಪ್ರದೇಶ ಹೊರತುಪಡಿಸಬೇಕು.**

- ಕೃಷಿ ಭೂಮಿ, ತೋಟಗಾರಿಕೆ/ಪ್ಲಾಂಟೇಶನ್ ಪ್ರದೇಶಗಳು, ಜನವಸತಿ ಮತ್ತು ಸಾರ್ವಜನಿಕ ಚಟುವಟಿಕೆ ಪ್ರದೇಶಗಳನ್ನು ಸೇರಿಸಬಾರದು.
- ಬಗರ್ ಹುಕುಂ, ಅರಣ್ಯ ಹಕ್ಕು, ಡೀಮ್ಡ್ ಫಾರೆಸ್ಟ್, ಭೂ ಮಂಜೂರಾತಿ, ಮೇಲ್ಮನವಿ ಮತ್ತು ನ್ಯಾಯಾಂಗ ಪ್ರಕರಣಗಳನ್ನು ಪರಿಗಣಿಸಬೇಕು.
- ತಜ್ಞರ ಸಮಿತಿಯಿಂದ ಭೌತಿಕವಾಗಿ ಅರಣ್ಯಗಡಿ, ಜನವಸತಿ, ಪರಿಸರ ಸೂಕ್ಷ್ಮ ಪ್ರದೇಶಗಳನ್ನು, ಜನವಸತಿ ಕೃಷಿ ಚಟುವಟಿಕೆ ಪ್ರದೇಶಗಳನ್ನು ಸರ್ವೆ ನಂಬರ್‌ವಾರು ಅಳತೆ ಮಾಡಿ ಪ್ರತ್ಯೇಕವಾಗಿ ಗುರುತಿಸಬೇಕು.
- ಪರಿಸರ ಸೂಕ್ಷ್ಮ ವಲಯದಿಂದ ರೈತರ ಹಾಗೂ ಕಾರ್ಮಿಕರ ಪರ್ಯಾಯ ಜೀವನೋಪಾಯ ಮತ್ತು ಆರ್ಥಿಕ ನೆರವನ್ನು ನೀಡಲು ಸೂಕ್ತ ಮಾರ್ಗಸೂಚಿ ರೂಪಿಸಬೇಕು.
- ಸರ್ಕಾರವು ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲು ತೀರ್ಮಾನಿಸಿದೆ.
- ಈ ಸಮಿತಿಯಲ್ಲಿ ಕಂದಾಯ ಅಧಿಕಾರಿಗಳು, ಅರಣ್ಯಾಧಿಕಾರಿಗಳು, ರೈತ ಸಮುದಾಯದ ಪ್ರತಿನಿಧಿಗಳು, ಕೈಗಾರಿಕಾ ಉದ್ಯಮಗಳ ಪ್ರತಿನಿಧಿಗಳು, ಅರಣ್ಯ ಮತ್ತು ಪರಿಸರಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪರಿಣತಿ ಹೊಂದಿರುವ ಶೈಕ್ಷಣಿಕ ಸಂಸ್ಥೆಗಳ ತಜ್ಞರು/ವಿಜ್ಞಾನಿಗಳು ಇರಲಿದ್ದಾರೆ.
- ಕಸ್ತೂರಿ ರಂಗನ್ ವರದಿಯ ನ್ಯೂನತೆಗಳನ್ನು ಸರಿಪಡಿಸಿ ಸೂಕ್ತ ಮಾರ್ಪಾಡುಗಳನ್ನು ಸೂಚಿಸಲು ಕ್ರಮಕೈಗೊಳ್ಳಲಾಗುವುದು. ಭೌತಿಕವಾಗಿ ಸರ್ವೆ ನಂಬರ್‌ವಾರು ಅಳತೆಯನ್ನು ರಾಜ್ಯ ಸರ್ಕಾರ ಮಾಡಲು ನಿರ್ಧರಿಸಲಾಗಿದೆ. ಪುಟ 2ಕ್ಕೆ

# ಕೇಂದ್ರದ ಬಳಿಗೆ ಸರ್ವಪಕ್ಷ ನಿಯೋಗ

## ಕಸ್ತೂರಿ ರಂಗನ್ ವರದಿ ಜಾರಿಗೆ ವಿರೋಧ: ಸಿಎಂ ಡಿಕೆಶಿ ಘೋಷಣೆ

**ಬೆಂಗಳೂರು:** ಕಸ್ತೂರಿ ರಂಗನ್ ವರದಿ ಜಾರಿಗೆ ಕೇಂದ್ರ ಸರ್ಕಾರ ಹೊರಡಿಸಿರುವ 7ನೇ ಕರಡು ಅಧಿಸೂಚನೆ ವಿರೋಧಿಸಿ ರಾಜ್ಯ ಸರ್ಕಾರ ನಿರ್ಣಯಗಳನ್ನು ಕೈಗೊಂಡಿದೆ.

ಕಸ್ತೂರಿ ರಂಗನ್ ವರದಿಯನ್ನು ಸಮಗ್ರ ಪರಿಶೀಲನೆ ನಡೆಸುವರೆಗೆ ಜಾರಿ ಮಾಡದಂತೆ ಕೇಂದ್ರಕ್ಕೆ ಮನವಿ ಸಲ್ಲಿಸಲಾಗುವುದು. ಈ ಬಗ್ಗೆ ಸದ್ಯದಲ್ಲೇ ಕೇಂದ್ರಕ್ಕೆ ಸರ್ವಪಕ್ಷ ನಿಯೋಗ ಕೊಂಡೊಯ್ಯಲು ತೀರ್ಮಾನಿಸಲಾಗಿದೆ ಎಂದು ವಿಧಾನಸಭೆ ಅಧಿವೇಶನದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಘೋಷಿಸಿದರು.

ಕಸ್ತೂರಿ ರಂಗನ್ ವರದಿ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಪರಿಸರ ಸೂಕ್ಷ್ಮ ಪ್ರದೇಶಗಳ ಕುರಿತ ಏಳನೇ ಕರಡು ಅಧಿಸೂಚನೆಯನ್ನು ಅದರ ಪ್ರಸ್ತುತ ರೂಪದಲ್ಲಿಯೇ ಸ್ವೀಕರಿಸದಿರಲು ಕರ್ನಾಟಕ ವಿಧಾನಸಭೆ ಮಂಗಳವಾರ ಸರ್ವಾನುಮತದ ನಿರ್ಣಯ ಕೈಗೊಂಡಿದೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಿರ್ಣಯ ಮಂಡಿ



ಸಿದರು. ಜಂಟಿ ಭೌತಿಕ ಸಮೀಕ್ಷೆ ನಡೆಸದೆ ಹಾಗೂ ಸರ್ವೆ ನಂಬರ್‌ಗಳ ಆಧಾರದ ಮೇಲೆ ಪ್ರದೇಶಗಳನ್ನು ಗುರುತಿಸದೆ, ಕೇವಲ ಉಪಗ್ರಹ ದತ್ತಾಂಶದ ಆಧಾರದ ಮೇಲೆ ಗಡಿಗಳನ್ನು ನಿರ್ಧರಿಸಿರುವುದಕ್ಕೆ ವಿಧಾನ ಸಭೆಯಲ್ಲಿ ಆಕ್ಷೇಪ ವ್ಯಕ್ತಪಡಿಸಲಾಯಿತು.

ಪಶ್ಚಿಮ ಘಟ್ಟಗಳು ಕರ್ನಾಟಕದ ಅತ್ಯಂತ ಪ್ರಮುಖ ನೈಸರ್ಗಿಕ ಸಂಪತ್ತುಗಳಲ್ಲಿ ಒಂದಾಗಿದ್ದು, ಜೀವವೈವಿಧ್ಯ ಮತ್ತು ಪರಿಸರ ಸಮತೋಲನಕ್ಕೆ ಅತ್ಯಗತ್ಯವಾಗಿವೆ. ಈ ಏಳನೇ ಕರಡು ಅಧಿಸೂಚನೆಯು ಕರ್ನಾಟಕದ ಹತ್ತು ಜಿಲ್ಲೆಗಳ 1,449 ಹಳ್ಳಿಗಳಲ್ಲಿ ವ್ಯಾಪಿಸಿರುವ ಸುಮಾರು 20,668 ಚದರ ಕಿಲೋಮೀಟರ್ ಪ್ರದೇಶವನ್ನು ಒಳಗೊಂಡಿದೆ.

ಅರಣ್ಯ ಪ್ರದೇಶಗಳ ಜೊತೆಗೆ ಕೃಷಿ ಭೂಮಿ, ತೋಟಗಳು, ಮನೆಗಳು ಮತ್ತು ಸಾರ್ವಜನಿಕ ಸೌಕರ್ಯಗಳನ್ನೂ ಈ ಅಧಿಸೂಚನೆಯಲ್ಲಿ ಸೇರಿಸಿರುವುದರಿಂದ ಸ್ಥಳೀಯ ಜನರಲ್ಲಿ ತೀವ್ರ ಆತಂಕ ಉಂಟಾಗಿದೆ ಎಂದು ವಿಧಾನಸಭೆ ಅಭಿಪ್ರಾಯಪಟ್ಟಿದೆ.

# ಜೆನ್ ಝೀಗಳಿಗೆ ಸಂವಿಧಾನವೇ ದಾರಿಯಾಗಲಿ

## ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಕರೆ । 'ಸಂವಿಧಾನ ಓದು ಅಧ್ಯಯನ ಶಿಬಿರ'

ರಾಮನಗರ: 'ಶಕ್ತಿ, ತ್ಯಾಗ, ಅನ್ಯಾಯದ ವಿರುದ್ಧದ ಗಟ್ಟಿ ದನಿಯ ಪ್ರತೀಕವೇ ದೇಶದ ಜೆನ್ ಝೀ ಯುವಶಕ್ತಿ. ಅವರಿಗೆ ನಮ್ಮ ಸಂವಿಧಾನವೇ ತತ್ವ, ಸಿದ್ಧಾಂತ ಹಾಗೂ ದಾರಿಯಾಗಲಿ. ಸಂವಿಧಾನದ ಸಂಪೂರ್ಣ ಅನುಷ್ಠಾನಕ್ಕೆ ಶ್ರಮಿಸಲಿ. ಆಗಷ್ಟೇ ಯುವಜನರು ಹಾಗೂ ನಾವೆಲ್ಲರೂ ಬಯಸುವ ಕನಸಿನ ಭಾರತ ನಿರ್ಮಾಣ ಸಾಧ್ಯ' ಎಂದು ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ಹೇಳಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸಂವಿಧಾನ ಓದು ಅಭಿಯಾನ – ಕರ್ನಾಟಕ ಹಾಗೂ ಸಮಾನ ಮನಸ್ಕ ಸಂಘಟನೆಗಳು ಶನಿವಾರ – ಭಾನುವಾರ ಹಮ್ಮಿಕೊಂಡಿರುವ ಎರಡು ದಿನಗಳ 'ಸಂವಿಧಾನ ಓದು ಅಧ್ಯಯನ ಶಿಬಿರ'ದ ಉದ್ಘಾಟನಾ ಸಮಾರಂಭದಲ್ಲಿ 'ಸಂವಿಧಾನ ರಚನೆ ಮತ್ತು ಮೂಲತತ್ವಗಳು' ವಿಷಯ ಕುರಿತು ಅವರು ಉಪನ್ಯಾಸ ನೀಡಿದರು.

'ದೇಶದಲ್ಲಿ ಸಂವಿಧಾನ ಮತ್ತು ಪ್ರಜಾಪ್ರಭುತ್ವ ವಿರೋಧಿ ಬೆಳವಣಿಗೆಗಳ ನಡುವೆ ಉದಯಿಸಿರುವ ಜೆನ್ ಝಿ ಯುವಜನರ ಹೋರಾಟವು ಹೊಸ ಭರವಸೆಯ ಆಶಾಕಿರಣ ಮೂಡಿಸಿದೆ. ಅವರ ಸಿದ್ಧಾಂತ ಏನಿರಬೇಕೆಂಬ ಚರ್ಚೆಯೂ ನಡೆಯುತ್ತಿದೆ. ನನ್ನ ಪ್ರಕಾರ ಅವರಿಗೆ ಸಂವಿಧಾನವೇ ಸಿದ್ಧಾಂತವಾಗಬೇಕು' ಎಂದರು.

'ದೇಶದ ಆಡಳಿತ ಯಂತ್ರ ಸ್ವೇಚ್ಛಾಚಾರ ಮಾಡಬಾರದೆಂಬ ಕಾರಣಕ್ಕೆ ಸಂವಿಧಾನ ರೂಪಿಸಿದವರು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳಿಗೆ ತಮ್ಮದೇ ಆದ ಕರ್ತವ್ಯದ ಗಡಿಗಳನ್ನು ಗುರುತಿಸಿ ನೀತಿ ನಿಯಮಗಳನ್ನು ರೂಪಿಸಿದರು. ಯಾವ ಅಂಗವೂ ತಮ್ಮ ವ್ಯಾಪ್ತಿ ಮೀರುವಂತಿಲ್ಲ' ಎಂದರು.

'ಡಾ.ಬಿ.ಆರ್.ಅಂಬೇಡ್ಕರ್ ಅವರು ನಮಗೆ ಸಂವಿಧಾನ ರಚಿಸಿ ಕೊಟ್ಟಿದ್ದಾರೆ. ಎಲ್ಲರಿಗೂ ಸಮಾನ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಕೊಟ್ಟಿರುವ ಸಂವಿಧಾನ ಅರ್ಥವಾಗಬೇಕಾದರೆ ಮೊದಲು ನಾವು ಭಾರತವನ್ನು ಅರಿಯಬೇಕು. ಆ ಹಿನ್ನೆಲೆಯಲ್ಲಿ ಸಂವಿಧಾನವನ್ನು ಎಲ್ಲರಿಗೂ ತಲುಪಿಸಿ ಜಾಗೃತಿ ಮೂಡಿಸುವ ಕೆಲಸವನ್ನು ಅಭಿಯಾನ ಮಾಡುತ್ತಿದೆ. ಸಡಿಲವಾಗುತ್ತಿರುವ ಪ್ರಜಾಪ್ರಭುತ್ವದ ಬೇರುಗಳನ್ನು ಬಲಪಡಿಸಬೇಕಾದರೆ ಸಂವಿಧಾನ ಪ್ರಜ್ಞೆ ಅಗತ್ಯ' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಕೀಲರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೆಂಪಯ್ಯ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆಣೆಗೆರೆ ಕೆ. ಮಲ್ಲಯ್ಯ, ಚನ್ನಪಟ್ಟಣ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಜಗದೀಶ ನಡುವಿನಮಠ, ಅಕ್ಷಯ್ ಪಬ್ಲಿಕ್ ಸ್ಕೂಲ್ ನಿರ್ದೇಶಕ ಎಂ.ಎ. ಕರಣ್ ಆನಂದ್, ಬೇತೆಲ್ ಪಿಯು ಕಾಲೇಜು ಪ್ರಾಂಶುಪಾಲೆ ರೀಟಾ ಮನು, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಆಣೆಗೆರೆ ಕೆ. ಮಲ್ಲಯ್ಯ ವೇದಿಕೆಯಲ್ಲಿದ್ದರು. ಕರ್ನಾಟಕ ರಾಜ್ಯ ಪೌರ ನೌಕರರ ಸಂಘದ ಉಪಾಧ್ಯಕ್ಷ ಆರ್. ನಾಗರಾಜು ಸ್ವಾಗತಿಸಿದರು. ವಿದ್ಯಾರ್ಥಿ ಮುಖಂಡರಾದ ವಿಜಯಕುಮಾರ್ ಟಿ.ಎಸ್ ನಿರೂಪಣೆ, ಚಿರಾಗ್ ಎಸ್.ಕೆ, ದೀಪಿಕಾ ಎಚ್.ಎಸ್ ಹಾಗೂ ನಮ್ಮವರು ಬಳಗದ ಪದ್ಮರೇಖಾ ಗೋಷ್ಠಿಗಳನ್ನು ನಿರ್ವಹಿಸಿದರು. ವಿದ್ಯಾರ್ಥಿಗಳ ಜೊತೆ ಸಂವಾದ ನಡೆಯಿತು. ನಮ್ಮವರು ಬಳಗದ ಎಚ್.ಡಿ. ಉಮಾಶಂಕರ್, ಅಂಕನಹಳ್ಳಿ ಪಾರ್ಥ, ಕೃಷ್ಣ ಎಸ್. ಹಾಗೂ ಇತರರು ಪಾಲ್ಗೊಂಡಿದ್ದರು.



ಡಾ. ಬಿ.ಆರ್. ಅಂಬೇಡ್ಕರ್ ಕೊಟ್ಟ ಸಂವಿಧಾನದ ಮಹತ್ವ ಗೊತ್ತಾಗಬೇಕಾದರೆ ಸ್ವಾತಂತ್ರ್ಯಕ್ಕೂ ಮುಂಚೆ ನಮ್ಮ ಸಮಾಜವನ್ನು ನಿಯಂತ್ರಿಸುತ್ತಿದ್ದ ಮನುಸ್ಮೃತಿಯನ್ನು ಎಲ್ಲರೂ ಅರಿಯಬೇಕು

▸▸ **ಅನಸೂಯಮ್ಮ** ರೈತ ನಾಯಕಿ

ಅಂಬೇಡ್ಕರ್ ಅವರು ಕೊಟ್ಟಿರುವ ಸಂವಿಧಾನ ಮಾತ್ರ ನಮಗೆ ಅಸಮಾನತೆಯಿಂದ ಮುಕ್ತಿ ನೀಡಿ ಸಮ ಸಮಾಜ ನಿರ್ಮಾಣಕ್ಕೆ ದಾರಿ ತೋರಬಲ್ಲದು. ಅದು ಬಿಟ್ಟು ಬೇರಾವುದೇ ಮಾರ್ಗಗಳಿಲ್ಲ

▸▸ **ಶಿವಕುಮಾರಸ್ವಾಮಿ** ಜಿಲ್ಲಾಧ್ಯಕ್ಷ, ದಲಿತ ಸಂಘಟನೆಗಳ ಒಕ್ಕೂಟ

ಸಮಾನತೆಯೇ ಪ್ರಜಾಪ್ರಭುತ್ವದ ಧ್ಯೇಯ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಹಾಗೂ ಸರ್ಕಾರ ಮತ್ತು ನಾಗರಿಕರ ನಡುವಿನ ಸಂಬಂಧವನ್ನು ಪ್ರತಿಯೊಬ್ಬರೂ ಅರ್ಥ ಮಾಡಿಕೊಳ್ಳಬೇಕು

▸▸ **ಕಿಗ್ಗ ರಾಜಶೇಖರ** ಸಂಪನ್ಮೂಲ ವ್ಯಕ್ತಿ

### ಸಂವಿಧಾನ ಯೋಧರಾಗಬೇಕು

'ಸಂವಿಧಾನದ ಆಶಯಗಳನ್ನು ಜನಮನಕ್ಕೆ ತಲುಪಿಸುವ ಜೊತೆಗೆ ಪ್ರಜೆಗಳಿಗೆ ತಮ್ಮ ಹಕ್ಕುಗಳು ಮತ್ತು ಕರ್ತವ್ಯಗಳ ಜಾಗೃತಿ ಮೂಡಿಸುವ ಮಹತ್ವದ ಯಜ್ಞವನ್ನು ನ್ಯಾ. ನಾಗಮೋಹನ ದಾಸ್ ಅವರ ನೇತೃತ್ವದಲ್ಲಿ ದೇಶದಾದ್ಯಂತ ನಡೆಯುತ್ತಿದೆ. ಶಿಬಿರದಲ್ಲಿ ಭಾಗವಹಿಸಿರುವ ಪ್ರತಿಯೊಬ್ಬರೂ ಸಂವಿಧಾನ ಯೋಧರಾಗಿ ಸಮಾಜದಲ್ಲಿ ಜಾಗೃತಿ ಮೂಡಿಸಬೇಕು. ಇಂದು ದೇಶವಿರೋಧಿ ಶಕ್ತಿಗಳು ವಿಜೃಂಭಿಸುತ್ತಿವೆ. ಕೋಮುವಾದ ಹಿಗ್ಗುತ್ತಿದೆ. ಇವೆಲ್ಲವುಗಳನ್ನು ತಡೆಯಲು ಇರುವ ಏಕೈಕ ಅಸ್ತ್ರ ಸಂವಿಧಾನ' ಎಂದು ಶಿಬಿರ ಉದ್ಘಾಟಿಸಿದ ನಗರಸಭೆ ಅಧ್ಯಕ್ಷ ಕೆ. ಶೇಷಾದ್ರಿ ಶಶಿ ಅಭಿಪ್ರಾಯಪಟ್ಟರು.

ಮಹಿಳೆಯರು ಸಂವಿಧಾನವನ್ನು ಸಂಪೂರ್ಣವಾಗಿ ಅರಿಯಬೇಕು. ಹಕ್ಕುಗಳ ಬಗ್ಗೆ ಜಾಗೃತರಾದಾಗ ಮಾತ್ರ ಲಿಂಗಬೇಧ ಮೀರಿ ಎಲ್ಲಾ ಕ್ಷೇತ್ರಗಳಲ್ಲೂ ಸಬಲೀಕರಣ ಹೊಂದಲು ಸಾಧ್ಯ

▸▸ **ಶಾಂತಿ ನಾಗಲಾಪುರ** ಸಂಪನ್ಮೂಲ ವ್ಯಕ್ತಿ

### ವಿದ್ಯಾರ್ಥಿಗಳ ಸಂವಾದ

ಸಂವಿಧಾನ ಓದು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಸಂವಾದದ ವೇಳೆ ರಾಜಕಾರಣಿಗಳಿಗೂ ಸಹ ಶೈಕ್ಷಣಿಕ ಅರ್ಹತೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆ ಯಾಕಿಲ್ಲ? ಎಂದು ಪ್ರಶ್ನಿಸಿದರು. ಶೈಕ್ಷಣಿಕ ಅರ್ಹತೆ ನಿಗದಿಪಡಿಸಿದರೆ ಶೇ 80ರಷ್ಟು ಮಂದಿ ಹೊರಗುಳಿಯಲಿದ್ದಾರೆ. ಹಾಗಾಗಿ ಶೈಕ್ಷಣಿಕ ಅರ್ಹತೆ ನಿಗದಿಪಡಿಸಿಲ್ಲ. ಅದರ ಬದಲು ರಾಜಕೀಯ ಪಕ್ಷಗಳು ವಿದ್ಯಾವಂತರಿಗೆ ಟಿಕೆಟ್ ನೀಡಬೇಕು. ಜನಪ್ರತಿನಿಧಿಗಳಿಗೂ ಪರೀಕ್ಷೆ ವ್ಯವಸ್ಥೆ ಇಂಗ್ಲೆಂಡ್‌ನಲ್ಲಿದೆ. ಇಲ್ಲಿಯೂ ಅಂತಹ ವ್ಯವಸ್ಥೆ ಬರಲಿ ಎಂದು ಆಶಿಸಿದರು.

### ಸಂವಿಧಾನದ ಸಾಕ್ಷರತೆ ಮೂಡಿಸಲು ಸಂವಿಧಾನ ಓದು ಅಭಿಯಾನ

ಪ್ರಾಸ್ತಾವಿಕ ನುಡಿಗಳನ್ನಾಡಿದ ಅಭಿಯಾನದ ಸಂಚಾಲಕ ಬಿ. ರಾಜಶೇಖರಮೂರ್ತಿ, 'ಸುಭದ್ರ ಹಾಗೂ ಪ್ರಗತಿಪರ ಭಾರತ ಕಟ್ಟುವ ಕನಸಿನೊಂದಿಗೆ ಸಂವಿಧಾನದ ಸಾಕ್ಷರತೆ ಮೂಡಿಸಲು 2018ರಲ್ಲಿ ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ನೇತೃತ್ವದಲ್ಲಿ ಸಂವಿಧಾನ ಓದು ಅಭಿಯಾನ ಶುರುವಾಯಿತು' ಎಂದರು.'ಅಭಿಯಾನದ ಹಿನ್ನೆಲೆಯಲ್ಲಿ ದಾಸ್ ಅವರು ಬರೆದಿರುವ ಸಂವಿಧಾನ ಓದು ಕೃತಿಯು ಸುಮಾರು 25 ಲಕ್ಷ ಪ್ರತಿಗಳು ಇದುವರೆಗೆ ಮಾರಾಟವಾಗಿವೆ. ಹಿಂದಿ, ಇಂಗ್ಲಿಷ್ ಸೇರಿದಂತೆ ದೇಶದ 9 ಭಾಷೆಗಳಿಗೆ ಅನುವಾದಗೊಂಡಿದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನ ಕುರಿತು ಪ್ರಬಂಧ ಸ್ಪರ್ಧೆ ಆಯೋಜಿಸಿ ಅರಿವು ಮೂಡಿದಲಾಗುತ್ತಿದೆ' ಎಂದು ಹೇಳಿದರು.



ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ಗಾಂಧಿ ಚೌಕವತಿಯಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ ನಿ.ಗೆ 2025-26 ನೇ ಸಾಲಿನ ಸಹಕಾರ ಶಿಕ್ಷಣನಿಧಿಯ ಚೆಕ್ ಅನ್ನು ಬ್ಯಾಂಕ್ ನ ಅಧ್ಯಕ್ಷ ಜೆ.ಯೋಗೇಶ್ ಕರ್ನಾಟಕ ಇನ್ಸ್ಟಿಟ್ಯೂಟ್ ಆಫ್ ಕೋ- ಆಪರೇಟಿವ್ ಮ್ಯಾನೇಜ್‌ಮೆಂಟ್ ಸಿಬ್ಬಂದಿಗೆ ಹಸ್ತಾಂತರಿಸಿದರು.ಉಪಾಧ್ಯಕ್ಷ ಟಿ.ರವಿ, ನಿರ್ದೇಶಕರಾದ ಎನ್. ಯೋಗಾನಂದ್, ಹೆಚ್.ಹರೀಶ್ ಕುಮಾರ್, ಆರ್.ಸೋಮಣ್ಣ, ಕೆ.ಗಿರೀಶ್, ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿ.ಚಂದ್ರಶೇಖರ, ಪಿ.ರಾಜೇಶ್ವರಿ , ಎಂ. ಪ್ರಮೀಳ ಮತ್ತು ವೃತ್ತಿಪರ ನಿರ್ದೇಶಕ ಸಿ.ಎಸ್. ರಾಮಕೃಷ್ಣಯ್ಯ, ಕಾರ್ಯದರ್ಶಿ ಕೆ.ಹರ್ಷಿತ್ ಗೌಡರವರಿದ್ದರು

ಮೊದಲ ಪುಟದಿಂದ

### ಸರ್ಕಾರದ ನಿರ್ಣಯಗಳೇನು?

- ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಲುವಾಗಿ, ರಾಜ್ಯ ಸರ್ಕಾರವು
- ಕೇಂದ್ರ ಸರ್ಕಾರಕ್ಕೆ ಒಂದು ವರ್ಷದ ಕಾಲಾವಕಾಶ ನೀಡುವಂತೆ ಮನವಿ ಮಾಡಲಿದೆ. ಅದುವರೆಗೆ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದ ಅಧಿಸೂಚನೆಯನ್ನು ಸರ್ಕಾರವು ಅಂತಿಮಗೊಳಿಸಬಾರದು.
- ರಾಜ್ಯ ಸರ್ಕಾರವು ತನ್ನ ವರದಿಯನ್ನು ಸಲ್ಲಿಸಿದ ನಂತರ, ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದೊಂದಿಗೆ ಈ ವಿಷಯದ ಕುರಿತು ವಿವರವಾಗಿ ಚರ್ಚೆ ನಡೆಸಿ, ನಂತರವೇ ಈ ವಿಷಯದಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಬೇಕು.
- ರಾಜ್ಯ ಮಟ್ಟದ ಸಮಿತಿಗೆ ಸಹಾಯ ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಜನಪ್ರತಿನಿಧಿಗಳನ್ನೊಳಗೊಂಡ ಸಮಿತಿಗಳನ್ನು ಸಹ ರಚಿಸಲು ನಿರ್ಧರಿಸಿದೆ.

### ಶಿವಲಿಂಗೇಗೌಡ ವಿರುದ್ಧ ಲೋಕಾಯುಕ್ತಕ್ಕೆ ದೂರು

ಈ ಮೂಲಕ ಅವ್ರು ನೇರವಾಗಿ ಲಂಚ ನೀಡುವಂತೆ ಜನರಿಗೆ ಸಲಹೆ ಕೊಟ್ಟಿದ್ದಾರೆ. ಇವರು ಸಚಿವರಾಗಿರಲು ಲಾಯಕ್ ಅಲ್ಲ. ಈ ಕೂಡಲೇ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ವಾಯ್ಸ್ ಆಫ್ ಪೀಪಲ್ ಮುಖ್ಯಸ್ಥ ವಸಂತ ರಾವ್ ಚೌಹಾಣ್ ಆಗ್ರಹಿಸಿದ್ದಾರೆ.

### ಸಿದ್ದರಾಮಯ್ಯ ಕಾರು ಎತ್ತಂಗಡಿ: ಡಿಸಿಪಿ ಯೋಗೇಶ್‌ಗೆ ತರಾಟೆ

ಪೊಲೀಸ್ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡ ಅವರು, ಅನಗತ್ಯವಾಗಿ ಸಮಸ್ಯೆಗಳನ್ನು ಸೃಷ್ಟಿಸದಂತೆ ಸೂಚಿಸಿದರು. ನಿಮ್ಮ ವಿರುದ್ಧ ಪ್ರಕರಣ ಇದೆ ಎಂಬುದು ನಿಮಗೆ ತಿಳಿದಿದೆ. ಅನಗತ್ಯ ಕೆಲಸಗಳನ್ನು ಮಾಡಬೇಡಿ. ಎಚ್ಚರಿಕೆಯಿಂದ ಇರಿ ಎಂದು ಅವರು ಡಿಸಿಪಿಗೆ ಎಚ್ಚರಿಕೆ ನೀಡಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಡಿಸಿಪಿ ಕ್ಷಮೆಯಾಚಿಸಿದರು.

ಈ ಮಧ್ಯೆ ಗೃಹ ಸಚಿವ ಪ್ರಿಯಾಂಕ್ ಖರ್ಗೆ ಸಹ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸಮಾಧಾನಪಡಿಸಿದರು. ನಂತರ ಪಶ್ಚಿಮ ದ್ವಾರದ ಹತ್ತಿರವೇ ವಾಹನ ನಿಲುಗಡೆಗೆ ಅವಕಾಶ ನೀಡಲಾಗುತ್ತದೆ ಎಂದು ಅಧಿಕಾರಿ ತಿಳಿಸಿದರು.

### ವಿದ್ವಾಂಸ ಪಂ.ಇಂದೂಧರ ನಿರೋಡಿ ನಿಧನ

ಮೈಸೂರು: 'ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಹಿಂದೂಸ್ತಾನಿ ಸಂಗೀತ ಕ್ಷೇತ್ರದ ಬಹು ದೊಡ್ಡ ಸಂಗೀತಗಾರರೂ, ವಿದ್ವಾಂಸ ಪಂ.ಇಂದೂಧರ ನಿರೋಡಿ(91) ಮಹಾರಾಷ್ಟ್ರದ ಪನವೇಲ್‌ನಲ್ಲಿ ನಿಧನರಾದರು.

2002ರಿಂದ ಮೈಸೂರಿನ ಕುವೆಂಪುನಗರ ಮತ್ತು ಸರಸ್ವತಿಪುರಂನಲ್ಲಿ ವಾಸವಿದ್ದ ನಿರೋಡಿ, 80ರ ಇಳಿ ವಯಸ್ಸಿನಲ್ಲಿ ಸಂಗೀತ ಕ್ಷೇತ್ರಕ್ಕೆ ದೊಡ್ಡ ಕೊಡುಗೆಯಾಗಬಲ್ಲ, ಪಂ.ವಿಷ್ಣು ನಾರಾಯಣ ಭಾತಖಂಡೆಯವರ 'ಕ್ರಮಿಕ ಪುಸ್ತಕ ಮಾಲಿಕಾ'ದಲ್ಲಿನ ಎಲ್ಲಾ 1896 ರಚನೆಗಳನ್ನು ಹಾಡಿ, ಮುದ್ರಿಸುವ ಬಹುದೊಡ್ಡ ಕಾರ್ಯವನ್ನು ಇಲ್ಲಿಯೇ ಇದ್ದು ಪೂರ್ಣಗೊಳಿಸಿ, ಇಡೀ ಸಂಗೀತ ಲೋಕ ಕಣ್ಣರಳಿಸುವಂತೆ ಮಾಡಿದ್ದರು. 2014ನೇ ಸಾಲಿನ 'ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ', 2015ರಲ್ಲಿ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶನ ಕಲೆಗಳ ವಿಶ್ವವಿದ್ಯಾಲಯದ 'ಗೌರವ ಡಾಕ್ಟರೇಟ್' ದೊರಕಿದೆ. 2024ರವರೆಗೂ ಮೈಸೂರಿನಲ್ಲೇ ವಾಸವಿದ್ದ ಮೈಸೂರಿನಲ್ಲಿ ಹಿಂದೂಸ್ತಾನಿ ಸಂಗೀತದ ನೆಲೆಯನ್ನು ಭದ್ರಗೊಳಿಸಿದ್ದರು. ಪತ್ನಿ ಪದ್ಮಾವತಿ ನಿರೋಡಿ ಸೇರಿ ಅನೇಕರನ್ನು ಅಗಲಿದ್ದಾರೆ.



# ಗೃಹಲಕ್ಷ್ಮಿ ಇಕೆವೈಸಿಗೆ ದಾಖಲೆ ಬೇಡ

## ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾಹಿತಿ

ಮೈಸೂರು: ಗೃಹಲಕ್ಷ್ಮಿ ಯೋಜನೆ ಮರುಪರಿಶೀಲನೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಅಥವಾ ಮರು ಅರ್ಜಿ ಸಲ್ಲಿಸುವ ಅಗತ್ಯವಿಲ್ಲ. ಯಾವುದೇ ದಾಖಲೆಗಳಿಲ್ಲದೆ ಗೃಹಲಕ್ಷ್ಮಿ ಇಕೆವೈಸಿ ನಡೆಯಲಿದೆ.

ಜಿಲ್ಲಾ ಪಂಚಾಯತ್ ಡಿ.ದೇವರಾಜ್ ಅರಸು ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಗೃಹಲಕ್ಷ್ಮಿ ಮರುಪರಿಶೀಲನಾ ಅರ್ಜಿಯ ಗೊಂದಲಕ್ಕೆ ಸಂಬಂಧಿಸಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ನಾಗರಾಜು ಮಾತನಾಡಿ ಗೃಹಲಕ್ಷಿ ಯೋಜನೆ ಮರುಪರಿಶೀಲನೆಗೆ 250 ಫಲಾನುಭವಿಗೆ ಒಬ್ಬರು ಗಣತಿದಾರರನ್ನು ನೇಮಕ ಮಾಡಲಾಗುವುದು. ಫಲಾನುವಿಗಳು ಇ.ಕೆ.ವೈ.ಸಿ ಮಾಡಿಸಿರಬೇಕು. ಬ್ಯಾಂಕ್ ಖಾತೆಯನ್ನು ಕರ್ನಾಟಕ ರಾಜ್ಯದಲ್ಲಿ ಹೊಂದಿರಬೇಕು ಸೇರಿ ಸರ್ಕಾರ ತಿಳಿಸಿರುವ ಇನ್ನಿತರೆ ಮಾಹಿತಿಯನ್ನು ಸಭೆಗೆ ನೀಡಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅಧ್ಯಕ್ಷ ಎಸ್.ಅರುಣ್ ಕುಮಾರ್ ಕೆ.ಆರ್.ನಗರ ತಾಲ್ಲೂಕಿನಲ್ಲಿ ಬಸ್ ಸಮಸ್ಯೆಗಳು ಪ್ರತಿ ಬಾರಿ ಕೇಳಿ ಬರುತ್ತಿರುವ ಹಿನ್ನೆಲೆಯಲ್ಲಿ ಅದನ್ನು ಸರಿಪಡಿಸುವಂತೆ ಕೆಎಸ್‌ಆರ್‌ಟಿಸಿ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಮರಣ ಹೊಂದಿರುವ 15,724 ಗೃಹಲಕ್ಷ್ಮಿ ಫಲಾನುಭವಿಗಳಿಗೆ ಯೋಜನೆ ರದ್ದು ಪಡಿಸಿ, ಈಗಾಗಲೇ ಮರಣ ಹೊಂದಿ ಅವರ ಖಾತೆಗೆ ಜಮೆಯಾಗಿರುವ 79,86,760 ರೂ ಹಣವನ್ನು ಹಿಂಪಡೆದು ಸರ್ಕಾರಕ್ಕೆ ಜಮೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲಾ ಗ್ಯಾರಂಟಿ ಸಮಿತಿ ಉಪಾಧ್ಯಕ್ಷ ಪ್ರೊ. ಶಿವಕುಮಾರ್ ಮಾತನಾಡಿ, ಮುಖ್ಯಮಂತ್ರಿಗಳ ಭೂ ಗ್ಯಾರಂಟಿ, ನೇಗಿಲಯೋಗಿ, ತೇಗದ ಸಿರಿ ಯೋಜನೆ ಸೇರಿ ವಿವಿಧ ಯೋಜನೆ ಜಾರಿಗೆ ತಂದಿದ್ದು, ಅಧಿಕಾರಿಗಳು ಪಂಚ ಗ್ಯಾರಂಟಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ರೀತಿ ಸರ್ಕಾರ ಜಾರಿಗೆ ತರುವ ಎಲ್ಲಾ ಯೋಜನೆಯನ್ನು ಸಾರ್ವಜನಿಕರಿಗೆ ತಲುಪಿಸಲು ಶ್ರಮಿಸಬೇಕು ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆಯ ಉಪಾಧ್ಯಕ್ಷ ಹುಣಸೂರು ಬಸವಣ್ಣ ಮಾತನಾಡಿ ಗೃಹ ಲಕ್ಷ್ಮಿ ಯೋಜನೆಯ ಮರುಪರಿಶೀಲನೆಗೆ ಸಂಬಂಧಿಸಿದಂತೆ ತಾಲ್ಲೂಕು ಮಟ್ಟದಲ್ಲಿ ಅಂಗನವಾಡಿ ಕಾರ್ಯಕರ್ತೆಯರು ಅಥವಾ ಗಣತಿದಾರರಿಗೆ ತರಬೇತಿ ನೀಡಲಾಗುತ್ತಿದೆ. ಮರುಪರಿಶೀಲನೆ ಕುರಿತು ಸಾರ್ವಜನಿಕರಿಗೆ ಮಾಹಿತಿ ನೀಡಿ ಅಗತ್ಯ ದಾಖಲಾತಿಗಳನ್ನು ಒದಗಿಸುವಂತೆ ಮನವರಿಕೆ ಮಾಡಿಕೊಡಿ ಎಂದರು.

ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಸಾ.ಮಾ.ಯೋಗೇಶ್ ಮಾತನಾಡಿ, ಕೆ.ಆರ್.ನಗರದಲ್ಲಿ ಕಾರ್ಯಕ್ರಮವೊಂದಕ್ಕೆ ಗ್ಯಾರಂಟಿ ಅನುಷ್ಠಾನ ಸಮಿತಿಗೆ ಆಹ್ವಾನ ನೀಡಿಲ್ಲ. ಇದನ್ನು ಪ್ರಶ್ನಿಸಿದ ಸಮಿತಿ ಸದಸ್ಯನಿಗೆ ನಿಮ್ಮನ್ನು ಆಹ್ವಾನಿಸುವ ಶಿಷ್ಠಾಚಾರ ಇಲ್ಲವೆಂದು ಹಾರಿಕೆ ಉತ್ತರ ನೀಡಿದ್ದಾರೆಂದರು. ಮಾತ್ರವಲ್ಲದೆ, ತಮ್ಮನ್ನು ಕರೆಯದಿರುವ ಬಗ್ಗೆ ವಿವರಣೆ ಕೋರಿ ಸಮಿತಿ ಸದಸ್ಯರು ಪತ್ರ ಬರೆದಿದ್ದರೂ ಉತ್ತರ ನೀಡಿಲ್ಲವೆಂದು ದೂರಿದರು. ಇದಕ್ಕೆ ಶೀಘ್ರ ಕ್ರಮವಹಿಸಬೇಕೆಂದು ಸಮಿತಿ ಸದಸ್ಯರು ಆಗ್ರಹಿಸಿ ದನಿಗೂಡಿಸಿದರು. ಅಂತಿಮವಾಗಿ ಜಿಲ್ಲಾ ಮುಖ್ಯ ಯೋಜನಾಧಿಕಾರಿ ಸವಿತಾ ಮಾತನಾಡಿ, ಈ ಸಂಬಂಧ ಕೂಡಲೇ ಇದಕ್ಕೆ ಉತ್ತರ ನೀಡಿ ಅಧಿಕಾರಿಗೆ ಶೋಕಾಸ್ ನೋಟೀಸ್ ನೀಡಲಾಗುವುದು. ಅಧಿಕಾರಿಗಳು ಸರ್ಕಾರದ ಎಲ್ಲಾ ಕಾರ್ಯಕ್ರಮಗಳಿಗೂ ಶಿಷ್ಠಾಚಾರದ ಪ್ರಕಾರ ಗ್ಯಾರಂಟಿ ಸಮಿತಿ ಸದಸ್ಯರನ್ನು ಆಯಾ ಅಧಿಕಾರಿಗಳು ಕರೆಬೇಕೆಂದು ತಿಳಿಸಿದರು. ಜಿಲ್ಲಾ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಸಾ.ಮಾ.ಯೋಗೇಶ್ ಮಾತನಾಡಿ, ತೂಕ ಮಾಪನ ಇಲಾಖೆ ಅಧಿಕಾರಿಗಳು ವರ್ಷಕ್ಕೊಮ್ಮೆ ಮಾಪನ ನವೀಕರಣ ಮಾಡಿ ಸುಮ್ಮನಾದರೆ ಸಾಲದು ಮತ್ತೆ ಅದನ್ನು ಪುನರ್ ಪರಿಶೀಲಿಸುವ ಕೆಲಸ ಮಾಡಬೇಕಿದೆ. ಕೆಲವರು ನವೀಕರಣದ ಬಳಿಕ ಅದನ್ನು ದುರುಪಯೋಗಪಡಿಸಿಕೊಳ್ಳುವ ಕೆಲಸ ಹೆಚ್ಚಾಗಿ ಗ್ರಾಮಾಂತರ ಭಾಗದಲ್ಲಿ ಆಗುತ್ತಿದ್ದು, ಇದನ್ನು ಸರಿಪಡಿಸಬೇಕೆಂದು ಹೇಳಿದರು. ಜಿಲ್ಲಾ ಮುಖ್ಯ ಯೋಜನಾಧಿಕಾರಿ ಸವಿತಾ ಮಾತನಾಡಿ ಪಂಚ ಗ್ಯಾರಂಟಿ ಯೋಜನೆಗಳು ಹೆಚ್ಚು ಜನರಿಗೆ ತಲುಪಿಸಲು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿರುವ ಇಲಾಖೆಗಳು ಫಲಾನುಭವಿಗಳ ಯಶೋಗಾಥೆಯನ್ನು ಗ್ಯಾರಂಟಿ ಯೋಜನೆಯ ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಸದಸ್ಯರಿಗೆ ತಲುಪಿಸುವಂತೆ ತಿಳಿಸಿದರು.

ಸಭೆಯಲ್ಲಿ ಗ್ಯಾರಂಟಿ ಯೋಜನೆ ಸಮಿತಿ ಸದಸ್ಯ ಅಬ್ದುಲ್ ಖಾದರ್, ಚಲುವರಾಜು, ಚಾಮರಾಜು, ಲಲಿತಾ, ಉತ್ತನಳ್ಳಿ ಶಿವಣ್ಣ ಸೇರಿ ಇನ್ನಿತರರು ಉಪಸ್ಥಿತರಿದ್ದರು.



### ಪಡಿತರ ಸಮಸ್ಯೆ ಇತ್ಯರ್ಥಕ್ಕೆ ಹೊಸ ಮಾನದಂಡ

ನಗರದಲ್ಲಿ ಪಡಿತರ ಪಡೆಯಲು ಹಾಗೂ ಪಡಿತರ ಇಕೆವೈಸಿಗೆ ಸಂಬಂಧಿಸಿದಂತೆ ಆಗುತ್ತಿರುವ ಸಮಸ್ಯೆಗಳನ್ನು ಸರಿಪಡಿಸುವ ನಿಟ್ಟಿನಲ್ಲಿ ಯಾವೆಲ್ಲಾ ಕ್ರಮವಹಿಸಿದ್ದೀರಿ ಎಂದು ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಎಸ್.ಅರುಣ್ ಕುಮಾರ್ ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಆಹಾರ ಇಲಾಖೆ ಅಧಿಕಾರಿ ಸರ್ವರ್ ಸಮಸ್ಯೆ ಹೆಚ್ಚಾಗಿದ್ದು, ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಮೈಸೂರು, ಚಾಮರಾಜನಗರ ಹಾಗೂ ಕೊಡಗು ಜಿಲ್ಲೆಗೆ ಸೀಮಿತವಾಗಿ ಪ್ರತ್ಯೇಕ ಸರ್ವರ್ ಮಾಡುವಂತೆ ಸಚಿವರಿಗೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಅಲ್ಲದೆ, ಪಡಿತರ ವಿತರಣೆ ಸಮಯವನ್ನು ಬದಲಿಸಲಾಗಿದ್ದು, ನಿಗಧಿತ ಸಮಯದಲ್ಲಿ ಪಡಿತರ ವಿತರಿಸಬೇಕಿದೆ. ಅಲ್ಲದೆ, ಇಕೆವೈಸಿಗೆ ಸಂಬಂಧಿಸಿದಂತೆ ಹೊಸ ತಂತ್ರಜ್ಞಾನ ಜಾರಿಗೊಳಿಸುವ ನಿಟ್ಟಿನಲ್ಲಿ ಚಿಂತನೆ ನಡೆಯುತ್ತಿದ್ದು, ಅದು ಜಾರಿಗೊಂಡರೆ ಸಮಸ್ಯೆ ಇತ್ಯರ್ಥವಾಗಲಿದೆ ಎಂದರು.

ಮೊದಲ ಪುಟದಿಂದ

### ರಾಜ್ಯ ಸರ್ಕಾರ ಪಾಪರ್: ಆರ್.ಅಶೋಕ್ ಲೇವಡಿ

ಪತ್ರ ಬರೆದಿದೆ. ಕರ್ನಾಟಕ ತೀವ್ರ ಬರ ಎದುರಿಸುತ್ತಿದೆ. ಜನರ ಜೀವನ ತುರ್ತುಸ್ಥಿತಿ ಎದುರಿಸಲು ಹಣದ ಅಗತ್ಯವಿದೆ. ಇದಕ್ಕೆ ಹಣ ಎಲ್ಲಿದೆ ಎಂದು ಪತ್ರ ಬರೆದು ಆರ್ಥಿಕ ಇಲಾಖೆ ಕೇಳಿದೆ. ಹಣ ಹೊಂದಿಸಲು ಇತರ ಇಲಾಖೆಯ ಅನುದಾನ ಕಡಿತ ಮಾಡಬೇಕು ಎಂದಿದೆ ಎಂದು ಪತ್ರದಲ್ಲಿರುವ ಅಂಶಗಳನ್ನು ಉಲ್ಲೇಖಿಸಿ ಸಿಎಂ ಡಿಕೆಶಿ ಕಾಲೆಳೆದರು.

### ಕಪಾಳ ಮೋಕ್ಷಕ್ಕೆ ಕ್ಷಮೆ: ಶಾಸಕ ಪುತ್ರಿಗೆ ಜಾಮೀನು

ಜಾಮೀನು ನೀಡಲಾಗಿದೆ. ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಪೀಠ ಐಶ್ವರ್ಯಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಆಗಸ್ಟ್ 12ರಂದು ಭೀಮನ ಅಮಾವಾಸ್ಯೆಯಂದು ಉಕ್ಕಡಮ್ಮ ದೇವಸ್ಥಾನಕ್ಕೆ ತೆರಳಿದ್ದ ಸಂದರ್ಭದಲ್ಲಿ ನನ್ನ ಮತ್ತು ಮಹಿಳಾ ಪಿಎಸ್‌ಐ ನಡುವೆ ಮಾತಿನ ಚಕಮಕಿ ನಡೆಯಿತು. ಉದ್ವೇಗದಿಂದ ಅಹಿತಕರ ಘಟನೆ ನಡೆದಿದೆ. ಈ ಘಟನೆ ನಡೆಯಬಾರದಿತ್ತು. ಈ ಘಟನೆ ಬಗ್ಗೆ ನಾನು ವಿಷಾದ ವ್ಯಕ್ತಪಡಿಸುತ್ತೇನೆ ಎಂದು ಐಶ್ವರ್ಯ ವಿಡಿಯೋದಲ್ಲಿ ಹೇಳಿದ್ದಾರೆ.

### ನ.24ರಂದು ದೆಹಲಿಯಲ್ಲಿ ಕನ್ನಡಹಬ್ಬ

ಮೈಸೂರು: ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ನ. 24 ರಂದು ದೆಹಲಿಯ ಕರ್ನಾಟಕ ಸಂಘದ ಆವರಣದಲ್ಲಿನ ಸಭಾಂಗಣದಲ್ಲಿ ಕನ್ನಡ ಹಬ್ಬ ಕಾರ್ಯಕ್ರಮ ಆಯೋಜಿಸಿದ್ದು, ಈ ವೇಳೆ ಕನ್ನಡ ವಿಕಾಸ ರತ್ನ ಪ್ರಶಸ್ತಿಗಳನ್ನು ಸಾಧಕರಿಗೆ ಪ್ರದಾನ ಮಾಡಲಾಗುವುದು ಎಂದು ರಾಜ್ಯಾಧ್ಯಕ್ಷೆ ಎಚ್.ಎಲ್. ಯಮುನಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರು ತಮ್ಮ ವಿವರವನ್ನು ಕೆ.ಆರ್. ವೃತ್ತದಲ್ಲಿನ ಸಿಟಿ ಬಸ್ ನಿಲ್ದಾಣದ ಕಟ್ಟಡದ 2 ನೇ ಮಹಡಿಯಲ್ಲಿನ ವೇದಿಕೆ ಕಚೇರಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ.9902698623 ನ್ನು ಸಂಪರ್ಕಿಸಬಹುದಾಗಿದೆ. ಕಾರ್ಯಕ್ರಮದಂದು ಅರ್ಧ ದಿನ ಕುವೆಂಪು ಗೀತೆ, ನೃತ್ಯ ಕಲಾವಿದರ ಪ್ರದರ್ಶನಕ್ಕೆ ಅವಕಾಶ ನೀಡಲಾಗುತ್ತಿದ್ದು, ಆಸಕ್ತರು ಸಹಾ ಇದೇ ವಿಳಾಸ ಅಥವಾ ದೂ. ಮೂಲಕ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ಮಾಹಿತಿ ನೀಡಿದರು. ಸತ್ಯವತಿ, ಇನ್ನಿತರರು ಇದ್ದರು.



### ಸ್ಥಳೀಯ ಸಂಸ್ಥೆ ಚುನಾವಣೆ ನಡೆಸದಿದ್ದರೆ ಹೋರಾಟ

ಮೈಸೂರು: ರಾಜ್ಯ ಸರ್ಕಾರ ಸ್ಥಳೀಯ ಮಟ್ಟದಲ್ಲಿ ಅಭಿವೃದ್ಧಿ ಕುಂಠಿತವಾಗಿರುವ ಕಾರಣ ಸ್ಥಳೀಯ ಸಂಸ್ಥೆಗಳಿಗೆ ಕೂಡಲೇ ಚುನಾವಣೆ ನಡೆಸಬೇಕು. ಇಲ್ಲದಿದ್ದರೆ ಆಮ್ ಆದ್ಮಿ ಪಕ್ಷ ಹೋರಾಟ ಹಮ್ಮಿಕೊಳ್ಳಲಿದೆ ಎಂದು ಎಎಪಿ ರಾಜ್ಯ ಉಸ್ತುವಾರಿ ಹೊತ್ತಿರುವ ದೆಹಲಿ ಮುಖಂಡ ಅನಿಲ್ ಝಾ ಎಚ್ಚರಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸರ್ಕಾರಗಳು ಸ್ವಾಯತ್ತ ಸಂಸ್ಥೆಗಳಲ್ಲಿ ಹಸ್ತಕ್ಷೇಪ ನಡೆಸದೇ ಸಂಪೂರ್ಣ ಸ್ವತಂತ್ರವಾಗಿ ಅಧಿಕಾರ ಚಲಾಯಿಸಲು ಬಿಡಬೇಕು. ಆದರೆ ಇಲ್ಲಿ ಆ ರೀತಿ ನಡೆಯುತ್ತಿಲ್ಲ. ಜೊತೆಗೆ ಚುನಾವಣೆ ನಡೆಸುವುದು ಎಲ್ಲ ಪ್ರಮುಖ ಪಕ್ಷಗಳಿಗೆ ಬೇಡವಾಗಿದೆ. ಅಧಿಕಾರಿಗಳೊಡನೆ ಭ್ರಷ್ಟಾಚಾರದಲ್ಲಿ ತೊಡಗಲು ಸಾಧ್ಯವಾಗದು ಎಂಬುದೇ ಇದಕ್ಕೆ ಕಾರಣವಾಗಿದೆ ಎಂದು ದೂರಿದರು. ಗ್ರಾಪಂಗಳ ಅವಧಿ ಮುಗಿಯುವ ವೇಳೆ ಹೊಸ ಚುನಾವಣೆ ನಡೆಸಬೇಕೆಂಬುದು ಸಂವಿಧಾನದ ನಿಯಮವಾಗಿದೆ. ಆದರೆ ಇಲ್ಲಿ ಆ ರೀತಿ ನಡೆದಿಲ್ಲ. ಹೀಗಾಗಿ ಶೀಘ್ರ ಚುನಾವಣೆ ನಡೆಸದಿದ್ದರೆ ಪಾದಯಾತ್ರೆಯಂತಹ ಹೋರಾಟ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಜಿಲ್ಲಾಧ್ಯಕ್ಷ ಎಲ್. ರಂಗಯ್ಯ, ಇನ್ನಿತರ ಪ್ರಮುಖರಾದ ಸೀತಾರಾಂ ಗುಂಡಪ್ಪ, ಬಸವರಾಜು, ಜಗದೀಶ್ ವಿ. ಸದಂ ಇದ್ದರು.



# ಒಕ್ಕಲಿಗ ಸಮುದಾಯದಕ್ಕೆ ನ್ಯಾಯಯುತ ಸೌಲಭ್ಯ ವಿಸ್ತರಿಸಿ

ಮೈಸೂರು: ರಾಜ್ಯದಲ್ಲಿ ಪ್ರಾದೇಶಿಕ ಹಾಗೂ ಜನಸಂಖ್ಯಾವಾರು ಮೀಸಲಾತಿಯಲ್ಲಿ ಒಕ್ಕಲಿಗರಿಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯಯುತ ಮೀಸಲಾತಿ ನೀಡಬೇಕಿದೆ. ಈ ದಿಸೆಯಲ್ಲಿ ರಾಜ್ಯ



ಸರ್ಕಾರ ಹಾಗೂ ಸಮುದಾಯದ ಸ್ವಾಮೀಜಿಗಳು ಗಮನಹರಿಸಬೇಕೆಂದು ರಾಜ್ಯ ಒಕ್ಕಲಿಗ ಸಂಘದ ನಿಕಟಪೂರ್ವ ಪ್ರದಾನ ಕಾರ್ಯದರ್ಶಿ ಸಿ.ಜಿ.ಗಂಗಾಧರ್ ಒತ್ತಾಯಿಸಿದರು.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾಮಗಾರಿ ಗುತ್ತಿಗೆಯಲ್ಲಿ ಶೇಕಡ 43ರಷ್ಟು ಮೀಸಲಾತಿ ನೀಡಲಾಗಿದ್ದು ಒಕ್ಕಲಿಗ ಜನಾಂಗಕ್ಕೆ ಮೀಸಲಾತಿ ನೀಡಿಲ್ಲವಾಗಿದೆ. ಕೆಐಎಡಿಬಿ ನಿವೇಶನಗಳಲ್ಲಿ ಶೇಕಡ 43ರಷ್ಟು ಮೀಸಲಾತಿ ನೀಡಲಾಗಿದೆ. ಆದರೆ, ಒಕ್ಕಲಿಗರಿಗೆ ಯಾವುದೇ ಮೀಸಲಾತಿ ನೀಡಲಾಗಿಲ್ಲವಾಗಿದೆ ಎಂದರು.

ಹೈದರಾಬಾದ್ ಕರ್ನಾಟಕ ಭಾಗಕ್ಕೆ ಶೇಕಡ 20ರಷ್ಟು ನೇಮಕಾತಿ, ಬಡ್ತಿ ಮತ್ತು ವಿದ್ಯಾಭ್ಯಾಸ ಪ್ರವೇಶಕ್ಕೆ ಮೀಸಲಾತಿ ನೀಡಲಾಗಿದೆ. ಹಳೆ ಮೈಸೂರು ಭಾಗದಲ್ಲಿ ವಾಸವಾಗಿರುವ ಜನಾಂಗಕ್ಕೆ ಅನ್ಯಾಯವಾಗುತ್ತಿದ್ದು ಅದರಲ್ಲೂ ಒಕ್ಕಲಿಗ ಜನಾಂಗಕ್ಕೆ ಅತಿ ಹೆಚ್ಚು ಅನ್ಯಾಯವಾಗುತ್ತಿದೆ. ಒಕ್ಕಲಿಗ ಜನಾಂಗವು ಶೇ.95ರಷ್ಟು ದಕ್ಷಿಣ ಕರ್ನಾಟಕದಲ್ಲಿ ವಾಸವಾಗಿದ್ದು( ದಕ್ಷಿಣ ಕರ್ನಾಟಕ ಭಾಗದ ಒಟ್ಟು ಜನಸಂಖ್ಯೆಯ ಶೇಕಡ 22ರಷ್ಟು) ಶೇಕಡ 4ರಷ್ಟು ಮೀಸಲಾತಿ ನೀಡುತ್ತಿರುವುದರಿಂದ ಜಿಲ್ಲಾ ಮಟ್ಟದ ನೇಮಕಾತಿಗಳು ಮತ್ತು ಸ್ಥಳೀಯ ಸಂಸ್ಥೆಗಳ ಮೀಸಲಾತಿಗಳಲ್ಲಿ ಅನ್ಯಾಯವಾಗುತ್ತಿದೆ. ಉತ್ತರ ಕರ್ನಾಟಕದಲ್ಲಿ ಒಕ್ಕಲಿಗ ಜನಾಂಗ ವಾಸವಾಗಿಲ್ಲವಾದ್ದರಿಂದ ಶೇಕಡ 4ರಷ್ಟು ಮೀಸಲಾತಿ ದುರುಪಯೋಗವಾಗುತ್ತಿದೆ ಎಂದರು. ತಪ್ಪು ರೋಸ್ಟರ್ ಬಿಂದುಗಳನ್ನು ಜಾರಿಗೆ ತಂದು ಒಕ್ಕಲಿಗ ಮತ್ತು ಸಾಮಾನ್ಯ ವರ್ಗದವರಿಗೆ ನೌಕರಿ ಮತ್ತು ವಿದ್ಯಾಭ್ಯಾಸ ಮೀಸಲಾತಿಯಲ್ಲಿ ಅನ್ಯಾಯ ಮಾಡಲಾಗುತ್ತಿದೆ. ಕಳೆದ 30 ವರ್ಷಗಳಿಂದ ಕೊಡವರು ಮತ್ತು ಬಲಿಜಿಗರು ಸೇರಿ ಒಕ್ಕಲಿಗರಿಗೆ ಶೇಕಡ 4ರಷ್ಟು ಮೀಸಲಾತಿಯನ್ನು ಮಾತ್ರ ನೀಡಲಾಗುತ್ತಿದೆ. ಈ ಬಗ್ಗೆ ಮುಂಚೂಣಿಯಲ್ಲಿರುವ ಸಮುದಾಯದ ಸ್ವಾಮೀಜಿಗಳು, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಮುದಾಯದ ಮಾಜಿ ಮುಖ್ಯಮಂತ್ರಿಗಳು, ಸಚಿವ, ಶಾಸಕರು ಮತ್ತು ಒಕ್ಕಲಿಗ ಅಧಿಕಾರಿಗಳು ಕಿಂಚಿತ್ತು ಯೋಚಿಸಿ ಒಕ್ಕಲಿಗ ಜನಾಂಗದ ಬಗ್ಗೆ ಗಮನ ಹರಸಬೇಕೆಂದು ಕೋರಿದ್ದಾರೆ.


**ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ**
ಮೈಸೂರು ಜಿಲ್ಲೆ – 571107, ದೂ: 08223–273036
ಇ–ಮೇಲ್: itstaff_ulb_periyapatna@yahoo.com

**ಸಂಖ್ಯೆ:** ಪಿಪುಸ/ತಾಂತ್ರಿಕಶಾಖೆ/ಜೆಇ2/ಟೆಂಡರ್–08/2026–27 **ದಿನಾಂಕ:** 21.09.2026

**ಟೆಂಡರ್ ಪ್ರಕಟಣೆ**
(ಕೆಪಿಪಿಪಿ ಪೋರ್ಟಲ್ ಮೂಲಕ)

ಈ ಮೂಲಕ ಪ್ರಕಟಿಸುವುದೇನೆಂದರೆ 2026–27ನೇ ಸಾಲಿನ ಪುರಸಭಾ ಅನುದಾನದಡಿ ಪಿರಿಯಾಪಟ್ಟಣ ಪುರಸಭೆಯ ಕಚೇರಿಗೆ ಅವಶ್ಯವಿರುವ Computer Operator ಅನ್ನು ಹೊರಗುತ್ತಿಗೆ ಮೂಲಕ ಸರಬರಾಜು ಮಾಡಲು ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಸಂಸ್ಥೆ / ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಅರ್ಹದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.
ಟೆಂಡರ್ ಸಲ್ಲಿಸುವ ವಿವರ : 1) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **07.10.2026ರ ಸಂಜೆ 4:00 ಗಂಟೆಗೆ** 2) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **09.10.2026ರ ಸಂಜೆ 04:00 ಗಂಟೆಗೆ.**

| ಕ್ರ. ಸಂ. | ಇಂಡೆಂಟ್ ನಂ. | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1 | DMA/2026-27/SE8555 | 5.00 |

**ಸೂಚನೆ:** ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಯ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–
**ಆಡಳಿತಾಧಿಕಾರಿಗಳು,** ಪುರಸಭೆ, ಪಿರಿಯಾಪಟ್ಟಣ
ಮತ್ತು **ಉಪ ವಿಭಾಗಾಧಿಕಾರಿಗಳು**
ಹುಣಸೂರು ಉಪವಿಭಾಗ

ಸಹಿ/–
**ಮುಖ್ಯಾಧಿಕಾರಿ**
ಪುರಸಭೆ, ಪಿರಿಯಾಪಟ್ಟಣ

DIPR/MYS/762/SA/2026-27


ಚುಕ್ಕಿ ನಂಜುಂಡಸ್ವಾಮಿ ಅಭಿಮತ | ಮುಕ್ತ ಸಭಾಂಗಣದಲ್ಲಿ ಸಾಂಸ್ಕೃತಿಕ ವೇದಿಕೆ ಕಾರ್ಯಕ್ರಮ

# ತಮ್ಮೊಳಗಿನ ಅಗಾಧ ಶಕ್ತಿಯನ್ನು ಗುರುತಿಸಿಕೊಳ್ಳಿ

ಮೈಸೂರು: ಹೆಣ್ಣುಮಕ್ಕಳಿಗೆ ತಮ್ಮ ಜೀವನವನ್ನು ರೂಪಿಸಿಕೊಂಡು ಆರ್ಥಿಕವಾಗಿ ಸದೃಢರಾಗುವ ಆಗಾಧ ಶಕ್ತಿ ಹೊಂದಿರುತ್ತಾರೆ. ಜೀವನದಲ್ಲಿ ಗುರಿ ನಿಗಧಿಪಡಿಸಿಕೊಂಡು ಉನ್ನತ ಸಾಧನೆ ಮಾಡಿ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಅಧ್ಯಕ್ಷೀಯ ಮಂಡಳಿ ಸದ್ಯಸರು ಚುಕ್ಕಿ ನಂಜುಂಡಸ್ವಾಮಿ ಹೇಳಿದರು.

ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ವತಿಯಿಂದ ಮುಕ್ತ ಸಭಾಂಗಣದಲ್ಲಿ ಸಾಂಸ್ಕೃತಿಕ ವೇದಿಕೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜ ಅಥವಾ ಕುಟುಂಬ ಏನೇ ಹೇಳಿದರೂ, ಹೆಣ್ಣುಮಕ್ಕಳು ತಮ್ಮೊಳಗಿನ ಅಗಾಧವಾದ ಶಕ್ತಿಯನ್ನು ಗುರುತಿಸಿಕೊಳ್ಳಬೇಕು. ಕೇವಲ ಪದವಿ ಮುಗಿಸಿ ಮದುವೆಯಾಗಿ ಕುಟುಂಬದ ಸೇವೆಯಲ್ಲೇ ಜೀವನ ಕಳೆದುಕೊಳ್ಳುವುದಕ್ಕಿಂತ ಹೆಚ್ಚಾಗಿ, ತಮ್ಮ ಆಸಕ್ತಿ ಇರುವ ವಿಭಾಗದಲ್ಲಿ ಕುತೂಹಲಗಳ ಬೆನ್ನತ್ತಿ ಸಾಗಬೇಕು ಎಂದರು.




ಕೊನೆಯವರೆಗೂ ನಮ್ಮೊಂದಿಗೆ ಉಳಿಯುವುದು ನಾವು ಗಳಿಸಿದ ಜ್ಞಾನ ಮತ್ತು ಅನುಭವ ಮಾತ್ರ. ಅದೇ ನಮ್ಮನ್ನು ಸಮಾಜದಲ್ಲಿ ಸ್ವಾವಲಂಬಿಯಾಗಿ ಎದ್ದು ನಿಲ್ಲುವಂತೆ ಮಾಡುತ್ತದೆ. ಕಾಲೇಜಿನ ಎನ್‌ಎಸ್‌ಎಸ್, ಎನ್‌ಸಿಸಿ, ಕ್ರೀಡೆ, ಸ್ಕೌಟ್ಸ್ ಅಂಡ್ ಗೈಡ್ಸ್ ಹಾಗೂ ರೆಡ್ ಕ್ರಾಸ್‌ನಂತಹ ಚಟುವಟಿಕೆಗಳಲ್ಲಿ ವಿದ್ಯಾರ್ಥಿನಿಯರು ಸಕ್ರಿಯವಾಗಿ ಪಾಲ್ಗೊಂಡು ತಮ್ಮ ವ್ಯಕ್ತಿತ್ವವನ್ನು ಸಮಗ್ರವಾಗಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಗಾಯಕ ಹರ್ಷ ಮಾತನಾಡಿ, ಯತ್ರ ನಾರ್ಯಸ್ತು ಪೂಜ್ಯಂತೆ ರಮಂತೆ ತತ್ರ ದೇವತಾಃ ಎಂಬಂತೆ ಮಹಿಳೆಯರನ್ನು ಗೌರವಿಸುವ ಸ್ಥಳದಲ್ಲಿ ದೇವತೆಗಳು ನೆಲೆಸುತ್ತಾರೆ. ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡುವ ಈ ಪವಿತ್ರ ಸಂಸ್ಥೆಯಾಗಿದೆ ಎಂದು ಹೇಳಿದರು. ನಿವೃತ್ತ ಕಂದಾಯ ನಿರೀಕ್ಷಕ ಯೋಗೇಂದ್ರ, ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಪ್ರಾಂಶುಪಾಲೆ ಡಾ.ವಿ.ರೇಣುಕಾಬಾಯಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಂಚಾಲಕರು, ಐಕ್ಯೂಎಸಿ ಡಾ.ಎಸ್.ಮುತ್ತುರಾಜ, ಖಜಾಂಚಿ ಡಾ.ಹೆಚ್.ಆರ್.ಶಿಲ್ಪ, ಸಂಚಾಲಕರು ರಜನಿ, ಪತ್ರಾಂಕಿತ ವ್ಯವಸ್ಥಾಪಕಿ ಲಲಿತಕುಮಾರಿ ಇತರರು ಉಪಸ್ಥಿತರಿದ್ದರು.

# ರೈತರ ಉಪವಾಸ ಸತ್ಯಾಗ್ರಹ ಎರಡನೇ ದಿನಕ್ಕೆ

## ಬಿಡದಿ ಸಮಗ್ರ ನಗರ ಯೋಜನೆಗೆ ವಿರೋಧ | ಮೂವರು ರೈತರು ಅಸ್ವಸ್ಥ, ಚಿಕಿತ್ಸೆ





ರಾಮನಗರ: ಬಿಡದಿ ಸಮಗ್ರ ನಗರ ಯೋಜನೆಯನ್ನು ವಿರೋಧಿಸಿ ರೈತರು ಸೋಮವಾರದಿಂದ ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದು, ಸತ್ಯಾಗ್ರಹ 2ನೇ ದಿನಕ್ಕೆ ಕಾಲಿಟ್ಟಿದೆ. ಉಪವಾಸ ನಿರತ ಮೂವರು ರೈತರು ಅಸ್ವಸ್ಥರಾಗಿದ್ದು, ವೈದ್ಯಕೀಯ ಚಿಕಿತ್ಸೆ ಮುಂದುವರದಿದೆ.

ಬಿಡದಿ ಸಮಗ್ರ ನಗರ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದೆ. ಕೃಷಿ ಭೂಮಿಯನ್ನು ನಾವು ಸ್ವಾಧೀನಕ್ಕೆ ಕೊಡುವುದಿಲ್ಲ, ಹೀಗಾಗಿ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಕೈಬಿಡಿ, ಯೋಜನೆಯನ್ನು ರದ್ದುಪಡಿಸಿ ಎಂದು 561 ದಿನಗಳಿಂದ ನಿರಂತರವಾಗಿ ಪ್ರತಿಭಟನೆ ನಡೆಯುತ್ತಿದೆ. ಪ್ರತಿಭಟನೆ ತೀವ್ರವಾಗುತ್ತಿದ್ದಂತೆ ರಾಜ್ಯ ಸರ್ಕಾರ ಸಲಹಾ ಸಮಿತಿ ರಚಿಸುವುದಾಗಿ ತಿಳಿಸಿತ್ತು. ಆದರೆ ಸಲಹಾ ಸಮಿತಿಯ ಯಾರೊಬ್ಬರು ಸ್ಥಳಕ್ಕೆ ಭೇಟಿ ಕೊಟ್ಟು ತಮ್ಮ ಅಭಿಪ್ರಾಯ ಪಡೆದುಕೊಂಡಿಲ್ಲ ಎಂಬ ಆಕ್ರೋಶ ಯೋಜನೆಯನ್ನು ವಿರೋಧಿಸುತ್ತಿರುವ ರೈತರಲ್ಲಿ ಮನೆ ಮಾಡಿದ್ದು, ಉಪವಾಸ ಸತ್ಯಾಗ್ರಹ ಕೈಗೊಳ್ಳಲು ಪ್ರಮುಖ ಕಾರಣ ಎಂದು ಪ್ರತಿಭಟನಾ ನಿರತರು ತಿಳಿಸಿದ್ದಾರೆ.

### ಮೂವರು ಅಸ್ವಸ್ಥ

ಬಿಡದಿ ಟೌನ್‌ಶಿಪ್ ಯೋಜನೆ ಭೂಸ್ವಾಧೀನ ಪ್ರಕ್ರಿಯೆ ವಿರೋಧಿಸಿ ರೈತರು ನಡೆಸುತ್ತಿರು ಉಪವಾಸ ಸತ್ಯಾಗ್ರಹ ಪ್ರತಿಭಟನೆಯಲ್ಲಿ ಭಾಗವಹಿಸಿರುವ ಮೂವರು ರೈತರು ಅಸ್ವಸ್ಥರಾಗಿದ್ದಾರೆ. ಕಂಚುಗಾರನಹಳ್ಳಿ ಗ್ರಾಮದ ವೀರೇಶ್ , ಚಿಕ್ಕಬೈರಮಂಗಲ ಗ್ರಾಮದ ನಾಗೇಶ್ ಕುಮಾರ್ ಹಾಗೂ ಕೆಂಪಶೆಟ್ಟಿದೊಡ್ಡಿ ಗ್ರಾಮದ ಕೃಷ್ಣಪ್ಪ ಅಸ್ವಸ್ಥಗೊಂಡಿದ್ದು, ಮೂವರನ್ನು ಬೈರಮಂಗಲ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ.

### ಪ್ರತಿಭಟನಾ ಸ್ಥಳದಲ್ಲಿ ಗಣಪತಿ ಪ್ರತಿಷ್ಠಾಪನೆ

ರೈತರು ಪ್ರತಿಭಟನಾ ಸ್ಥಳದಲ್ಲಿ ವಿಘ್ನ ವಿನಾಶಕ ಗಣಪತಿಯನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಸಲ್ಲಿಸಿದರು. ಗಣಪತಿಯನ್ನು ಹಸಿರು ಪೇಟಾ ಹಾಗೂ ಹಸಿರು ಶಾಲುಗಳಿಂದ ಸಿಂಗರಿಸಿ, ಭೂಸ್ವಾಧೀನ ಪ್ರಕ್ರಿಯೆ ಸಂಪೂರ್ಣವಾಗಿ ಕೈಬಿಡಬೇಕು ಹಾಗೂ ರೈತರ ಸಮಸ್ಯೆಗಳನ್ನು ಶೀಘ್ರ ಪರಿಹರಿಸಬೇಕು ಎಂದು ಪ್ರಾರ್ಥಿಸಿದರು.

### ರಸ್ತೆ ತಡೆ

ಅನಿರ್ದಿಷ್ಟಾವಧಿ ಉಪವಾಸ ಸತ್ಯಾಗ್ರಹದ ಜೊತೆಗೆ ರೈತರು ಬಿಡದಿ ಹಾರೋಹಳ್ಳಿ ಮುಖ್ಯ ರಸ್ತೆಯಲ್ಲಿ ಎತ್ತಿನ ಗಾಡಿ ಹಾಗೂ ಟ್ರ್ಯಾಕ್ಟರ್ ಗಳನ್ನು ಅಡ್ಡ ನಿಲ್ಲಿಸಿ ರಸ್ತೆ ತಡೆಯನ್ನು ಕೈಗೊಂಡಿದ್ದಾರೆ. ಸೋಮವಾರ ಸಂಜೆ ಭಾರಿ ಮಳೆಯಲ್ಲೂ ಪ್ರತಿಭಟನಾಕಾರರು ಮಳೆಯಿಂದ ರಕ್ಷಿಸಿಕೊಳ್ಳಲು ಕುರ್ಚಿಗಳನ್ನು ತಮ್ಮ ತಲೆಯ ಮೇಲಿಟ್ಟು ಪ್ರತಿಭಟನೆ ಮುಂದುವರೆಸಿದ್ದರು.

### ಸಿಎಂ ಅವರಿಗೆ ನಮ್ಮ ಹೋರಾಟ ಕಾಣುತ್ತಿಲ್ಲವೇ?

ಕಸ್ತೂರಿರಂಗನ್ ವರದಿ ವಿಚಾರವಾಗಿ ಅಧಿವೇಶನ ಕರೆದಿರುವ ಮುಖ್ಯಮಂತ್ರಿ ಅವರು ರಾಜ್ಯ ಪ್ರವಾಸ ಮಾಡುತ್ತಿದ್ದಾರೆ. ಆದರೆ 18 ತಿಂಗಳಿಂದ ನಡೆಯುತ್ತಿರುವ ನಮ್ಮ ಹೋರಾಟ ಅವರಿಗೆ ಕಾಣುತ್ತಿಲ್ಲವೇ? ಸಮಯದ ಕೊರತೆಯಿದ್ದರೆ ಸಂಬಂಧಪಟ್ಟ ಸಚಿವರನ್ನು ಸ್ಥಳಕ್ಕೆ ಕಳುಹಿಸಿ, ಇಲ್ಲಿನ ವಾಸ್ತವ ಸ್ಥಿತಿಯನ್ನು ಅರಿತುಕೊಳ್ಳಲಿ ಎಂದು ರೈತರು ಒತ್ತಾಯಿಸಿದರು.

### ಯೋಜನೆ ರದ್ದಾಗಲಿ

ಬಿಡದಿ ಟೌನ್‌ಶಿಪ್ ಯೋಜನೆ ವಿರುದ್ಧದ ರೈತರ ಹೋರಾಟ 563ನೇ ದಿನಕ್ಕೆ ಕಾಲಿಟ್ಟಿದೆ. ಈವರೆಗೂ ಸರ್ಕಾರದಿಂದ ಯಾವುದೇ ಅಧಿಕೃತ ಸ್ಪಷ್ಟ ಪ್ರತಿಕ್ರಿಯೆ ಬಂದಿಲ್ಲ ಎಂದು ಬೈರಮಂಗಲದ ರೈತ ಪುರುಷೋತ್ತಮ ಆರೋಪಿಸಿದರು. ಸರ್ಕಾರದಿಂದ ಕೇವಲ ಭರವಸೆಗಳು ಮಾತ್ರ ಸಿಗುತ್ತಿವೆ. ಮುಖ್ಯಮಂತ್ರಿ ಅವರು ರೈತರ ಭೂಮಿಯನ್ನು ಬಲವಂತವಾಗಿ ಕಸಿದುಕೊಳ್ಳುವುದಿಲ್ಲ ಹಾಗೂ ರೈತರಿಗೆ ತೊಂದರೆ ನೀಡುವುದಿಲ್ಲ ಎಂದು ಭರವಸೆ ನೀಡಿದ್ದರು. ಈ ಕುರಿತು ಉನ್ನತ ಮಟ್ಟದ ಸಮಿತಿ ರಚಿಸಿ ಕ್ರಮ ಕೈಗೊಳ್ಳುವುದಾಗಿ ಹೇಳಿದ್ದರೂ, ಈವರೆಗೂ ಸಮಿತಿ ಸ್ಥಳಕ್ಕೆ ಭೇಟಿ ನೀಡಿಲ್ಲ. ಅಧಿಕಾರಿಗಳು ಅಥವಾ ಸಚಿವರು ರೈತರನ್ನು ಭೇಟಿ ಮಾಡಿ ಸಮಸ್ಯೆ ಆಲಿಸಿಲ್ಲ ಎಂದು ದೂರಿದರು. ಸರ್ಕಾರದಿಂದ ಸೂಕ್ತ ಸ್ಪಷ್ಟನೆ ದೊರೆಯದ ಹಿನ್ನೆಲೆಯಲ್ಲಿ ಸೋಮವಾರದಿಂದ ಉಪವಾಸ ಸತ್ಯಾಗ್ರಹ ಆರಂಭಿಸಲಾಗಿದೆ. ರೈತರ ಸಮಸ್ಯೆಗೆ ಸರ್ಕಾರ ಸ್ಪಂದಿಸುವವರೆಗೂ ಹೋರಾಟ ಮುಂದುವರಿಸಲಾಗುವುದು ಎಂದು ಪುರುಷೋತ್ತಮ ಎಚ್ಚರಿಸಿದರು. ನಮ್ಮ ಭೂಮಿಯನ್ನು ಉಳಿಸಿಕೊಳ್ಳಲು ಮತ್ತು ನಮ್ಮ ಜೀವನ ಹಾಗೂ ಮಕ್ಕಳ ಭವಿಷ್ಯವನ್ನು ಸುರಕ್ಷಿತವಾಗಿರಿಸಿಕೊಳ್ಳಲು ಶಾಂತಿಯುತವಾಗಿ ಹೋರಾಟ ನಡೆಸುತ್ತಿದ್ದೇವೆ. ಈ ವಿಚಾರದಲ್ಲಿ ಸತ್ಯಾಸತ್ಯತೆ ಏನೆಂಬುದು ಸ್ಪಷ್ಟವಾಗಬೇಕು. ತಪ್ಪು ರೈತರದ್ದೋ ಅಥವಾ ಸರ್ಕಾರದ್ದೋ ಎಂಬುದು ಜನರಿಗೆ ತಿಳಿಯಬೇಕು ಎಂದರು. ರೈತರ ಹೋರಾಟಕ್ಕೆ ಸರ್ಕಾರದ ಬೆಂಬಲವೂ ಇಲ್ಲ, ವಿರೋಧ ಪಕ್ಷಗಳ ಬೆಂಬಲವೂ ಸಮರ್ಪಕವಾಗಿ ಸಿಗುತ್ತಿಲ್ಲ. ರೈತರ ಪರವಾಗಿ ಧ್ವನಿ ಎತ್ತಲು ಯಾರೂ ಮುಂದೆ ಬರುತ್ತಿಲ್ಲ ಎಂದು ಪುರುಷೋತ್ತಮ್ ಅಸಮಾಧಾನ ವ್ಯಕ್ತಪಡಿಸಿದರು.

# ದಸರಾಗೆ ಮುನ್ನ ನಗರದ ಗುಂಡಿ ಮುಚ್ಚಿ

ಮೈಸೂರು: ದಸರಾ ಸಮೀಪಿಸುತ್ತಿದ್ದು, ಮೈಸೂರು ನಗರ ಗುಂಡಿಗಳಿಂದ ಗೂಡಿದೆ ಈ ಹಿನ್ನೆಲೆಯಲ್ಲಿ ಕೂಡಲೇ ನಗರದಲ್ಲಿರುವ ಗುಂಡಿಗಳನ್ನು ಮುಚ್ಚಿ ಪ್ರವಾಸಿಗರ ಮುಂದೆ ಮೈಸೂರಿನ ಗೌರವ ಉಳಿಸಿ ಎಂದು ಪಾಲಿಕೆ ಮಾಜಿ ಸದಸ್ಯ ಹಾಗೂ ಜೆಡಿಎಸ್ ನಗರಾಧ್ಯಕ್ಷ ಎಸ್‌ಬಿಎಂ ಮಂಜು ಆಗ್ರಹಿಸಿದರು.




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿಶ್ವವಿಖ್ಯಾತ ಮೈಸೂರು ದಸರಾ ವೀಕ್ಷಿಸಲು ದೇಶ–ವಿದೇಶಗಳಿಂದ ಪ್ರವಾಸಿಗರು ಆಗಮಿಸುತ್ತಾರೆ. ಆದರೆ, ಪ್ರಸ್ತುತ ಮೈಸೂರು ರಸ್ತೆಗಳೆಲ್ಲ ವಿವಿಧ ಕಾಮಗಾರಿಗಳಿಗೆ ಅಗೆದು ಗುಂಡಿ ಮಯವಾಗಿದೆ. ಪಾಲಿಕೆ ತಕ್ಷಣ ನಗರದಲ್ಲಿರುವ ಗುಂಡಿಗಳನ್ನು ಮುಚ್ಚಿ ಸುಸಜ್ಜಿತ ರಸ್ತೆಗಳನ್ನು ನಿರ್ಮಿಸಿ. ಪಾಲಿಕೆಯಲ್ಲಿ ಹಣವಿಲ್ಲ ಎಂದು ಆಯುಕ್ತರು ತಿಳಿಸಿದ್ದಾರೆ. ರಾಜ್ಯ ಸರ್ಕಾರ ಮೈಸೂರಿನ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದರು. ಮತ್ತೊಂದೆಡೆ ನಗರದ 12 ರಸ್ತೆಗಳು 391 ಕೋಟಿ ರೂ ವೆಚ್ಚದಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿ ನಡೆಯುತ್ತಿದೆ. ಇದು ಸಂಪೂರ್ಣ ಅವೈಜ್ಞಾನಿಕವಾಗಿ ನಡೆಯುತ್ತಿದ್ದು, ಕಾಮಗಾರಿಗೂ ಮುನ್ನ ಯುಜಿಡಿಗೆ ಕಾಮಗಾರಿ ಮಾಡಿಲ್ಲ. ಬದಲಾಗಿ ರಸ್ತೆ ಮಾಡಿದ ನಂತರ ಈಗ ಅಗೆದು ಯುಜಿಡಿ ಲೈನ್ ಮಾಡುತ್ತಿದ್ದಾರೆ. ಇದರಿಂದ ವಾಹನ ಸವಾರರು ಬಿದ್ದು ಅಪಘಾತಗಳಾಗಿವೆ. ಮತ್ತೊಂದೆಡೆ ರಾಜ್ಯದಲ್ಲಿ ನೀರಿನ ಅಭಾವ ಸೃಷ್ಟಿಯಾಗಿದೆ. ಆದರೆ, ಮೈಸೂರಿನ ರಸ್ತೆಗಳಲ್ಲಿ ನೀರಿನ ಸೋರಿಕೆಯಾಗುತ್ತಿದೆ ಇದನ್ನು ಸರಿಪಡಿಸಿ ನೀರು ಉಳಿಸಿ ಎಂದು ಒತ್ತಾಯಿಸಿದರು.

ಪರಿಶಿಷ್ಟ ಪಂಗಡದವರು ಸಣ್ಣ ಕೈಗಾರಿಕೆ, ಸ್ವಯಂ ಉದ್ಯೋಗ, ಹೈನುಗಾರಿಕೆ ಸೇರಿದಂತೆ ವಿವಿಧ ಕಾರ್ಯಗಳಿಗಾಗಿ ವಾಲ್ಮೀಕಿ ನಿಗಮದಡಿ ಅರ್ಜಿ ಸಲ್ಲಿಸಿ ಎಂದು ಹೇಳಿ ಅರ್ಜಿಗಳನ್ನು ಮಾತ್ರ ವಿತರಿಸುತ್ತಿದ್ದಾರೆ. ಆದರೆ, ಇಲ್ಲಿಯವರೆಗೂ ಯಾವುದೇ ಅರ್ಜಿದಾರರಿಗೆ ಸಹಾಯದ ದೊರೆತ್ತಿಲ್ಲ. ಎಲ್ಲಾ ಅರ್ಜಿಗಳು ಹಳ್ಳ ಹಿಡಿದಿದೆ ಎಂದು ಆರೋಪಿಸಿದರು.

ಮೈಸೂರಿನ ಆರ್‌ಟಿಓಗಳಲ್ಲಿ ಬ್ರೋಕರ್‌ಗಳ ಹಾವಳಿ ಹೆಚ್ಚಾಗಿದ್ದು, ಪೂರ್ವ ಮತ್ತು ಪಶ್ಚಿಮ ಎರಡು ಕಡೆ ಪ್ರತಿಯೊಂದು ಫೈಲ್‌ಗಳು ಮುಂದೆ ಸಾಗಲು ಬ್ರೋಕರ್‌ಗಳ ಸಹಾಯ ಬೇಕಿದೆ. ಮತ್ತೊಂದೆಡೆ ವಾಹನಗಳ ಎಲ್ಲಾ ರೀತಿಯ ಪರಿಶೀಲನೆಗೆ ಎಲ್ಲರೂ ಪೂರ್ವದ ಆರ್‌ಟಿಓಗೆ ಹೋಗ ಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಎರಡು ಆರ್‌ಟಿಓ ಕೇಂದ್ರ ಇರುವಾಗ ಎರಡು ಕಡೆ ಪರಿಶೀಲನೆ ಮಾಡುವುದು ಒಳಿತು ಎಂದು ಆಗ್ರಹಿಸಿದರು.

# ಶಾರದಾ ಕಾಲೇಜಿನಲ್ಲಿ ರಕ್ತದಾನ ಶಿಬಿರ



ಮೈಸೂರು: ನಗರದ ಶಾರದಾ ವಿಲಾಸ ಕಾಲೇಜು, ಯೂತ್ ರೆಡ್ ಕ್ರಾಸ್ ಘಟಕ, ಎನ್ ಸಿಸಿ ಆರ್ಮಿ ವಿಂಗ್ ಮತ್ತು ಐಕ್ಯೂಎಸಿವತಿಯಿಂದ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ್ ಕಾಲೇಜಿನಲ್ಲಿ "ರಕ್ತದ ಗುಂಪು ಪರೀಕ್ಷೆ ಮತ್ತು ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಲಯನ್ಸ್ ಬ್ಲಡ್ ಸೆಂಟರ್, ಜೀವದಾರ ಸಹಯೋಗದೊಂದಿಗೆ ಆಯೋಜಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಲಯನ್ಸ್ ಬ್ಲಡ್ ಸೆಂಟರ್, ಜೀವದಾರ ವ್ಯವಸ್ಥಾಪಕ ನಿರ್ದೇಶಕ ಎಸ್.ಇ.ಗಿರೀಶ್ ಮಾತನಾಡಿ ಭಾರತದಲ್ಲಿನ ರಕ್ತದ ಕೊರತೆಯ ಪರಿಸ್ಥಿತಿಯಲ್ಲಿ ರಕ್ತದಾನದ ಮಹತ್ವ ಮತ್ತು ಅಗತ್ಯವನ್ನು ವಿವರಿಸಿದರು. ಯುವಜನರು ಸಾಮಾಜಿಕ ಜವಾಬ್ದಾರಿಗಳನ್ನು ನಿರ್ವಹಿಸುವುದರ ಜೊತೆಗೆ ಆರೋಗ್ಯಕರ ಮತ್ತು ಉತ್ತಮ ಜೀವನಶೈಲಿಯನ್ನು ಕಾಪಾಡಿಕೊಳ್ಳುವ ಮಹತ್ವವನ್ನೂ ತಿಳಿಸಿದರು.

ಲಯನ್ಸ್ ಬ್ಲಡ್ ಸೆಂಟರ್, ಜೀವದಾರ, ಮೈಸೂರಿನ ವೈದ್ಯಾಧಿಕಾರಿ ಡಾ.ಎಸ್.ಪರಿಣಿತಾ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ರಕ್ತವು ಜೀವ ಉಳಿಸುವಲ್ಲಿ ಹೊಂದಿರುವ ಮಹತ್ವ ಹಾಗೂ ರಕ್ತದಾನವು ಆರೋಗ್ಯಕ್ಕೆ ನೀಡುವ ಪ್ರಯೋಜನಗಳ ಕುರಿತು ವಿವರಿಸಿದರು. ಕಾರ್ಯಕ್ರಮಕ್ಕೆ ಶಾರದಾ ವಿಲಾಸ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ. ದೇವಿಕಾ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಯೂತ್ ರೆಡ್ ಕ್ರಾಸ್, ಶಾರದಾ ವಿಲಾಸ ಕಾಲೇಜಿನ ಕಾರ್ಯಕ್ರಮಾಧಿಕಾರಿ ಎಚ್.ಎಸ್. ಅಭಿಲಾಷ್ ಇದ್ದರು.

# ವಿದ್ಯುತ್ ಅವಘಡ: ತುಂಡರಿಸಿದ ಕೈ

ಮೈಸೂರು: ಎನ್.ಆರ್.ಮೊಹಲ್ಲಾ ವಿಭಾಗದ ಚಾಮುಂಡಿಪುರಂ ಉಪವಿಭಾಗದ ವ್ಯಾಪ್ತಿಗೆ ಬರುವ ವಿದ್ಯಾರಣ್ಯಪುರಂ ವಿಭಾಗದ ಜಾಕಿ ಕ್ವಾರ್ಟರ್ಸ್ ಬಳಿಯ ಕುರು



ಬಾರಹಳ್ಳಿ ವೃತ್ತದಲ್ಲಿ ಭುವನೇಶ್ವರಿ ಫೀಡರ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ವೇಳೆ ವಿದ್ಯುತ್ ಅವಘಡ ಉಂಟಾಗಿ ಜೂನಿಯರ್ ಪವರ್ ಮ್ಯಾನ್ ಎಂ.ಕಾರ್ತಿಕ್(32) ಕೈ ತುಂಡರಿಸಿ ಆಸ್ಪತ್ರೆಗೆ ದಾಖಲಾದ ಘಟನೆ ನಡೆದಿದೆ.

ಜಾಕಿ ಕ್ವಾರ್ಟರ್ಸ್ ಬಳಿ ಭುವನೇಶ್ವರಿ ಫೀಡರ್‌ನಲ್ಲಿ ಲೈನ್ ಕ್ಲಿಯರ್ ಪಡೆದ ನಂತರ ಭುವನೇಶ್ವರಿ ಫೀಡರ್‌ನಲ್ಲಿ ಜಿಓಎಸ್ ನಿರ್ವಹಣಾ ಕಾರ್ಯವನ್ನು ಕೈಗೊಳ್ಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. 11ಕೆವಿ ಮಾರ್ಗದಲ್ಲಿ ಕೆಲಸ ಮಾಡುತ್ತಿದ್ದಾಗ ಕಾರ್ತಿಕ್‌ಗೆ 12.45ರ ಸಮಯದಲ್ಲಿ ಆಕಸ್ಮಿಕವಾಗಿ ವಿದ್ಯುತ್ ಆಘಾತ ಉಂಟಾಗಿದ್ದು, ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಆದರೆ, ವಿದ್ಯುತ್ ರಭಸಕ್ಕೆ ಅಂಗೈ ಕತ್ತರಿಸಿದ್ದು, ಹೊಟ್ಟೆ ಭಾಗದಲ್ಲಿಯೂ ವಿದ್ಯುತ್ ತಗಲಿ ಸುಟ್ಟು ಕರಕಲಾಗಿದ್ದಾರೆ.

# ಹೊಸ ಕೋರ್ಸ್ ಪ್ರಾರಂಭ

ಮೈಸೂರು: ಶ್ರೀರಂಗಪಟ್ಟಣ ತಾಲ್ಲೂಕಿನ ಬೆಳವಾಡಿಯಲ್ಲಿರುವ ಮಹಾರಾಜ ಎಜುಕೇಶನ್ ಟ್ರಸ್ಟ್ ಸಂಸ್ಥೆಯಲ್ಲಿ ಎಂಐಟಿ ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ಕಾಲೇಜು ಮತ್ತು ಆಸ್ಪತ್ರೆ ಆರಂಭಿಸಿದ್ದು, ಐದೂವರೆ ವರ್ಷಗಳ ಬ್ಯಾಚುಲರ್ ಆಫ್ ನ್ಯಾಚುರೋಪತಿ ಅಂಡ್ ಯೋಗಿಕ್ ಸೈನ್ಸ್ ಕೋರ್ಸ್‌ಗೆ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದಾಗಿದೆ ಎಂದು ಪ್ರಾಚಾರ್ಯ ಶಶಿಕಿರಣ್ ತಿಳಿಸಿದರು.

ನಗರದಲ್ಲಿ ಸುದಿಗಾರರೊಡನೆ ಮಾತನಾಡಿ, ಇದು ಆಧುನಿಕ ವೈದ್ಯಕೀಯ ವಿಜ್ಞಾನವನ್ನು ಸಾಂಪ್ರದಾಯಿಕ ನ್ಯಾಚುರೋಪತಿ ಹಾಗೂ ಯೋಗಾಧಾರಿತ ಆರೋಗ್ಯ ಪದ್ಧತಿಗಳೊಂದಿಗೆ ಸಂಯೋಜಿಸುವ ಮೂಲಕ ವಿದ್ಯಾರ್ಥಿಗಳಿಗೆ ಸಮಗ್ರ ಆರೋಗ್ಯ ಆರೈಕೆ ಕುರಿತು ಜ್ಞಾನ ಒದಗಿಸುವ ಉದ್ದೇಶ ಹೊಂದಿದೆ. ಎಂದರು. ಡಾ.ಜಿ.ಹೇಮಂತ್‌ಕುಮಾರ್, ಅನಿರುದ್ಧ್, ವೈ.ಟಿ. ಕೃಷ್ಣೇಗೌಡ ಇದ್ದರು.




# ಮೂವರಿಗೆ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ

ಮೈಸೂರು: ಹೋಟೆಲು ಮಾಲೀಕರ ಪತ್ತಿನ ಸಹ ಕಾರ ಸಂಘದ ವತಿಯಿಂದ ಆಯೋ ಜಿಸಿದ್ದ ವಾರ್ಷಿಕ ಸಾಮಾನ್ಯ ಸಭೆ ಹಾಗೂ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಆರ್.ತಿಪ್ಪಣ್ಣ, ಜಿ.ಜಿ.ಸುರೇಶ್, ಬಿ.ರಾಘವೇಂದ್ರ ಭಟ್ ಅವರಿಗೆ ಸಹಕಾರ ಮಿತ್ರ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು.




ಪ್ರಶಸ್ತಿ ವಿತರಿಸಿದ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ.ಗೋಪಿನಾಥ್ ಮಾತನಾಡಿ, ಸಮಾಜಕ್ಕಾಗಿ ಉತ್ತಮ ಕೆಲಸ ಮಾಡುವವರನ್ನು ಗುರುತಿಸಿ ಗೌರವಿಸುವುದು ಇತರರಿಗೂ ಪ್ರೇರಣೆಯಾಗುತ್ತದೆ. ಈ ರೀತಿಯ ಸಕಾರಾತ್ಮಕ ಉತ್ತೇಜನಗಳು ಸಮಾಜ ದಲ್ಲಿ ಸದಾ ಇರಬೇಕು. ಇಂದು ಸಿಎಸ್‌ಆರ್ ಚಟು ವಟಿಕೆ ಎಂದು ಕರೆಯುವ ಸಾಮಾಜಿಕ ಜವಾಬ್ದಾ ರಿಯ ಕಲ್ಪನೆ ಹೊಸದಲ್ಲ. ಹಿಂದಿನ ಕಾಲದಲ್ಲಿ ಧರ್ಮಶಾಲೆ, ಛತ್ರ, ಶಾಲೆ, ಆರೋಗ್ಯ ಕೇಂದ್ರ ಸೇರಿದಂತೆ ಹಲವು ಸಮಾಜಮುಖಿ ಕಾರ್ಯಗಳನ್ನು ದಾನಿಗಳೇ ಕೈಗೊಂಡು ನಡೆಸುತ್ತಿದ್ದರು. ಸಮಾಜಕ್ಕೆ ಕೊಡುಗೆ ನೀಡುವುದು ನಮ್ಮ ಜವಾಬ್ದಾರಿ ಎಂಬ ಭಾವನೆ ಅಂದಿನಿಂದಲೂ ಇತ್ತು ಎಂದರು.

ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ನಡೆ ಯುವ ಚಟುವಟಿಕೆಗಳಿಗೂ ಸಾಮಾಜಿಕ ಹೊಣೆಗಾ ರಿಕೆ ಇರಬೇಕು. ಉತ್ತಮ ಕಾರ್ಯಗಳ ಮೂಲಕ ಸಮಾಜಕ್ಕೆ ಮರಳಿ ಕೊಡುಗೆ ನೀಡುವ ಪರಂಪರೆ ಯನ್ನು ಮುಂದುವರಿಸಬೇಕಾಗಿದೆ ಎಂದರು.

ತಮ್ಮ ಕೆಲಸಕ್ಕೆ ದೊರೆತ ದೊಡ್ಡ ಪ್ರಶಸ್ತಿಯ ಬಳಿಕವೂ ಮನಸ್ಸಿನಲ್ಲಿ ಒಂದು ರೀತಿಯ ಶೂನ್ಯತೆ ಮೂಡಿತ್ತು. ನಂತರ ಬಾಲ್ಯದಲ್ಲಿ ತಂದೆಯಿಂದ ಕಲಿತ ವೇದ–ಉಪನಿಷತ್ತುಗಳ ಅಧ್ಯಯನದತ್ತ ಹೆಚ್ಚಿನ ಗಮನ ಹರಿಸಿದೆ. ಭಾರತೀಯ ಜ್ಞಾನ ಪರಂ ಪರೆಯಲ್ಲಿರುವ ನಿರ್ವಹಣಾ ತತ್ವಗಳು ಹಾಗೂ ಸಾಮಾಜಿಕ ಜವಾಬ್ದಾರಿಯ ಮೌಲ್ಯಗಳನ್ನು ಅಧ್ಯ ಯನ ಮಾಡುವ ಮೂಲಕ ಅವುಗಳನ್ನು ಆಧುನಿಕ ಸಂದರ್ಭದಲ್ಲಿ ಅರ್ಥೈಸುವ ಪ್ರಯತ್ನ ಮಾಡಿರು ವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಈ ಸಂದರ್ಭದಲ್ಲಿ ರಾಮಕೃಷ್ಣ ಆಶ್ರಮದ ಕರೆಸ್ಪಾಂಡೆಂಟ್ ಸ್ವಾಮಿ ಮಹಾಮೇಧಾನಂದಜಿ, ಸಂಘದ ಅಧ್ಯಕ್ಷ ನಾರಾಯಣ ವಿ.ಹೆಗಡೆ, ಉಪಾಧ್ಯಕ್ಷ ಆನಂದ ಎಂ.ಶೆಟ್ಟಿ, ನಿರ್ದೇಶಕರಾದ ಸಿ.ನಾರಾಯಣಗೌಡ, ವಿ.ಎಸ್.ಶಾಸ್ತ್ರಿ, ಸುಬ್ರಮಣ್ಯ ಆರ್.ತಂತ್ರಿ, ಪಿ.ನಾರಾಯಣ ಕುಂದರ್, ಕೆ.ಸಿ.ವಿಶ್ವಾನಂದ ಭಟ್, ಹೇಮಂತ್ ಕುಮಾರ್, ಸುಲೋಚನ ಸಿ.ಶೆಟ್ಟಿ, ಸುಮಿತ್ರ ಎ.ತಂತ್ರಿ ಇನ್ನಿತರರು ಉಪಸ್ಥಿತರಿದ್ದರು.

# ರೈತರು, ಗ್ರಾಹಕರಿಗೆ ನೇರ ಸಂಪರ್ಕಕ್ಕೆ ಶ್ರಮ

## ಕೆ.ಆರ್.ಲೋಕೇಶ್ ಅಭಿಮತ | ಹಾಪ್‌ಕಾಮ್ಸ್‌ನ 2025-26ನೇ ಸಾಲಿನ ಸರ್ವ ಸದಸ್ಯರ ಸಭೆ



**ಚಾಮರಾಜನಗರ:** ಚಾಮರಾಜನಗರ ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘವು ರೈತರು ಹಾಗೂ ಗ್ರಾಹಕರ ನಡುವೆ ನೇರ ಸಂಪರ್ಕ ಕಲ್ಪಿಸಿ,ಗುಣಮಟ್ಟದ ತರಕಾರಿ ಹಾಗೂ ಹಣ್ಣು ಮಾರಾಟ ಮಾಡಲು ಶ್ರಮ ವಹಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಆರ್.ಲೋಕೇಶ್ ತಿಳಿಸಿದರು.

ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ರೇಷ್ಮೆ ಗೂಡಿನ ಮಾರುಕಟ್ಟೆ ಕಟ್ಟಡದ ಹಾಪ್‌ಕಾಮ್ಸ್ ಕಚೇರಿ ಅವರಣದಲ್ಲಿ ನಡೆದ ಚಾಮರಾಜನಗರ ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘದ 2025-26ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ತರಕಾರಿ ಹಾಗು ಹಣ್ಣು ಬೆಳೆಯುವ ರೈತರಿಗೆ ಅನುಕೂಲ ಕಲ್ಪಿಸುವ ಜೊತೆಗೆ ಸಂಸ್ಕರಣೆ ಮಾಡಿ ಮಾರಾಟ ಮಾಡುವ ಉದ್ದೇಶದಿಂದ ಸಂಘವನ್ನು ಸ್ಥಾಪನೆ ಮಾಡಿದ್ದು, ತೋಟಗಾರಿಕೆ ಇಲಾಖೆಯ ಸಹಕಾರದಲ್ಲಿ ಕಾರ್ಯ ಯೋಜನೆಗಳನ್ನು ರೂಪಿಸಲಾಗಿದೆ. ಜಿಲ್ಲಾ ಕಚೇರಿ ಹಾಗೂ ಸರ್ಕಾರದ ಸಹಭಾಗಿತ್ವದಲ್ಲಿ ನಡೆಯುತ್ತಿರುವ ಹಾಸ್ಟೆಳಿಗೆ ಹಾಪ್ ಕಾಮ್ಸ್ ನಿಂದ ತಾಜಾ ಹಣ್ಣು, ತರಕಾರಿ ಸರಬರಾಜು ಮಾಡುವ ಬಗ್ಗೆ ಜಿಲ್ಲಾಧಿಕಾರಿಗಳು ಸೂಕ್ತ ನಿರ್ದೇಶನವನ್ನು ನೀಡುವಂತೆ ಈಗಾಗಲೇ ಆಡಳಿತ ಮಂಡಲಿಯ ನಿಯೋಗ ಭೇಟಿ ಮಾಡಿ ಮನವಿ ಸಲ್ಲಿಸಿದ್ದೇವೆ. ಅವರು ಸಹ ಒಪ್ಪಿಗೆ ಸೂಚಿಸಿದ್ದಾರೆ. ಸಂಘದ ಸದಸ್ಯರ ಸಹಕಾರ ಮುಖ್ಯವಾಗಿದೆ ಎಂದರು.

ಸಹಕಾರ ಸಂಘವು ರೇಷ್ಮೆ ಇಲಾಖೆಗೆ ಸೇರಿದ ಜಾಗದಲ್ಲಿ ತಾತ್ಕಾಲಿಕವಾಗಿ ನಡೆಯುತ್ತಿದ್ದು, ಇದು ಜಾಗ ಸಾರಿಗೆ ಬಸ್ ನಿಲ್ದಾಣಕ್ಕೆ ಹಸ್ತಾಂತರವಾಗಿರುವ ಕಾರಣ ಜಿಲ್ಲಾ ಕೇಂದ್ರದಲ್ಲಿ ಸ್ವಂತ ನಿವೇಶನವನ್ನು ಹೊಂದುವ ನಿಟ್ಟಿನಲ್ಲಿ ಆಡಳಿತ ಮಂಡಲಿಯ ಕ್ರಮ ವಹಿಸುತ್ತಿದೆ. ಸಂಘವು ನಷ್ಟದಲ್ಲಿದ್ದು, ಇದನ್ನು ಲಾಭದತ್ತ ಕೊಂಡ್ಯೊಯಲು ಕ್ರಮವನ್ನು ರೂಪಿಸಲಾಗಿದೆ.

### ನಾಲ್ಕು ವರ್ಷಗಳ ಅವಧಿಯಲ್ಲಿ ಹಾಪ್‌ಕಾಮ್ ಅಭಿವೃದ್ಧಿ

**ನಾಲ್ಕು ವರ್ಷಗಳ ಅವಧಿಯಲ್ಲಿ ಹಾಪ್‌ಕಾಮ್ಸ್ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಿದ್ದು, ಸರ್ಕಾರ ಹಾಗೂ ಇಲಾಖೆಯ ಸಹಕಾರ ಮುಖ್ಯವಾಗಿದೆ. ಮಳಿಗೆಗೆ ಸಕಾಲದಲ್ಲಿ ತರಕಾರಿ ಹಾಗು ಹಣ್ಣುಗಳನ್ನು ಸರಬರಾಜು ಮಾಡಲು ಹಾಗೂ ಹಾಸ್ಟೆಳಿಗೆ ಅಗತ್ಯವಾದ ತರಕಾರಿಯನ್ನು ಖರೀದಿ ಮಾಡಲು ಅನುದಾನದ ಕೊರತೆ ಇದೆ. ರೈತರಿಗೂ ಸಹ ಸರಿಯಾದ ಸಮಯಕ್ಕೆ ಹಣ ನೀಡಬೇಕಾಗಿದೆ. ಸಂಘದಲ್ಲಿ ಹಣ ಇಲ್ಲದ ಕಾರಣ ವಹಿವಾಟು ಕುಂಠಿತಗೊಂಡಿದೆ ಎಂದರು.**

ಸದಸ್ಯರು ಹೇಳಿರುವಂತೆ ಹಣ ದುರುಪಯೋಗ ಮಾಡಿರುವವರಿಗೆ ನೋಟಿಸ್ ಜಾರಿ ಮಾಡುವ ಜೊತೆಗೆ ಕ್ರಿಮಿನಾಲ್ ಮೊಕದ್ದಮೆಯನ್ನು ಹೂಡಿ ವಾಪಸ್ ಕಟ್ಟಿಸುವ ಬಗ್ಗೆ ಕ್ರಮ ವಹಿಸಲಾಗುತ್ತದೆ ಎಂದು ತಿಳಿಸಿದರು.

ಸಂಘಕ್ಕೆ ಸದಸ್ಯತ್ವ ನೀಡುವ ಸಂಬಂಧ ಅಡಳಿತ ಮಂಡಲಿ ಹಾಗೂ ಅಧಿಕಾರಿಗಳ ವರ್ಗ ವಿಳಂಬ ಧೋರಣೆ ಅನುಸರಿಸುತ್ತಿದೆ. ಸದಸ್ಯತ್ವ ಕೋರಿ ಅರ್ಜಿ ಸಲ್ಲಿಸಿರುವ ಎಲ್ಲ ರೈತರಿಗೆ ಸಕಾಲದಲ್ಲಿ ಅರ್ಜಿಗಳನ್ನು ಪರಿಶೀಲಿಸಿ, ಸದಸ್ಯತ್ವ ನೀಡಬೇಕು ಎಂದು ಸದಸ್ಯರು ಒತ್ತಾಯಿಸಿದರು.

ಇದರಿಂದ ಕೆಲ ಕಾಲ ಗೊಂದಲದ ವಾತಾವರಣ ನಿರ್ಮಾಣ ವಾಯಿತು. ಸಭೆಯಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ರೈತರ ಅರ್ಜಿಗಳನ್ನು ಪರಿಶೀಲನೆ ಮಾಡಿ, ಸದಸ್ಯತ್ವ ನೀಡಲು ನಿರ್ಣಯ ಮಾಡಲಾಯಿತು.

ಹಿರಿಯ ಸಹಕಾರಿಗಳಾದ ಕೋಡಿಮೋಳೆ ರಾಜಶೇಖರ್, ಅಯ್ಯನಪುರ ಶಿವಕುಮಾರ್, ನಲ್ಲೂರು ಮಹದೇವಪ್ಪ, ಹೊಸೂರು ಸುಂದ್ರಪ್ಪ, ಸೇರಿದಂತೆ ಅನೇಕರು ಸಂಘವು ಲಾಭದಲ್ಲಿ ನಡೆಯಬೇಕಾಗಿತ್ತು. ಆದರೆ, ಆಡಳಿತ ಮಂಡಲಿ ಮತ್ತು ನೌಕರರ ವೈಫಲ್ಯ ಎದ್ದು ಕಾಣುತ್ತಿದೆ. ಸಂಘದ ಹಣ ದುರುಪಯೋಗ ಪಡಿಸಿಕೊಂಡಿರುವವರ ವಿರುದ್ದ ನಿರ್ದಾಕ್ಷ್ಯಣ ಕ್ರಮ ವಹಿಸಿ ಎಂದು ಸಲಹೆ ಸೂಚನೆಗಳನ್ನು ನೀಡಿದರು.

ಸಭೆಯಲ್ಲಿ ವ್ಯವಸ್ಥಾಪಕ ನಿರ್ದೇಶಕ ಬಿ. ರವಿ ವಾರ್ಷಿಕ ವರದಿಯನ್ನು ಮಂಡಿಸಿ ಅನುಮೋದನೆಯನ್ನು ಪಡೆದುಕೊಂಡರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷೆ ಬಿ. ಶೃತಿಕುಮಾರಸ್ವಾಮಿ, ನಿರ್ದೇಶಕರಾದ ಆರ್. ಪುರುಷೋತ್ತಮ್, ವೈ.ಪಿ. ರಾಜೇಂದ್ರಪ್ರಸಾದ್, ಪುಟ್ಟಸುಬ್ಬಪ್ಪ, ಬಿ. ಲೋಕೇಶ್, ಎಸ್. ಬಸವಶೆಟ್ಟಿ, ಎಂ.ಪಿ. ನಿರಂಜನಮೂರ್ತಿ,ಆರ್.ಜಯಲಕ್ಷ್ಮಿ ವೆಂಕಟೇಶ್, ರಾಜಮ್ಮ, ಪುಟ್ಟಆರಸ್, ಜಿ.ಕೆ. ನಾಗಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಗಿರೀಶ್, ಸಿಇಓ ನವೀನ್ ಸೇರಿದಂತೆ ಸಂಘದ ಸದಸ್ಯರು ಭಾಗವಹಿಸಿದ್ದರು.

## ಅಟ್ಟುಗುಳಿಪುರ ಟೋಲ್ ಗೇಟ್ ನಾಮಫಲಕದಲ್ಲಿ ಪ್ರಾಥಮಿಕ ಭಾಷೆಯಾಗಿ ಕನ್ನಡ ಬಳಸುವಂತೆ ಡಿಸಿಗೆ ಮನವಿ



**ಚಾಮರಾಜನಗರ:** ತಾಲೂಕಿನ ಅಟ್ಟುಗುಳಿಪುರ ಟೋಲ್ ಗೇಟ್ ನಾಮ ಫಲಕದಲ್ಲಿ ಸರ್ಕಾರದ ಸುತ್ತೋಲೆಯಂತೆ ಪ್ರಾಥಮಿಕ ಭಾಷೆಯಾಗಿ ಕನ್ನಡ ಬಳಸುವಂತೆ ಒತ್ತಾಯಿಸಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ರಾಜ್ಯ ಘಟಕದ ವತಿಯಿಂದ ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಮನವಿ ಸಲ್ಲಿಸಲಾಯಿತು.

ನಮ್ಮ ರಾಜ್ಯದಲ್ಲಿ ಯಾವುದೇ ನಾಮಫಲಕಗಳನ್ನು ಅಳವಡಿಸುವಾಗ ಕೇಂದ್ರ ಸರ್ಕಾರದ ಯೋಜನೆಗಳಾಗಿದ್ದರು. ಸಹ ತ್ರಿಭಾಷಾ ನೀತಿ ಅನುಸರಿಸಿ ಆ ರಾಜ್ಯದ ಪ್ರಾಥಮಿಕ ಭಾಷೆಯನ್ನು ಪ್ರಾಥಮಿಕವಾಗಿ ಬರೆಯಬೇಕು ಎಂದು ಸರ್ಕಾರದ ಸುತ್ತೋಲೆ ಇರುತ್ತದೆ. ಆದರೆ ತಾಲೂಕಿನ ಅಟ್ಟುಗುಳಿಪುರ ಗ್ರಾಮದ ಸುವರ್ಣಾವತಿ ಜಲಾಶಯದ ಎದುರು ಭಾರತೀಯ ರಾಷ್ಟ್ರೀಯ ಹೆದ್ದಾರಿ ನಿರ್ಮಿಸಿರುವ ಟೋಲ್ ಗೇಟ್

ನಲ್ಲಿ ಸರ್ಕಾರದ ಸುತ್ತೋಲೆ, ನಿಯಮ, ನಿಬಂಧನೆಗಳನ್ನು ಮೀರಿ ಆಂಗ್ಲಭಾಷೆಯನ್ನು ಬೆಳಸುವ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯದ ಆಡಳಿತ ಪ್ರಾಥಮಿಕ ಕನ್ನಡ ಭಾಷೆಯನ್ನು 2 ನೇ ಸ್ಥಾನದಲ್ಲಿ ಬರೆಯಿಸಿ, ಕನ್ನಡಭಾಷೆಗೆ ಅಪಮಾನ ಮಾಡಿ, ಕನ್ನಡ ಭಾಷೆಯನ್ನು ಕುಂಟಿತವಾಗುವಂತೆ ಮಾಡಿರುತ್ತಾರೆ.

ಇದರ ಬಗ್ಗೆ ನಮ್ಮ ಸಂಘಟನೆಯು ಸಾಕಷ್ಟು ಪ್ರತಿಭಟನೆ ನಡೆಸಿ, ನಮ್ಮ ಜಿಲ್ಲೆ, ಗಡಿ ಜಿಲ್ಲೆಯ ಗಡಿ ಭಾಗದಲ್ಲಿ ನಮ್ಮ ಭಾಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕಿದೆ. ಕೇಂದ್ರ ಸರ್ಕಾರ ನಮ್ಮ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ನೀಡಿರುವುದು, ನಮ್ಮ ಕನ್ನಡ ಭಾಷೆಯನ್ನು ವಿಶ್ವಮಟ್ಟದಲ್ಲಿ ಬೆಳೆಸುವುದಕ್ಕಾಗಿ ಆದರೆ ನಮ್ಮ ಜಿಲ್ಲೆಯ ಜಿಲ್ಲಾಡಳಿತಕ್ಕೆ ಸಂಬಂಧಪಟ್ಟ ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸುವಂತ ಅಧಿಕಾರಿಗಳ ಬೇಜವಬ್ದಾರಿತನದಿಂದ ಇಂತಹ ಘಟನೆಗಳು ನಡೆಯುತ್ತಿದೆ. ಆದ್ದರಿಂದ ತಾವು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕಾನೂನು ಕ್ರಮಕೈಗೊಂಡು ತುರ್ತಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಕ್ರಮಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಅಧ್ಯಕ್ಷ ಚಾ.ಗು.ನಾಗರಾಜ್ ಒತ್ತಾಯಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ಕನ್ನಡ ರಕ್ಷಣಾ ವೇದಿಕೆ ಸದಸ್ಯರಾದ ಮಲ್ಲಯ್ಯನಪುರ ದೊರೆಸ್ವಾಮಿ, ಬಂಗಾರನಾಯಕ, ಸೈಯದ್ ಅಸ್ಗರ್, ಮಂಜು, ರಾಜೇಶ್ ಇತರರು ಹಾಜರಿದ್ದರು.

## ತೆರಕಣಾಂಬಿ ಎಸ್‌ಬಿಐ ಬ್ಯಾಂಕ್ ಮುಂದೆ ರೈತಸಂಘ ಪ್ರತಿಭಟನೆ

**ಗುಂಡ್ಲುಪೇಟೆ:** ತಾಲ್ಲೂಕಿನ ತೆರಕಣಾಂಬಿ ಗ್ರಾಮದ ಎಸ್‌ಬಿಐ ಬ್ಯಾಂಕ್ ಮುಂದೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತಸಂಘದ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಬ್ಯಾಂಕ್‌ನಲ್ಲಿ ರೈತರ ಅನುಕೂಲಕ್ಕಾಗಿ ಎರಡು ಕೌಂಟರ್‌ಗಳನ್ನು ತೆರೆಯಬೇಕು. ಸರ್ಕಾರದಿಂದ ರೈತರಿಗೆ ದೊರೆಯುವ ಸಬ್ಸಿಡಿ, ಬರ ಪರಿಹಾರ ಹಾಗೂ ಹಾಲಿನ ಪ್ರೋತ್ಸಾಹಧನವನ್ನು ಸಾಲದ ಖಾತೆಗೆ ಜಮೆ ಮಾಡಿಕೊಳ್ಳದಂತೆ ಕ್ರಮ ಕೈಗೊಳ್ಳಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.



ಗೋಲ್ಡ್ ಲೋನ್‌ಗೆ ಸಂಬಂಧಿಸಿದಂತೆ ಸಿಬಿಲ್ ಸಮಸ್ಯೆಯ ನೆಪದಲ್ಲಿ ರೈತರಿಗೆ ತೊಂದರೆ ನೀಡಬಾರದು. ಬ್ಯಾಂಕ್‌ನಲ್ಲಿ ಕನ್ನಡದಲ್ಲೇ ವ್ಯವಹಾರ ನಡೆಸಬೇಕು. ರೈತರಿಗೆ ಕುರಿ, ಹಸು ಸಾಕಾಣಿಕೆ ಸೇರಿದಂತೆ ಗುಡಿ ಕೈಗಾರಿಕೆಗಳಿಗೆ ಸಾಲ ಸೌಲಭ್ಯ ಒದಗಿಸಬೇಕು ಎಂದು ಆಗ್ರಹಿಸಿದರು.

ಅಲ್ಲದೆ, ಹಣ ಕಟ್ಟಲು ಹಾಗೂ ಹಣ ಪಡೆಯಲು ಬ್ಯಾಂಕ್‌ನ ಹೊರಗಡೆ ಹೋಗುವಂತೆ ಗ್ರಾಹಕರಿಗೆ ಸೂಚಿಸುತ್ತಿರುವುದನ್ನು ಕೂಡಲೇ ನಿಲ್ಲಿಸಿ, ಬ್ಯಾಂಕ್‌ನ ಒಳಗಡೆಯೇ ಹಣಕಾಸಿನ ವ್ಯವಹಾರ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ರೈತಸಂಘದ ತಾಲ್ಲೂಕು ಅಧ್ಯಕ್ಷ ನಾಗಪ್ಪ ವೀರನಪುರ, ಮಹೇಶ್, ಶಿವಣ್ಣ, ರಾಜು, ನಿಂಗಶೆಟ್ಟಿ, ಶಿವಸ್ವಾಮಿ, ಕೆಂಪಣ್ಣ, ನಿಂಗಮ್ಮ, ಭಾಗ್ಯಮ್ಮ ಸೇರಿದಂತೆ ಹಲವರು ಭಾಗವಹಿಸಿದ್ದರು.

## ಎಸ್.ಜಾನಕಿ ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರ: ಶಾಸಕ ಎ.ಆರ್.ಕೃಷ್ಣಮೂರ್ತಿ



**ಚಾಮರಾಜನಗರ:** ಖ್ಯಾತ ಹಿನ್ನಲೆ ಗಾಯಕಿ ಎಸ್. ಜಾನಕಿ ಆಂಧ್ರಪ್ರದೇಶದವರಾಗಿದ್ದರೂ ಕೂಡ ಕನ್ನಡ ಚಿತ್ರರಂಗಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಕೊಳ್ಳೇಗಾಲ ಕ್ಷೇತ್ರದ ಶಾಸಕ ಎ.ಆರ್.ಕೃಷ್ಣಮೂರ್ತಿ ಹೇಳಿದರು.

ನಗರದ ವರನಟ ಡಾ.ರಾಜ್ ಕುಮಾರ್ ಜಿಲ್ಲಾರಂಗ ಮಂದಿರದಲ್ಲಿ ಕೆಪಿಸಿಸಿ ಮಹಿಳಾ ಕಾರ್ಯದರ್ಶಿ ಕಾವೇಶಿಶಿವಕುಮಾರ್ ಅರ್ಪಿಸುವ ಹಶಿಕಾ ಮ್ಯೂಸಿಕಲ್ ಗಾನಲಹರಿ ಇವೆಂಟ್ಸ್., ಎಸ್.ಜಾನಕಿ ರವರ ನುಡಿನಮನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಬಹುಭಾಷಾ ಗಾಯಕಿಯಾಗಿ ಎಸ್. ಜಾನಕಿ ಅವರು ಕನ್ನಡ ನಾಡು, ನುಡಿಯ ಬಗ್ಗೆ. ಅಪಾರ ಗೌರವ ಹೊಂದಿದ್ದರು. ಕನ್ನಡ, ತೆಲುಗು, ತಮಿಳು, ಮಲಯಾಳಂ, ಹಿಂದಿ ಸೇರಿದಂತೆ 17ಕ್ಕೂ ಹೆಚ್ಚು ಭಾಷೆಗಳಲ್ಲಿ 48 ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಹಾಡಿದ್ದಾರೆ. ಅವರು ಆಂಧ್ರಪ್ರದೇಶದವರಾಗಿದ್ದರು. ಕನ್ನಡ ಚಿತ್ರರಂಗಕ್ಕೆ ನೀಡಿದ ಕೊಡುಗೆ ಅಪಾರವಾದದ್ದು, ಅವರು ಕನ್ನಡದಲ್ಲಿ ಸಾವಿರಾರು ಜನಪ್ರಿಯ ಗೀತೆಗಳನ್ನು ಹಾಡಿ ಕನ್ನಡಿಗರ ಮನೆ ಮಾತಾಗಿದ್ದರು. ಎಂದರು.

ವಿದ್ಯಾರ್ಥಿಜೀವನದಲ್ಲಿ ನಾವು ಈ ಕಲೆಗೆ ಮಾರುಹೋಗಿದ್ದೇವು. ಕನ್ನಡ ಚಲನಚಿತ್ರಗಳ ಮುಖಾಂತರ ಅನೇಕ ಪೌರಾಣಿಕ ಸಂಬಂಧಪಟ್ಟ ಚಿತ್ರಗಳನ್ನು ವೀಕ್ಷಣೆ ಮಾಡಿದ್ದೇವು ನಮ್ಮಲ್ಲಿ ಮೇರು ನಟ ರಾಜ್ ಕುಮಾರ್ ಅವರು ನಮ್ಮ ಜಿಲ್ಲೆಯವರಾಗಿದ್ದರು ಕನ್ನಡಚಿತ್ರರಂಗದಲ್ಲಿ ದೊಡ್ಡಮಟ್ಟದಲ್ಲಿ ಹೆಸರು ಮಾಡಿದರು. ಅವರನ್ನು ಮರೆಯಲು ಸಾಧ್ಯವಿಲ್ಲ. ರಾಜ್ ಕುಮಾರ್ ಚಿತ್ರಗಳಲ್ಲಿ ಬಿ.ವಿ.ಶ್ರೀನಿವಾಸ ಅವರ ಹಾಡುಗಳನ್ನು ಹೆಚ್ಚಾಗಿ ಕೇಳುತ್ತಿದ್ದೇವು. ನಂತರ ದಿನಗಳಲ್ಲಿ ಸ್ವತಹ ರಾಜ್ ಕುಮಾರ್ ಅವರೇ ಹಾಡು ಕೇಳುತ್ತಿದ್ದೇವು. ಎಸ್.ಬಿ.ಬಾಲಸುಬ್ರಹ್ಮಂ ಅವರು ಬಹಳ ಗಾನಕೋಗಿಲೆ ಅವರು ಹಾಡುಗಳನ್ನು ನೆನಪಿನಲ್ಲಿ ಉಳಿದಿವೆ ಎಂದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ ಪಾಪು, ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮಾತನಾಡಿದರು. ಆಯೋಜಕಿ ಕೆಪಿಸಿಸಿ ರಾಜ್ಯ ಮಹಿಳಾ ಕಾರ್ಯದರ್ಶಿ ಕಾವೇರಿಶಿವಕುಮಾರ್. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಉದ್ಯಮಿ ಶ್ರೀನಿಧಿಕುದರ್, ಜ.ಸುರೇಶ್‌ನಾಗ್, ಸುರೇಶ್‌ಗೌಡ್ರು, ಗಾಯಕಿ ಪದ್ಮಾಕ್ಷಿ, ಸಿ.ರಂಗಸ್ವಾಮಿ ಇತರರು ಹಾಜರಿದ್ದರು.

## ಭೀಮನಬೀಡು ಸರ್ಕಾರಿ ಶಾಲೆಗೆ ವಿದ್ಯುತ್ ಕೊರತೆ

### ಬಿಸಿಲಿನ ತಾಪಕ್ಕೆ ಮಕ್ಕಳ ಪರದಾಟ; ತಕ್ಷಣ ಸಂಪರ್ಕ ಕಲ್ಪಿಸಲು ಒತ್ತಾಯ



**ಗುಂಡ್ಲುಪೇಟೆ:** ತಾಲೂಕಿನ ಭೀಮನಬೀಡು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ತರಗತಿ ಕೊಠಡಿಗಳಿಗೆ ಇದುವರೆಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರುವುದರಿಂದ ವಿದ್ಯಾರ್ಥಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಶಾಲೆಯ ತರಗತಿ ಕೊಠಡಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಹಲವು ಬಾರಿ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಗ್ರಾಮ ಪಂಚಾಯಿತಿಗೆ ಮನವಿ ಸಲ್ಲಿಸಿದ್ದರೂ ಯಾವುದೇ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಗ್ರಾಮಸ್ಥರು ದೂರಿದ್ದಾರೆ.

ವಿದ್ಯುತ್ ಸಂಪರ್ಕವಿಲ್ಲದೆ ಬಿಸಿಲಿನ ದಿನಗಳಲ್ಲಿ ತರಗತಿ ಕೊಠಡಿಗಳಲ್ಲಿ ವಿಪರೀತ ಶಾಖ ಉಂಟಾಗುತ್ತಿದ್ದು, ಮಕ್ಕಳು ಪಾಠ ಕೇಳಲು ಪರದಾಡುವಂತಾಗಿದೆ.

ಶಾಲಾ ಕಟ್ಟಡಗಳ ಮೇಲ್ಚಾವಣಿಗೆ ಸೀಟ್ ಅಳವಡಿಸಿರುವುದರಿಂದ ಬಿಸಿಲಿನ ತಾಪ ನೇರವಾಗಿ ಕೊಠಡಿಗಳೊಳಗೆ ಹರಡುತ್ತಿದೆ.

ಇದರಿಂದ ತರಗತಿಗಳಲ್ಲಿ ಕುಳಿತುಕೊಳ್ಳುವುದೇ ಮಕ್ಕಳಿಗೆ ಕಷ್ಟವಾಗಿದ್ದು, ಕಲಿಕೆಗೆ ತೊಂದರೆಯಾಗುತ್ತಿದೆ. ಶಾಲೆಯ ಮೇಲ್ಚಾವಣಿ ಹಾಗೂ ಕೊಠಡಿಗಳ ಅಗತ್ಯ ದುರಸ್ತಿ ಕಾರ್ಯ ಕೈಗೊಂಡು, ಮಕ್ಕಳಿಗೆ ಸುರಕ್ಷಿತ ಮತ್ತು ಉತ್ತಮ ಕಲಿಕಾ ವಾತಾವರಣ ಕಲ್ಪಿಸಬೇಕೆಂಬ ಒತ್ತಾಯವೂ ಕೇಳಿಬಂದಿದೆ.

ಈ ಹಿನ್ನೆಲೆಯಲ್ಲಿ ಭೀಮನಬೀಡು ಗ್ರಾಮ ಪಂಚಾಯಿತಿಗೆ ಲಿಖಿತ ಮನವಿ ಸಲ್ಲಿಸಲಾಗಿದ್ದು, ಸ್ಥಳೀಯ ಶಾಸಕರು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಸೂಚನೆ ನೀಡಿ ಶಾಲೆಗೆ ವಿದ್ಯುತ್ ಸಂಪರ್ಕ ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ಗ್ರಾಮಸ್ಥರು ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಬಸವ, ಮುಖ್ಯ ಶಿಕ್ಷಕರಾದ ವೀರಭದ್ರ ಹಾಗೂ ಮಂಜುನಾಥ್, ರೈತ ಸಂಘದ ರಾಜ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ರಸ್ತೆಯಲ್ಲಿ ಮರಿಯಾನೆ ಅನಾಥ ಓಡಾಟ; ತಾಯಿ ಆನೆ ಪತ್ತೆಯಾಗದ ಹಿನ್ನೆಲೆ ಮೃಗಾಲಯಕ್ಕೆ ರವಾನೆ

**ಚಾಮರಾಜನಗರ:** ಮರಿಯಾನೆಯೊಂದು ರಸ್ತೆಯಲ್ಲಿ ಅನಾಥ ಪ್ರಜ್ಞೆಯಲ್ಲಿ ಓಡಾಡುತ್ತಿದ್ದು ತಾಯಿಯಾನೆಯಿಂದ ಬೇರ್ಪಟ್ಟ ಶಂಕೆ ವ್ಯಕ್ತವಾಗಿ ವಾಹನ ಸವಾರರ ಮೊಬೈಲ್‌ನಲ್ಲಿ ಮರಿಯಾನೆಯ ಓಡಾಟದ ದೃಶ್ಯ ಸೆರೆಯಾಗಿತ್ತು.



ಮಲೆ ಮಹದೇಶ್ವರ ವನ್ಯಜೀವಿ ಧಾಮದ ಹನೂರು ಬಫರ್ ವಲಯದ ಹನೂರು-ಅಜ್ಜೀಪುರ ಮುಖ್ಯ ರಸ್ತೆಯಲ್ಲಿ ಮರಿ ಆನೆಯೊಂದು ರಸ್ತೆಯಲ್ಲಿ ಅಡ್ಡಾದಿಡ್ಡಿ ಓಡಾಡುತ್ತಿದ್ದನ್ನು ಕಂಡು ವಾಹನ ಸವಾರರು ಆತಂಕ ಹೊರಹಾಕಿದ್ದರು.

ಹನೂರು ಬಫರ್ ವಲಯದ ಅಜ್ಜೀಪುರ ಮುಖ್ಯ ರಸ್ತೆಯ ಅರಕನಹಳ್ಳ ಸಮೀಪ ಪ್ರತಿನಿತ್ಯ ಆನೆಗಳ ಹಿಂಡು ನೀರು ಕುಡಿಯಲು ಬರುತ್ತದೆ. ಈ ಮಾರ್ಗದಲ್ಲಿ ಆನೆಗಳ ಓಡಾಟ ಯುವಕರು ಹಾಗೂ ಪ್ರಯಾಣಿಕರಿಗೆ ಸಾಮಾನ್ಯವಾಗಿ ಕಂಡುಬರುತ್ತದೆ. ಅದೇ ರೀತಿ ಭಾನುವಾರ ಸಂಜೆ ಒಂದು ಮರಿ ಆನೆ ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಗಾಬರಿಯಿಂದ ಓಡಾಡುತ್ತಿರುವುದು ಕಂಡುಬಂದಿದ್ದರಿಂದ ಈ ಮಾರ್ಗದಲ್ಲಿ ತಮಿಳುನಾಡಿಗೆ ಕಬ್ಬು, ತರಕಾರಿ, ಮರ ಮತ್ತು ಕಲ್ಲು ಸಾಗಣೆ ಮಾಡುವ ಅತಿ ಹೆಚ್ಚು ಭಾರದ ವಾಹನಗಳು ಸಂಚರಿಸುತ್ತವೆ. ಮರಿ ಆನೆ ಗಾಬರಿಯಿಂದ ರಸ್ತೆಯ ಬದಿಯಲ್ಲಿಯೇ ಇರುವುದರಿಂದ ಯಾವುದಾದರೂ ಅನಾಹುತ ಸಂಭವಿಸುವ ಸಾಧ್ಯತೆ ಇದೆ. ಈ ನಿಟ್ಟಿನಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳು ಕೂಡಲೇ ಕ್ರಮ ಕೈಗೊಂಡು ಮರಿ ಆನೆಯನ್ನು ಸಂರಕ್ಷಣೆ ಮಾಡಬೇಕಿದೆ ಎಂದು ಸ್ಥಳೀಯರು ಒತ್ತಾಯಿಸಿದ್ದರು.

ವಾಹನ ಸವಾರರಿಂದ ಮರಿಯಾನೆ ಓಡಾಟ ತಿಳಿದುಬಂದ ಹಿನ್ನೆಲೆ ಅರಣ್ಯ ಇಲಾಖೆ ಸಿಬ್ಬಂದಿ ಆನೆ ಮರಿಯನ್ನು ರಕ್ಷಿಸಿದ್ದಾರೆ. ಅನಾಥವಾಗಿ ಓಡಾಡುತ್ತಿದ್ದ ಆನೆಮರಿಯನ್ನು ರಕ್ಷಿಸಿ ಮೈಸೂರಿನ ಮೃಗಾಲಯಕ್ಕೆ ಬಿಡಲಾಗಿದೆ ಎಂದು ಮಲೆಮಹದೇಶ್ವರ ವನ್ಯಜೀವಿಧಾಮದ ಅಧಿಕಾರಿಗಳು ಸೋಮವಾರ ರಾತ್ರಿ ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ದಿಕ್ಕು ತೋಚದೆ ಅಡ್ಡಾಡುತ್ತಿದ್ದ ಆನೆಮರಿಯು ಒಂದು ತಿಂಗಳ ಗಂಡು ಮರಿಯಾಗಿದ್ದು ತಾಯಿ ಆನೆಯನ್ನು ಹುಡುಕಿದರೂ ಕೂಡ ಪತ್ತೆಯಾಗದ ಹಿನ್ನೆಲೆ ಮೃಗಾಲಯಕ್ಕೆ ಬಿಡಲಾಗಿದೆ. ಆನೆ ಮರಿಯ ಆರೋಗ್ಯದ ಮೇಲೆ ನಿಗಾ ಇಡಲಾಗಿದೆ ಎಂದು ಹೇಳಿದ್ದಾರೆ.

## ಕೆಬ್ಬೇಪುರದಲ್ಲಿ ಅಸ್ಪೃಶ್ಯತೆ ಆಚರಣೆ; ನಾಲ್ಕು ಜನರ ಮೇಲೆ ಎಆರ್ ದಾಖಲು

**ಚಾಮರಾಜನಗರ:** ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ ಶಾಲಾ ಮಕ್ಕಳಿಗೆ ಊಟ ಬಡಿಸದೇ ಅಸ್ಪೃಶ್ಯತೆ ಆಚರಣೆ ಮಾಡಿದ್ದ ನಾಲ್ವರ ವಿರುದ್ಧ ಎಸ್ಸಿ-ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಕೆಬ್ಬೇಪುರ ಗ್ರಾಮದಲ್ಲಿ ಸೆ.18ರಂದು ಬಂಡಿ ಮೆರವಣಿಗೆ ಉತ್ಸವದ ಅಂಗವಾಗಿ ಬಸವೇಶ್ವರ ದೇವಸ್ಥಾನದ ಮುಂಭಾಗ ಶಾಮಿಯಾನ ಹಾಕಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಗ್ರಾಮದ ಸರ್ಕಾರಿ ಶಾಲೆಯ ಮಕ್ಕಳನ್ನು ಊಟಕ್ಕೆ ಆಹ್ವಾನಿಸಲಾಗಿತ್ತು ಎನ್ನಲಾಗಿದೆ.

ಕೆಬ್ಬೆಪುರ ಗ್ರಾಮದ ಕೃಷ್ಣಮೂರ್ತಿ ಅವರು ಬೇಗೂರು ಠಾಣೆಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಈ ಸಂಬಂಧ ಗ್ರಾಮದ ಮಲ್ಲೇಶ್, ಮಹೇಂದ್ರ, ಶಾಲೆಯ ಮುಖ್ಯ ಶಿಕ್ಷಕ ಹರೀಶ್ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಸಂಪತ್ ವಿರುದ್ಧ ಎಸ್ಸಿ, ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣ ದಾಖಲಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಬೇಗೂರು ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

## ಹರದನಹಳ್ಳಿ: ಗಾಳಿ ಸಹಿತ ಮಳೆಗೆ ಬಾಳೆ ಫಸಲು ನಾಶ

**ಚಾಮರಾಜನಗರ:** ಗಾಳಿ ಸಹಿತ ಮಳೆಗೆ ತಾಲೂಕಿನ ಹರದನಹಳ್ಳಿ ಹೋಬಳಿ ವ್ಯಾಪ್ತಿಯ ರೈತರು ಬಾಳೆ, ತೆಂಗು ಹಾಗೂ ಅಡಿಕೆ ಫಸಲ ನಾಶವಾಗಿದ್ದು, ಬರದಿಂದ ಕೆಂಗಟ್ಟಿದ್ದ ರೈತರಿಗೆ ಮತ್ತೊಂದು ಅಘಾತವಾಗಿದೆ.

ತಾಲೂಕಿನ ಹರದನಹಳ್ಳಿ, ಬಂಡಿಗೆರೆ, ಬಸವಪುರ, ಬ್ಯಾಡಮೂಡ್ಲು, ದೊಳ್ಳಿಪುರ, ಗ್ರಾಮಗಳ ವ್ಯಾಪ್ತಿಯಲ್ಲಿ 150ಕ್ಕು ಹೆಚ್ಚು ಎಕರೆ ಪ್ರದೇಶದಲ್ಲಿ ಬೆಳೆದಿದ್ದ



ಫಸಲುಗಳು ರಾತ್ರಿ ಬಿದ್ದ ಗಾಳಿ ಸಹಿತ ಮಳೆಗೆ ನೆಲಕ್ಕುಳಿವೆ. ಬಾಳೆ ಫಸಲು ಕಟಾವಿಗೆ ಬಂದಿದ್ದು, ಕೈಗೆ ಬಂದ ತುತ್ತು ಬಾಯಿಗೆ ಇಲ್ಲದಂತಾಗಿದೆ. ತೋಟದ ಮನೆಗೆ ತೆಂಗಿನ ಮರಗಳು ಬಿದ್ದು, ಅಪಾರ ಪ್ರಮಾಣದ ಹಾನಿಯಾಗಿದೆ. ಮನೆಯಲ್ಲಿದ್ದ ವರಿಗೆ ಯಾವುದೇ ಪ್ರಾಣಾಪಾಯವಾಗಿಲ್ಲ. ಮಧ್ಯರಾತ್ರಿಯಲ್ಲಿ ಸುರಿದ ಮಳೆಗೆ ಬಾಳೆ ಫಸಲು ಸಂಪೂರ್ಣವಾಗಿ ನೆಲಕ್ಕಚ್ಚಿದೆ.

**ಪರಿಹಾರಕ್ಕೆ ಒತ್ತಾಯ:** ಹರದನಹಳ್ಳಿ ಸುತ್ತಮುತ್ತಲ ಜಮೀನಿನಲ್ಲಿ ರೈತರು ಮಳೆಯ ಕೊರತೆಯ ನಡುವೆ ಲಕ್ಷಾಂತರ ರೂ. ವೆಚ್ಚ ಮಾಡಿ, ಬೋವೆಲ್ ಬರುತ್ತಿದ್ದ ಕಡಿಮೆ ನೀರಿನಲ್ಲಿ ಕಷ್ಟಪಟ್ಟು ಬಾಳೆ ಬೆಳೆದ್ದು, ಈ ಫಸಲು ಕಟಾವಿನ ಹಂತಕ್ಕೆ ಬಂದಿತ್ತು. ನಷ್ಟಕ್ಕೆ ಒಳಗಾಗಿರುವ ರೈತರಿಗೆ ವೈಜ್ಞಾನಿಕ ಪರಿಹಾರ ಕಲ್ಪಿಸಿಕೊಡಬೇಕು. ಜಿಲ್ಲಾ ಉಸ್ತುವಾರಿ ಸಚಿವರಾದ ಸಿ. ಪುಟ್ಟರಂಗಶೆಟ್ಟರು ಸಹ ಅಧಿಕಾರಿಗಳಿ ಸೂಕ್ತ ಮಾರ್ಗದರ್ಶನ ನೀಡಿ ಪರಿಹಾರ ಕಲ್ಪಿಸಿಕೊಡಬೇಕೆಂದು ಹರದನಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಚ್.ಎಂ. ಮಹದೇವಶೆಟ್ಟಿ ಒತ್ತಾಯಿಸಿದ್ದಾರೆ.

## ಛಾಯಾಗ್ರಾಹಕರಿಗೆ ಸಾಮಾಜಿಕ ಭದ್ರತೆ ಅಗತ್ಯ: ಗಣೇಶ್ ದೀಕ್ಷಿತ್

**ಚಾಮರಾಜನಗರ:** ಛಾಯಾಗ್ರಾಹಕರು ಹಾಗೂ ವಿಡಿಯೋಗ್ರಾಫರ್‌ಗಳ ವೈಯಕ್ತಿಕ ಮತ್ತು ಆರ್ಥಿಕ ಯೋಗಕ್ಷೇಮದ ಬಗ್ಗೆ ಸಮಾಜ ಹಾಗೂ ಸರ್ಕಾರ ಸೂಕ್ತ ಗಮನಹರಿಸುವ ಅಗತ್ಯವಿದೆ ಎಂದು ಚಾಮರಾಜನಗರ ಜಿಲ್ಲಾ ಗ್ರಾಹಕರ ಸಂಘದ ಜಿಲ್ಲಾ ಗೌರವಾಧ್ಯಕ್ಷ ಗಣೇಶ್ ದೀಕ್ಷಿತ್ ಹೇಳಿದರು.

ನಗರದ ಶ್ರೀ ಶಿವಕುಮಾರ ಸ್ವಾಮಿ ಭವನದಲ್ಲಿ ಚಾಮರಾಜನಗರ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದ 2025-26ನೇ ಸಾಲಿನ ವಾರ್ಷಿಕ ಮಹಾಸಭೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಕ್ಯಾಮೆರಾ ಕಣ್ಣಿನ ಮೂಲಕ ಪ್ರಪಂಚದ ಸೌಂದರ್ಯ ಹಾಗೂ ಜನರ ಜೀವನದ ಅಮೂಲ್ಯ ಕ್ಷಣಗಳನ್ನು ಸೆರೆಹಿಡಿಯುವ ಛಾಯಾಗ್ರಾಹಕರ ಬದುಕು ಹೊರನೋಟಕ್ಕೆ ವರ್ಣಮಯವಾಗಿ ಕಾಣಿಸಿದರೂ, ಅವರ ವೃತ್ತಿಯಲ್ಲಿ ಹಲವು ಸವಾಲುಗಳಿವೆ. ಆರೋಗ್ಯ ಮತ್ತು ಜೀವ ವಿಮೆ, ಆರ್ಥಿಕ ಭದ್ರತೆ, ಋತುಮಾನದ ಕೆಲಸದ ಸಂಕಷ್ಟ ಹಾಗೂ ಆಧುನಿಕ ತಂತ್ರಜ್ಞಾನಕ್ಕೆ ಅಗತ್ಯವಿರುವ ದುಬಾರಿ ಉಪಕರಣಗಳನ್ನು ಖರೀದಿಸುವುದು ಪ್ರಮುಖ ಸವಾಲುಗಳಾಗಿವೆ ಎಂದರು.

ಛಾಯಾಗ್ರಾಹಕರಿಗೆ ಉಚಿತ ಅಥವಾ ರಿಯಾಯಿತಿ ದರದಲ್ಲಿ ಆರೋಗ್ಯ ಮತ್ತು ಜೀವ ವಿಮೆ




ಸೌಲಭ್ಯ ಕಲ್ಪಿಸಬೇಕು. ರಾಜ್ಯ ಮಟ್ಟದಲ್ಲಿ ಛಾಯಾಗ್ರಾಹಕರಿಗಾಗಿ ಪ್ರತ್ಯೇಕ ಕ್ಷೇಮಾಭಿವೃದ್ಧಿ ಮಂಡಳಿ ಸ್ಥಾಪನೆಯಾದರೆ ಪಿಂಚಣಿ, ತುರ್ತು ವೈದ್ಯಕೀಯ ನೆರವು ಹಾಗೂ ಮಕ್ಕಳ ಶಿಕ್ಷಣಕ್ಕೆ ಸಹಕಾರ ದೊರೆಯಲಿದೆ. ಆಧುನಿಕ ಕ್ಯಾಮೆರಾ ಹಾಗೂ ಉಪಕರಣಗಳ ಖರೀದಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಅಥವಾ ಸಬ್ಸಿಡಿ ಸೌಲಭ್ಯ ನೀಡುವ ಮೂಲಕ ವೃತ್ತಿಪರ ಬೆಳವಣಿಗೆಗೆ ಉತ್ತೇಜನ ನೀಡಬೇಕು ಎಂದು ಹೇಳಿದರು.

ಸಂಘದ ಕಾರ್ಯದರ್ಶಿ ಸ್ವಾಮಿ ಮಾತನಾಡಿ, ಛಾಯಾಗ್ರಾಹಕರು ಸರ್ಕಾರದಿಂದ ದೊರೆಯುವ ವಿವಿಧ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು. ಕಾರ್ಮಿಕ ಇಲಾಖೆಯಿಂದ ದೊರೆಯುವ ಕಾರ್ಮಿಕ ಕಾರ್ಡ್‌ಗಳನ್ನು ಪಡೆದು ಅದರ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಚಾಮರಾಜನಗರ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋ ಗ್ರಾಫರ್ ಸಂಘ ಕೆ.ಎಂ. ಕುಮಾರ್ ಕಂಠಿ ಮಾತನಾಡಿ, ವಾರ್ಷಿಕ ಮಹಾಸಭೆಯಲ್ಲಿ ಸಂಘದ ವತಿಯಿಂದ ಈವರೆಗೆ ನಡೆದ ಕಾರ್ಯಕ್ರಮಗಳು ಹಾಗೂ ಚಟುವಟಿಕೆಗಳ ಕುರಿತು ವಿವರಿಸಿದರು ಕ್ರಿಕೆಟ್ ಪಂದ್ಯಾವಳಿ ಸೇರಿದಂತೆ ವಿವಿಧ ಕಾರ್ಯಕ್ರಮಗಳು ಹಾಗೂ ಸಂಕಷ್ಟದಲ್ಲಿದ್ದ ಛಾಯಾಗ್ರಾಹಕರ ಕುಟುಂಬಕ್ಕೆ 1 ಲಕ್ಷ ಧನಸಹಾಯ ನೀಡಿದ ಕಾರ್ಯದ ಬಗ್ಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಚಾಮರಾಜನಗರ ತಾಲೂಕು ಫೋಟೋಗ್ರಾಫರ್ ಮತ್ತು ವಿಡಿಯೋಗ್ರಾಫರ್ ಸಂಘದ ತಾಲೂಕು ಗೌರವಾಧ್ಯಕ್ಷ ಅನಂತನಾರಾಯಣ, ಎಂ.ಕೆ.ಪ್ರಕಾಶ್ ಸೇರಿದಂತೆ ಸಂಘದ ಪದಾಧಿಕಾರಿಗಳು, ಛಾಯಾಗ್ರಾಹಕರು ಭಾಗವಹಿಸಿದ್ದರು.

# ಕುಡಿಯುವ ನೀರಿನ ಸಮಸ್ಯೆ ಇರುವ ಗ್ರಾಮಗಳಿಗೆ ಖುದ್ದು ಭೇಟಿ ನೀಡಿ ವರದಿ ಸಲ್ಲಿಸಿ: ಸಿಇಓ



**ಮಂಡ್ಯ:** ಜಿಲ್ಲೆಯ ಗ್ರಾಮಾಂತರ ಪ್ರದೇಶದ ಯಾವುದೇ ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕು. ನೀರಿನ ಸಮಸ್ಯೆ ಎದುರಾಗಬಹುದಾದ ಗ್ರಾಮಗಳಿಗೆ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕಅಧಿಕಾರಿಗಳು (ಇಓ) ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು (JEE) ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು ಎಂದು ಜಿಲ್ಲಾ ಪಂಚಾಯತ್ ಸಿಇಓ ನಂದಿನಿ ಕೆ.ಆರ್. ಅವರು ಸೂಚಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್‌ನಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕುಡಿಯುವ ನೀರಿನ ಸಮಸ್ಯೆ ಕಂಡುಬಂದಿರುವ ಅಥವಾ ಎದುರಾಗುವ ಸಾಧ್ಯತೆ ಇರುವ ಗ್ರಾಮಗಳಿಗೆ ಅಧಿಕಾರಿಗಳು ಖುದ್ದು ಭೇಟಿ ನೀಡಿ, ಸ್ಥಳದ ಜಿ.ಪಿ.ಎಸ್. ಛಾಯಾಚಿತ್ರಗಳೊಂದಿಗೆ ವಾಸ್ತವ ಸ್ಥಿತಿಯ ವರದಿಯನ್ನು ಸಲ್ಲಿಸಬೇಕು ಎಂದರು.

ನೀರಿನ ಸಮಸ್ಯೆ ಆರಂಭವಾದ ನಂತರ ಕ್ರಮ ಕೈಗೊಳ್ಳುವ ಬದಲು ಮುಂಚಿತವಾಗಿಯೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಸಮಸ್ಯೆ ಕಂಡುಬಂದ 24 ಗಂಟೆಯೊಳಗೆ ಪರಿಹಾರ ಕ್ರಮಗಳನ್ನು ಕೈಗೊಂಡು ನೀರು ಸರಬರಾಜು ಪುನಃಸ್ಥಾಪಿಸಲು ಅಧಿಕಾರಿಗಳು ಆದ್ಯತೆ ನೀಡಬೇಕು ಎಂದು ತಿಳಿಸಿದರು.

ಖಾಸಗಿ ಕೊಳವೆ ಬಾವಿಗಳಿಗೆ ಬಾಡಿಗೆ ಪಾವತಿಸಿ ವರದಿ ಸಲ್ಲಿಸಿ

ಈಗಾಗಲೇ ನೀರು ಸರಬರಾಜಿಗಾಗಿ ಬಾಡಿಗೆಗೆ ಪಡೆಯಲಾಗಿರುವ ಖಾಸಗಿ ಕೊಳವೆ ಬಾವಿಗಳಿಗೆ ನಿಯಮಾನುಸಾರ ಬಾಡಿಗೆ ಮೊತ್ತವನ್ನು ಪಾವತಿಸಿ, ಅದರ ಕುರಿತು ವರದಿಯನ್ನು ಸಲ್ಲಿಸುವಂತೆ ತಾಲೂಕು ಪಂಚಾಯತ್ ಇಓ ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಎಇಇಗಳಿಗೆ ಸೂಚಿಸಿದರು.

ಟಾಸ್ಕ್ ಫೋರ್ಸ್ ಅನುದಾನಕ್ಕೆ ನಿಯಮಾನುಸಾರ ಕ್ರಿಯಾ ಯೋಜನೆ

ತುರ್ತು ಕುಡಿಯುವ ನೀರಿನ ಕಾಮಗಾರಿಗಳನ್ನು ಕೈಗೊಳ್ಳಲು ಜಿಲ್ಲೆಗೆ ಬಿಡುಗಡೆಯಾಗಿರುವ ಟಾಸ್ಕ್ ಫೋರ್ಸ್ ಅನುದಾನಕ್ಕೆ ಅನುಗುಣವಾಗಿ ನಿಯಮಾನುಸಾರ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆಗೆ ಸಲ್ಲಿಸಬೇಕು. ಕ್ರಿಯಾ ಯೋಜನೆಯಲ್ಲಿನ ಕಾಮಗಾರಿಗಳು ಮಾನ್ಯ ಶಾಸಕರ ಅಧ್ಯಕ್ಷತೆಯ ಟಾಸ್ಕ್ ಫೋರ್ಸ್ ಸಮಿತಿ ಸಭೆಯಲ್ಲಿ ಅನುಮೋದನೆಯಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ಕುಡಿಯುವ ನೀರಿನ ಸಮಸ್ಯೆ ಪರಿಹಾರಕ್ಕೆ ಆದ್ಯತೆಯ ಕ್ರಮ

ಟಾಸ್ಕ್ ಫೋರ್ಸ್ ಅನುದಾನದಡಿ ಕಾಮಗಾರಿಗಳನ್ನು ಆದ್ಯತೆಯ ಆಧಾರದ ಮೇಲೆ ಕೈಗೊಳ್ಳಬೇಕು ಎಂದು ಈಗಾಗಲೇ ಹಲವು ಬಾರಿ ಸೂಚಿಸಲಾಗಿದೆ. ಅದರಂತೆ,

1. ಈಗಿರುವ ಕೊಳವೆ ಬಾವಿಗಳ ಫ್ಲಷಿಂಗ್ ಮತ್ತು ಡೀಪನಿಂಗ್ ಕಾಮಗಾರಿಗಳಿಗೆ ಮೊದಲ ಆದ್ಯತೆ ನೀಡಬೇಕು.
2. ನಂತರ ಈಗಾಗಲೇ ಕೊರೆಸಲಾಗಿರುವ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವುದು ಹಾಗೂ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗಳಿಗೆ ಆದ್ಯತೆ ನೀಡಬೇಕು.
3. ಈ ಕ್ರಮಗಳಿಂದಲೂ ಸಮಸ್ಯೆ ಪರಿಹಾರವಾಗದಿದ್ದಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ನಿಯಮಾನುಸಾರ ಬಾಡಿಗೆಗೆ ಪಡೆದು ನೀರು ಸರಬರಾಜು ಮಾಡಬೇಕು.
4. ಖಾಸಗಿ ಕೊಳವೆ ಬಾವಿ ಲಭ್ಯವಿಲ್ಲದ ಸಂದರ್ಭದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ಕ್ರಮವಹಿಸಬೇಕು.
5. ಮೇಲಿನ ಯಾವುದೇ ಕ್ರಮಗಳಿಂದಲೂ ಸಮಸ್ಯೆ ಪರಿಹಾರವಾಗದಿದ್ದಲ್ಲಿ ಮಾತ್ರ ನಿಯಮಾನುಸಾರ ಹೊಸ ಕೊಳವೆ ಬಾವಿ ಕೊರೆಸಲು ಕ್ರಮವಹಿಸಬೇಕು.

ಯಾವುದೇ ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆ ಉಂಟಾದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ತ್ವರಿತವಾಗಿ ಸ್ಪಂದಿಸಿ, ಪರ್ಯಾಯ ವ್ಯವಸ್ಥೆ ಕಲ್ಪಿಸುವುದು ಹಾಗೂ ಸಮಸ್ಯೆ ಮರುಕಳಿಸದಂತೆ ಶಾಶ್ವತ ಪರಿಹಾರದ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಜಿ.ಪಂ. ಸಿಇಓ ನಂದಿನಿ ಕೆ.ಆರ್. ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ಉಪಕಾರ್ಯದರ್ಶಿ (ಅಭಿವೃದ್ಧಿ) ಲಕ್ಷ್ಮಿ ಪಿ., ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯಪಾಲಕ ಅಭಿಯಂತರರಾದ ಪ್ರಮೋದ್ ಕುಮಾರ್ ಎನ್.ಜಿ., ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳಾದ ಸುಷ್ಮಾ, ರಾಮಲಿಂಗಯ್ಯ, ಶ್ರೀನಿವಾಸ್, ಲೋಕೇಶ್ ಮೂರ್ತಿ, ಸತೀಶ್, ವೀಣಾ, ಚಂದ್ರು ಸೇರಿದಂತೆ ತಾ.ಪಂ. ಗಳ ಸಹಾಯಕ ನಿರ್ದೇಶಕರುಗಳು, ಜಿಲ್ಲೆಯ ಎಲ್ಲಾ ಉಪ-ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು ಹಾಜರಿದ್ದರು.

# ಸೆ. 24ರಂದು ರೈತರ ಸೊಸೈಟಿ(ಟಿಎಪಿಸಿಎಂಎಸ್) ವಾರ್ಷಿಕ ಮಹಾಸಭೆ: ಸೋಮಶೇಖರ್

**ಮಂಡ್ಯ:** ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ (TAPCMS) ಮಂಡ್ಯ ಇದರ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯು ಸೆ. 24 ರ ಗುರುವಾರ ಬೆಳಿಗ್ಗೆ 11-00 ಗಂಟೆಗೆ ಮಂಡ್ಯದ ರೈತ ಸಭಾಂಗಣದ ಆವರಣದಲ್ಲಿಸಂಘದ ಅಧ್ಯಕ್ಷರಾದ ಯು.ಸಿ.ಶೇಖರ್ ರವರ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಆಡಳಿತ ಮಂಡಳಿ ನಿರ್ದೇಶಕರಾದ ಬೇಲೂರು ಸೋಮಶೇಖರ್ ಅವರು ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು 1948ರಲ್ಲಿ ಪೂಜ್ಯ ಕೆ.ವಿ. ಶಂಕರಗೌಡರು ಇಡೀ ಏಷ್ಯಾದಲ್ಲೇ ಮೊದಲ ಬಾರಿಗೆ ಮಂಡ್ಯದಲ್ಲಿ ರೈತರ ಮಾರಾಟ ಸಹಕಾರ ಸಂಘವನ್ನು ಪ್ರಾರಂಭಿಸಿದರು. ಅವರ ಮೂಲ ಉದ್ದೇಶವನ್ನು ಇಂದಿಗೂ ನಾವು ಅತ್ಯಂತ ಪ್ರಾಮಾಣಿಕವಾಗಿ ಜಾರಿಗೆ ತರುತ್ತಿದ್ದೇವೆ. ಇದೇ ಮಾದರಿಯಲ್ಲಿ ರಾಜ್ಯ ಮತ್ತು ರಾಷ್ಟ್ರದಲ್ಲೂ ಖಿಂಕಅಒಖ ಗಳು ರಚನೆಯಾಗಿ ರೈತರಿಗೆ ಸೇವೆ ನೀಡುತ್ತಿವೆ ಎಂದರು.

ಸಹಕಾರ ಸಂಘಗಳು ಅಂಚೆ ಮೂಲಕ ಆಹ್ವಾನ ಪತ್ರಿಕೆ ಸರಿಯಾಗಿ ತಲುಪಿಸುತ್ತಿಲ್ಲ. ಹೀಗಾಗಿ ಪತ್ರಿಕಾ ಮಾಧ್ಯಮಗಳ ಮೂಲಕ ಸಭೆಯ ಬಗ್ಗೆ ಮಾಹಿತಿ ನೀಡುತ್ತಿದ್ದೇವೆ ಎಂದರು.

**ಸದಸ್ಯರು ಮತ್ತು ಆದಾಯದ ವಿವರ:** ಸಂಸ್ಥೆಯಲ್ಲಿ ಒಟ್ಟು 9,268 ಬಿ-ತರಗತಿ ಸದಸ್ಯರು ಹಾಗೂ ಮಂಡ್ಯ ತಾಲೂಕು ವ್ಯಾಪ್ತಿಯ 49 ಎ-ತರಗತಿ ವ್ಯವಸಾಯ ಸಹಕಾರ ಸಂಘಗಳು ಸದಸ್ಯರಾಗಿವೆ. ಯಾವುದೇ ಲಾಭದ ಉದ್ದೇಶವಿಲ್ಲದೆ ಸದಸ್ಯರಿಗೆ ಸೇವೆ ನೀಡಲಾಗುತ್ತಿದೆ ಎಂದರು.

ಈ ಸಾಲಿನ ಆದಾಯದ ವಿವರ ನೀಡಿದ ಅವರು, ಬಟ್ಟೆ ಅಂಗಡಿಯಿಂದ 46,000 ರೂ., ಹಾರ್ಡ್‌ವೇರ್ ವಿಭಾಗದಿಂದ 3,24,000 ರೂ., ಆಹಾರ ಇಲಾಖೆಯ ಅಕ್ಕಿ-ರಾಗಿ ವಿತರಣೆಯಿಂದ 1 ಕೋಟಿ 28 ಲಕ್ಷ ರೂ., ಸೀಮೆಎಣ್ಣೆ ವಿತರಣೆಯಿಂದ 9 ಲಕ್ಷ ರೂ., ವ್ಯವಸಾಯ ವಿಭಾಗದಿಂದ 15,97,000 ರೂ., ಬ್ಯಾಂಕಿಂಗ್ ವಿಭಾಗದಿಂದ 7,56,000 ರೂ. ಆದಾಯ ಬಂದಿದೆ. ಗೋದಾಮು ಗೊಬ್ಬರ ಶಾಖೆ ಮತ್ತು ವರ್ಕ್‌ಶಾಪ್ ವಿಭಾಗಗಳು ಮಾತ್ರ ನಷ್ಟದಲ್ಲಿದ್ದು, ಉಳಿದೆಲ್ಲಾ ವಿಭಾಗಗಳು ಲಾಭದಲ್ಲಿವೆ. ಒಟ್ಟು ಎಲ್ಲಾ ಖರ್ಚು ವೆಚ್ಚ ಕಳೆದು ಈ ವರ್ಷ 73,96,984 ರೂ. ನಿವ್ವಳ ಲಾಭ ಬಂದಿದೆ ಎಂದು ಮಾಹಿತಿ ನೀಡಿದರು.

ಸರ್ವ ಸದಸ್ಯರು ಸಕಾಲಕ್ಕೆ ಸಭೆಗೆ ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕಾಗಿ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಿರ್ದೇಶಕರಾದ ಕೆ.ಸಿ. ರವೀಂದ್ರ,ಜಿ.ಎನ್. ಉದಯಕುಮಾರ್, ಹಿರಿಯ ನಿರ್ದೇಶಕರಾದ ಸಿ.ಕೆ.ಪಾಪಯ್ಯ, ಎಂ.ಪಿ.ಶ್ರೀಧರ್, ಪಿ.ಕೆ.ದೊರೆಸ್ವಾಮಿ,ವ್ಯವಸ್ಥಾಪಕಿ ಚಂದನಾ ಹಾಗೂ ಶಂಕರ್ ಉಪಸ್ಥಿತರಿದ್ದರು.



# ಕಬ್ಬು ಸಾಗಾಣಿಕೆ – ಬಾಕಿ ಪಾವತಿ ಸಮಸ್ಯೆ ಬಗೆಹರಿಸಲು ಸಮನ್ವಯ ಅಗತ್ಯ: ಡಾ. ಕುಮಾರ

**ಮಂಡ್ಯ:** ರೈತರೊಂದಿಗೆ ಒಮ್ಮತ ಹಾಗೂ ಸಹಮತದಿಂದ ಚರ್ಚಿಸಿ, ಅವರ ವಿಶ್ವಾಸವನ್ನು ಗಳಿಸಿಕೊಂಡು ಸಕ್ಕರೆ ಕಾರ್ಖಾನೆಗಳ ಮಾಲೀಕರು ಕಾರ್ಯನಿರ್ವಹಿಸಬೇಕು. ರೈತರ ಹಿತಾಸಕ್ತಿಗೆ ಆದ್ಯತೆ ನೀಡಿ, ಕಬ್ಬು ಸಾಗಾಣಿಕೆ ಹಾಗೂ ಬಾಕಿ ಪಾವತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಸ್ಪರ ಸಮನ್ವಯದ ಮೂಲಕ ಬಗೆಹರಿಸಿಕೊಳ್ಳಬೇಕು. ರೈತರ ಆತ್ಮವಿಶ್ವಾಸಕ್ಕೆ ಧಕ್ಕೆಯಾಗದಂತೆ ಪಾರದರ್ಶಕವಾಗಿ ಕಾರ್ಯನಿರ್ವಹಿಸುವುದು ಅಗತ್ಯ ಎಂದು ಜಿಲ್ಲಾಧಿಕಾರಿ ಡಾ. ಕುಮಾರ್ ಅವರು ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಾಣಿಕೆ ಸಂಬಂಧ ರೈತ ಸಂಘಟನೆಗಳು, ಕಬ್ಬು ಬೆಳೆಗಾರರ ಸಂಘದ ಪದಾಧಿಕಾರಿಗಳು, ಸಕ್ಕರೆ ಕಾರ್ಖಾನೆಗಳ ಮಾಲೀಕರು ಹಾಗೂ ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪ್ರಸ್ತುತ 2026-27ನೇ ಸಾಲಿನ ಕಬ್ಬು ಹಂಗಾಮಿಗೆ ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್‌ಗೆ ?365ರಂತೆ, ಪ್ರತಿ ಟನ್‌ಗೆ ?3,650ರ ಮೂಲ ಎಫ್‌ಆರ್‌ಪಿ ದರ ನಿಗದಿಪಡಿಸಿದೆ. ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚಕ್ಕೆ ಸಂಬಂಧಿಸಿದಂತೆ ಸರ್ಕಾರದ ಆದೇಶ ಹಾಗೂ ನಿಯಮಾವಳಿಗಳನ್ನು ಪಾಲಿಸುವುದು ಅಗತ್ಯವಾಗಿದೆ. ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ರೈತರ ಮೇಲೆ ಹೊರಿಸುವ ಕುರಿತು ರೈತ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿ, ರೈತರ ಮೇಲಿನ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವಂತೆ ಮನವಿ ಮಾಡಿವೆ.

ಕಬ್ಬು ಕಟಾವು ಮಾಡಿದ ನಂತರ ಗದ್ದೆಯಿಂದ ಕಾರ್ಖಾನೆಗೆ ಸಾಗಿಸುವ ವೆಚ್ಚದ ಸಂಪೂರ್ಣ ಹೊರೆಯನ್ನು ರೈತರ ಮೇಲೆ ಹಾಕಬಾರದು. ಕಬ್ಬು ಸಾಗಾಣಿಕೆ ದರವನ್ನು ವೈಜ್ಞಾನಿಕವಾಗಿ ನಿಗದಿಪಡಿಸುವ ಮೂಲಕ ರೈತರಿಗೆ ಅನುಕೂಲ ಕಲ್ಪಿಸಬೇಕು.




ಸರ್ಕಾರದ ಆದೇಶ ಹಾಗೂ ನಿಯಮಾವಳಿಗಳನ್ನು ಪಾಲಿಸಿಯೇ ಮುಂದಿನ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

**ರೈತರ ಹಿತಾಸಕ್ತಿಗೆ ವಿರುದ್ಧವಾದ ತೀರ್ಮಾನ ಬೇಡ:** ರೈತರ ಹಿತಾಸಕ್ತಿಗೆ ವಿರುದ್ಧವಾಗುವ ಅಥವಾ ಅವರಿಗೆ ತೊಂದರೆಯಾಗುವ ಯಾವುದೇ ತೀರ್ಮಾನವನ್ನು ಕೈಗೊಳ್ಳಬಾರದು. ಸರ್ಕಾರದ ಆದೇಶಗಳನ್ನು ಪಾಲಿಸುವ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕು. ಈ ಕುರಿತು ಸಂಬಂಧಿಸಿದ ಎಲ್ಲರೊಂದಿಗೆ ಚರ್ಚಿಸಿ ಒಮ್ಮತದ ತೀರ್ಮಾನಕ್ಕೆ ಬರಬೇಕು ಎಂದು ಅವರು ಹೇಳಿದರು.

ರೈತರು ಇದ್ದರೆ ಮಾತ್ರ ಸಕ್ಕರೆ ಕಾರ್ಖಾನೆಗಳು ನಡೆಯಲು ಸಾಧ್ಯ. ರೈತರ ಹಿತಾಸಕ್ತಿ ಕಾಪಾಡುವುದು ಕಾರ್ಖಾನೆಗಳ ಜವಾಬ್ದಾರಿಯೂ ಹೌದು. ಸಕ್ಕರೆ ಉತ್ಪಾದನೆಯೊಂದಿಗೆ ಮೊಲಾಸಿಸ್, ಬಗಾಸ್, ಎಥನಾಲ್ ಹಾಗೂ ವಿದ್ಯುತ್ ಉತ್ಪಾದನೆಯಂತಹ ಉಪ ಉತ್ಪನ್ನಗಳಿಂದಲೂ ಕಾರ್ಖಾನೆಗಳಿಗೆ ಆದಾಯ ದೊರೆಯುತ್ತದೆ. ಕಾರ್ಖಾನೆಗಳ ಆರ್ಥಿಕ ಹಿತಾಸಕ್ತಿಯೊಂದಿಗೆ ರೈತರ ಹಿತಾಸಕ್ತಿಯನ್ನೂ ಗಮನದಲ್ಲಿಟ್ಟುಕೊಂಡು ಕಾರ್ಯನಿರ್ವಹಿಸಬೇಕು? ಎಂದು ಜಿಲ್ಲಾಧಿಕಾರಿ ತಿಳಿಸಿದರು.

**ರಿಸರ್ವ್ ಏರಿಯಾ ರೈತರಿಗೆ ಆದ್ಯತೆ ನೀಡಿ:** ಸಕ್ಕರೆ ಕಾರ್ಖಾನೆಗಳು ತಮ್ಮ ರಿಸರ್ವ್ ಏರಿಯಾದ ರೈತರಿಗೆ ಹಾಗೂ ಸೀನಿಯಾರಿಟಿ ಆಧಾರದ ಮೇಲೆ ಕಬ್ಬು ಪೂರೈಕೆಗೆ ಆದ್ಯತೆ ನೀಡಬೇಕು. ರಿಸರ್ವ್ ಏರಿಯಾದ ರೈತರು ತಮ್ಮ ಕಬ್ಬು ಪೂರೈಕೆಗೆ ಅನಗತ್ಯವಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ರೈತರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕಬ್ಬು ಸ್ವೀಕಾರ ಮತ್ತು ಸಾಗಾಣಿಕೆ ವ್ಯವಸ್ಥೆ ರೂಪಿಸಬೇಕು ಎಂದು ಜಿಲ್ಲಾಧಿಕಾರಿ ಸೂಚಿಸಿದರು.

**ಬಾಕಿ ಕಬ್ಬಿನ ಹಣವನ್ನು ಶೀಘ್ರ ಪಾವತಿಸಿ:** ಜಿಲ್ಲೆಯ ವಿವಿಧ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಪಾವತಿಸಬೇಕಿರುವ ಕಬ್ಬಿನ ಬಾಕಿ ಹಣವನ್ನು ಶೀಘ್ರವಾಗಿ ಪಾವತಿಸಲು ಕ್ರಮವಹಿಸಬೇಕು. ಈಗಾಗಲೇ ಕಬ್ಬು ಪೂರೈಸಿರುವ ರೈತರು ತಮ್ಮ ಹಣಕ್ಕಾಗಿ ಕಾಯುವ ಪರಿಸ್ಥಿತಿ ನಿರ್ಮಾಣವಾಗಬಾರದು. ನಿಗದಿತ ನಿಯಮಗಳಂತೆ ರೈತರಿಗೆ ಪಾವತಿಯಾಗಬೇಕಾದ ಹಣವನ್ನು ಕಾಲಮಿತಿಯೊಳಗೆ ಪಾವತಿಸಲು ಕಾರ್ಖಾನೆಗಳು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ರೈತರು ಪ್ರಸ್ತುತ ವಿವಿಧ ರೀತಿಯ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವ ಹಿನ್ನೆಲೆಯಲ್ಲಿ, ಅವರ ಮೇಲಿನ ಹೆಚ್ಚುವರಿ ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಕಾರ್ಖಾನೆಗಳು ಹಾಗೂ ಸಂಬಂಧಿಸಿದ ಎಲ್ಲರೂ ಸಹಕರಿಸಬೇಕು. ರೈತರ ಹಿತಾಸಕ್ತಿಗೆ ಆದ್ಯತೆ ನೀಡಿ, ಪಾರದರ್ಶಕವಾಗಿ ಕಾರ್ಯನಿರ್ವಹಿಸಬೇಕು ಎಂದರು.

**ಕಬ್ಬಿನ ತೂಕದಲ್ಲಿ ವ್ಯತ್ಯಾಸವಾಗದಂತೆ ಕ್ರಮ:** ಕಬ್ಬು ಕಟಾವು ಮಾಡಿ ಕಾರ್ಖಾನೆಗೆ ಸಾಗಿಸಿದ ನಂತರ ತೂಕದಲ್ಲಿ ಯಾವುದೇ ವ್ಯತ್ಯಾಸ ಉಂಟಾಗದಂತೆ ತೂಕ ಮತ್ತು ಅಳತೆ ಇಲಾಖೆಯ ಅಧಿಕಾರಿಗಳು ಅಗತ್ಯವಾಗಿ ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಸೂಚಿಸಲಾಗುವುದು. ರೈತರಿಗೆ ತೂಕದ ವಿಚಾರದಲ್ಲಿ ಯಾವುದೇ ಅನುಮಾನ ಅಥವಾ ತೊಂದರೆ ಉಂಟಾಗದಂತೆ ಪಾರದರ್ಶಕ ವ್ಯವಸ್ಥೆ ಕಲ್ಪಿಸಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಸಕ್ಕರೆ ಕಾರ್ಖಾನೆಗಳ ಮಾಲೀಕರು, ಲಾರಿ ಮಾಲೀಕರು ಹಾಗೂ ರೈತ ಸಂಘಟನೆಗಳ ಪ್ರತಿನಿಧಿಗಳು ಪರಸ್ಪರ ಸಮನ್ವಯದಿಂದ ಕಾರ್ಯನಿರ್ವಹಿಸಿ, ಸಮಸ್ಯೆಗಳನ್ನು ತಮ್ಮ ಹಂತದಲ್ಲಿಯೇ ಬಗೆಹರಿಸಿಕೊಳ್ಳಬೇಕು. ರೈತರ ವಿಶ್ವಾಸವನ್ನು ಉಳಿಸಿಕೊಂಡು, ಸರ್ಕಾರದ ನಿಯಮಾವಳಿಗಳಂತೆ ಕಾರ್ಯನಿರ್ವಹಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

ಸಭೆಯಲ್ಲಿ ರೈತ ಮುಖಂಡರು ಕಬ್ಬು ಸಾಗಾಣಿಕೆ ದರವನ್ನು ವೈಜ್ಞಾನಿಕವಾಗಿ ನಿಗದಿಪಡಿಸುವುದು, ಕಟಾವು ಹಾಗೂ ಸಾಗಾಣಿಕೆ ವೆಚ್ಚದ ಹೊರೆಯನ್ನು ರೈತರ ಮೇಲೆ ಹಾಕದಿರುವುದು, ಬಾಕಿ ಕಬ್ಬಿನ ಹಣವನ್ನು ಶೀಘ್ರ ಪಾವತಿಸುವುದು ಹಾಗೂ ರಿಸರ್ವ್ ಏರಿಯಾ ರೈತರಿಗೆ ಆದ್ಯತೆ ನೀಡುವಂತೆ ಮನವಿ ಮಾಡಿದರು.

ಸಭೆಯಲ್ಲಿ ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಜಯಸ್ವಾಮಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪ ನಿರ್ದೇಶಕ ಪ್ರತೀಕ್ ಹೆಗ್ಡೆ, ಸಕ್ಕರೆ ಕಾರ್ಖಾನೆಗಳ ಮಾಲೀಕರು, ಲಾರಿ ಮಾಲೀಕರ ಸಂಘದ ಪ್ರತಿನಿಧಿಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳು ಉಪಸ್ಥಿತರಿದ್ದರು.

# ಜಿಲ್ಲೆಯ ಸಚಿವರ ಬಗ್ಗೆ ಮಾಜಿ ಶಾಸಕರು ಮಾಡಿರುವ ಟೀಕೆಗೆ ಮೈಶುಗರ್ ಅಧ್ಯಕ್ಷ ಸಿ.ಡಿ. ಗಂಗಾಧರ್ ಖಂಡನೆ



**ಮಂಡ್ಯ:** ಜಿಲ್ಲಾ ಉಸ್ತುವಾರಿ ಹಾಗೂ ಜಲ ಸಂಪನ್ಮೂಲ ಸಚಿವ ಎನ್.ಚಲುವರಾಯಸ್ವಾಮಿ ಮತ್ತು ಕೃಷಿ ಸಚಿವ ಹಾಗೂ ಮಳವಳ್ಳಿ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರ ವಿರುದ್ಧ ನಾಗಮಂಗಲ ಮತ್ತು ಮಳವಳ್ಳಿ ಮಾಜಿ ಶಾಸಕರು ಮಾಡಿರುವ ಟೀಕೆಯನ್ನು ಮೈಶುಗರ್ ಅಧ್ಯಕ್ಷ ಹಾಗೂ ಜಿಲ್ಲಾ ಕಾಂಗ್ರೆಸ್ ಮಾಜಿ ಅಧ್ಯಕ್ಷ ಸಿ.ಡಿ. ಗಂಗಾಧರ್ ಅವರು ತೀವ್ರವಾಗಿ ಖಂಡಿಸಿದರು.

ನಗರದಲ್ಲಿ ಗುರುವಾರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇಕೆದಾಟು ಯೋಜನೆ ರಾಜ್ಯದ ಹಿತದೃಷ್ಟಿಯಿಂದ ಅತ್ಯಗತ್ಯ. ಸಮುದ್ರ ಸೇರುವ ಹೆಚ್ಚುವರಿ ನೀರನ್ನು ಸಂಗ್ರಹಿಸಿ ನ್ಯಾಯಮಂಡಳಿ ಆದೇಶದಂತೆ ನೀರು ಹರಿಸಲು ಇದು ಶಾಶ್ವತ ಪರಿಹಾರ. ಇದನ್ನು ಜಿಲ್ಲೆಯ ಜನತೆ ಬಹಳ ನಿರೀಕ್ಷೆಯಿಂದ ಕಾಯುತ್ತಿದ್ದಾರೆ. ಆದರೆ ನಾಗಮಂಗಲದ ಮಾಜಿ ಶಾಸಕ ಸುರೇಶ್‌ಗೌಡ ಅವರು ಮೇಕೆದಾಟುವಿನಿಂದ ಮಂಡ್ಯಕ್ಕೆ ಏನು ಉಪಯೋಗ, ಕೃಷಿ ಭೂಮಿ ಕಿತ್ತುಕೊಳ್ಳುತ್ತಾರೆ ಎಂದು ಹೇಳಿರುವುದು ವೈಜ್ಞಾನಿಕವಲ್ಲದ, ಅಜ್ಞಾನದ ಹೇಳಿಕೆಯಾಗಿದೆ. ಇಂತಹ ಹೇಳಿಕೆ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಮಾರಕವಾಗುವ ಕೆಲಸ ಮಾಡುತ್ತಿದ್ದಾರೆ ಎಂದರು.

ಜಿಲ್ಲೆಯಲ್ಲಿ ನಾಲ್ಕನೇ ಬಾರಿಗೆ ಸಚಿವರಾಗಿ ಜನಮೆಚ್ಚುಗೆ ಗಳಿಸಿರುವ ಎನ್. ಚಲುವರಾಯಸ್ವಾಮಿ ಅವರನ್ನು ರಾಜೀನಾಮೆ ಕೊಟ್ಟು ಬನ್ನಿ ಎಂದು ಹೇಳುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಜನರ ಆಶೀರ್ವಾದದಿಂದ ಆಯ್ಕೆಯಾದವರನ್ನು ಸೋತವರು ಹೇಳಿದ ಮಾತ್ರಕ್ಕೆ ರಾಜೀನಾಮೆ ಕೊಡಿಸಲು ಸಾಧ್ಯವಿಲ್ಲ ಎಂದರು.

ಮಂಡ್ಯ ಜಿಲ್ಲೆಯ ಅಭಿವೃದ್ಧಿ ಕುರಿತು ಮಾತನಾಡಿದ ಅವರು, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾಗ ಕ್ಯಾಬಿನೆಟ್‌ನಲ್ಲಿ ಹೋರಾಟ ಮಾಡಿ ಕೃಷಿ ಆಧಾರಿತ ಜಿಲ್ಲೆಗೆ ಕೃಷಿ ವಿಶ್ವವಿದ್ಯಾಲಯ ತಂದಿದ್ದು, ಮುಚ್ಚುವ ಹಂತದಲ್ಲಿದ್ದ ಮೈಶುಗರ್ ಕಾರ್ಖಾನೆಯನ್ನು ಪುನಶ್ಚೇತನಗೊಳಿಸಿ ಇಂದು ಅಚ್ಚುಕಟ್ಟಾಗಿ ನಡೆಸುತ್ತಿರುವುದು ಚಲುವರಾಯಸ್ವಾಮಿ ಅವರ ಬದ್ಧತೆಗೆ ಸಾಕ್ಷಿಯಾಗಿದೆ ಎಂದರು.

ಮಳವಳ್ಳಿ ಮಾಜಿ ಶಾಸಕ ಅನ್ನದಾನಿ ಅವರ ಟೀಕೆಗೆ ತಿರುಗೇಟು ನೀಡಿದ ಅವರು, ಚುನಾವಣೆ ಮುಗಿದ ನಂತರ ಪಲಾಯನ ಮಾಡಿದ್ದ ಅನ್ನದಾನಿ ಅವರು ಈಗ ದಿಢೀರನೆ ಪ್ರತ್ಯಕ್ಷವಾಗಿ ಭೂ ಅವ್ಯವಹಾರದ ಬಗ್ಗೆ ಮಾತನಾಡುತ್ತಿದ್ದಾರೆ. ಅವರ ಅವಧಿಯಲ್ಲೇ ನಡೆದ ಭೂ ಅವ್ಯವಹಾರಗಳಿಗೆ ಸಚಿವ ನರೇಂದ್ರಸ್ವಾಮಿ ಅವರು ನ್ಯಾಯ ಕೊಡಿಸುವ ಕೆಲಸ ಮಾಡುತ್ತಿದ್ದಾರೆ. ಅನ್ನದಾನಿ ಅವರು ತಮ್ಮ ಅವಧಿಯ ಅಭಿವೃದ್ಧಿ ಪಟ್ಟಿ ಬಿಡುಗಡೆ ಮಾಡಲಿ, ನಾವು ನಮ್ಮ ಅಭಿವೃದ್ಧಿ ಪಟ್ಟಿ ಬಿಡುಗಡೆ ಮಾಡುತ್ತೇವೆ. ಸಿಎಸ್ ಆರ್ ಫಂಡ್ ನಿಂದ ಶಾಲೆ ಮತ್ತು ಕೆರೆಗಳ ಅಭಿವೃದ್ಧಿ ಕಣ್ಣಾರೆ ನೋಡಬಹುದು. ಅಧಿಕಾರಿಗಳು ಸ್ಥಳ ತೋರಿಸಲು ಸಿದ್ಧರಿದ್ದಾರೆ ಎಂದು ಸವಾಲು ಹಾಕಿದರು.

ಸುಳ್ಳು ಮತ್ತು ಕಪೋಲಕಲ್ಪಿತ ಆರೋಪಗಳ ಮೂಲಕ ಕಾರ್ಯಕರ್ತರ ದಾರಿ ತಪ್ಪಿಸುವ ಬದಲು ಸೈದ್ಧಾಂತಿಕ ರಾಜಕಾರಣ ಮಾಡಬೇಕು ಎಂದು ಆಗ್ರಹಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿಲ್ಲಾ ಕಿಸಾನ್ ಅಧ್ಯಕ್ಷ ದೇಶಹಳ್ಳಿ ಮೋಹನ್‌ಕುಮಾರ್, ಮುಖಂಡರಾದ ಅಜ್ಜಹಳ್ಳಿ ರಾಮಕೃಷ್ಣ, ಪಾಂಡವಪುರ ಕಿಸಾನ್ ಅಧ್ಯಕ್ಷ ಚಿನಕುರುಳಿ ರಮೇಶ್, ಯೂತ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ವಿಜಯಕುಮಾರ್, ಅಸಂಘಟಿತ ಕಾರ್ಮಿಕ ವಿಭಾಗದ ಅಧ್ಯಕ್ಷ ಬಿ.ಟಿ. ಗುರುರಾಜ್, ಮುಖಂಡ ಕಿರಣ್ ಕುಮಾರ್ ಉಪಸ್ಥಿತರಿದ್ದರು.

# ಕನಸಿದ್ದರೆ ಸಾವು ದೂರ



ಆಶಯವು ಅಂತರಂಗದ ಅಖಂಡ ದೀಪ. ಅದು ಜ್ವಲಿಸುವವರೆಗೆ ತಮಸ್ಸಿಗೆ ಪ್ರವೇಶವಿಲ್ಲ. ಹೊಸ ಗುರಿಯೊಂದನ್ನು ಹೆಣೆದುಕೊಂಡಾಗ ಮಿದುಳಿನ ವೆಂಟ್ರಲ್ ಸ್ಟ್ರೈಯಾಟಮ್ ಜಾಗೃತವಾಗಿ ಎಂಡಾರ್ಫಿನ್ ಎಂಬ ಹಿತಾಮೃತವನ್ನು ಧಾರೆ ಎರೆಯುತ್ತದೆ. ಈ ರಸಧಾರೆ ವೇದನೆಯನ್ನು ಶಮನಗೊಳಿಸಿ, ರೋಗದ ವಿರುದ್ಧ ಹೋರಾಡುವ ಟಿ-ಕೋಶಗಳಿಗೆ ವಜ್ರದ ಬಲ ತುಂಬುತ್ತದೆ. ದಿನಚರಿಯಲ್ಲಿ ಪುಟ್ಟದೊಂದು ಉದ್ದೇಶವಿಟ್ಟುಕೊಂಡವರಲ್ಲಿ ಹೃದ್ರೋಗದ ಆತಂಕ ಶೇ.27 ರಷ್ಟು ತಗ್ಗುತ್ತದೆ ಎಂದು ಹಾರ್ವರ್ಡ್ ಅಧ್ಯಯನ ಸಾರಿದೆ. ಆಶಯವೇ ದೇಹಕ್ಕೆ ನಿತ್ಯ ನೀಡುವ ಅಮೃತ ಲಸಿಕೆ.

ಒಬ್ಬರ ಕನಸು ಇಡೀ ಬೀದಿಗೆ ಬೆಳಕಾಗುವ ದೀವಟಿಗೆ. ನಿವೃತ್ತಿಯಂಚಿನ ಅಜ್ಜ ಅಕ್ಷರ ಕಲಿಕಾ ಕೇಂದ್ರ ತೆರೆದರೆ, ಕೊಳಚೆ ಮಕ್ಕಳ ಭವಿಷ್ಯ ಬೆಳಗುತ್ತದೆ. ಮೊಮ್ಮಗಳ ಜನ್ಮದಿನಕ್ಕೆ ಸಸಿ ನೆಡುವ ಸಂಕಲ್ಪ ತೊಟ್ಟರೆ, ಇಡೀ ಓಣಿ ಹಸಿರು ಹೊದಿಕೆಯನ್ನು ಹೊದ್ದುಕೊಳ್ಳುತ್ತದೆ. ಮಾರಕ ಕ್ಯಾನ್ಸರ್ ಗೆದ್ದು ಬಂದ ತಾಯಿ, ವಾರ್ಡಿನ ರೋಗಿಗಳಿಗೆ ಪ್ರೀತಿಯಿಂದ ಅನ್ನ ಬಡಿಸಿದರೆ, ಆಸ್ಪತ್ರೆಯೇ ನವಚೈತನ್ಯದ ತೋಟವಾಗುತ್ತದೆ. ಹೀಗೆ ಒಂದು ಜೀವದ ಆಸೆ ನೂರಾರು ಎದೆಗಳಿಗೆ ಜೀವದಾನ.

ಆಶಯವನ್ನು ಚಿಗುರಿಸಲು ಕಠಿಣ ತಪಸ್ಸು ಬೇಡ. ಪ್ರತಿ ತಿಂಗಳು ಒಂದು ನವ್ಯ ಕೌಶಲವನ್ನು ಕರಗತ ಮಾಡಿಕೊಳ್ಳಿ, ರಂಗೋಲಿಯ ಜ್ಯಾಮಿತಿ, ಮಡಕೆಯ ಮೃದುತ್ವ, ಅಪರಿಚಿತ ಅಡುಗೆಯ ರುಚಿ. ಮನೆಯ ಮೂಲೆಯಲ್ಲಿ ಕೃತಜ್ಞತಾ ಜಾಡಿಯನ್ನಿಟ್ಟು, ದಿನವೂ ಒಂದು ಸೊಗಸಾದ ಘಳಿಗೆಯನ್ನು ಚೀಟಿಯಲ್ಲಿ ಬರೆದು ತುಂಬಿಸಿ. ವರ್ಷಾಂತ್ಯದಲ್ಲಿ ಆ ಜಾಡಿಯನ್ನು ತೆರೆದಾಗ ಬದುಕು ಎಷ್ಟು ಮಧುರ ಎಂದು ಅರಿವಾಗುತ್ತದೆ. ಡಿಜಿಟಲ್ ಸದ್ದಿನ ನಡುವೆ ವಾರಕ್ಕೊಮ್ಮೆ ಕೈಬರಹದ ಪತ್ರ ಬರೆಯಿರಿ, ಅದಕ್ಕೆ ಅಪೂರ್ವ ಮೌಲ್ಯವಿದೆ. ಕನಸಿನ ರೆಕ್ಕೆ ಕಟ್ಟಿಕೊಂಡ ಮನಸ್ಸಿಗೆ ಮುಪ್ಪಿನ ನೆರಳಿಲ್ಲ, ಮರಣದ ಅಂಜಿಕೆಯಿಲ್ಲ. ನಾಳೆಗೊಂದು ನಿರೀಕ್ಷೆಯಿದ್ದರೆ ಇಂದಿನ ದಿನವೇ ಹಬ್ಬವಾಗುತ್ತದೆ. ಬದುಕಿನ ಹೊಸ ಆಶಯವೇ ಸಾವನ್ನು ದೂರ ಅಟ್ಟುವ ಸಂಜೀವಿನಿ ಮಂತ್ರ.

ಅಂಕಣ-28

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಸೆ.26ರಂದು ಬಸರಾಳು ಗ್ರಾಮ ಪಂಚಾಯಿತಿಯಲ್ಲಿ ಆರೋಗ್ಯ ಶಿಬಿರ

**ಮಂಡ್ಯ:** ಮಂಡ್ಯ ತಾಲ್ಲೂಕು ವಿಧಾನ ಸಭಾ ಕ್ಷೇತ್ರದ ಬಸರಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಸೆಪ್ಟೆಂಬರ್ 26ರಂದು ಆರೋಗ್ಯ ಶಿಬಿರ ಆಯೋಜಿಸಲಾಗಿದ್ದು, ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಬಿ. ಸಿ. ಶಿವನಂದಮೂರ್ತಿ ಅವರು ತಿಳಿಸಿದ್ದಾರೆ.

ಮಂಡ್ಯ ವಿಧಾನಸಭಾ ಕ್ಷೇತ್ರದ ಬಸರಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೆ.26ರಂದು ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಸೇರಿದಂತೆ ಅಗತ್ಯ ಆರೋಗ್ಯ ಸೇವೆಗಳನ್ನು ಒದಗಿಸಲು ಶಿಬಿರ ಆಯೋಜಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸೆ.26ರಂದು ಬಸರಾಳು ಗ್ರಾಮ ಪಂಚಾಯಿತಿಯಲ್ಲಿ ಆರೋಗ್ಯ ಶಿಬಿರ




**ಮಂಡ್ಯ:** ಮಂಡ್ಯ ತಾಲ್ಲೂಕು ವಿಧಾನ ಸಭಾ ಕ್ಷೇತ್ರದ ಬಸರಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕರ್ನಾಟಕ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಸೆಪ್ಟೆಂಬರ್ 26ರಂದು ಆರೋಗ್ಯ ಶಿಬಿರ ಆಯೋಜಿಸಲಾಗಿದ್ದು, ಸಾರ್ವಜನಿಕರು ಶಿಬಿರದ ಸದುಪಯೋಗ ಪಡೆದುಕೊಳ್ಳುವಂತೆ ಅಪರ ಜಿಲ್ಲಾಧಿಕಾರಿಗಳಾದ ಬಿ. ಸಿ. ಶಿವನಂದಮೂರ್ತಿ ಅವರು ತಿಳಿಸಿದ್ದಾರೆ.

ಮಂಡ್ಯ ವಿಧಾನಸಭಾ ಕ್ಷೇತ್ರದ ಬಸರಾಳು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸೆ.26ರಂದು ಸಾರ್ವಜನಿಕರಿಗೆ ಆರೋಗ್ಯ ತಪಾಸಣೆ ಸೇರಿದಂತೆ ಅಗತ್ಯ ಆರೋಗ್ಯ ಸೇವೆಗಳನ್ನು ಒದಗಿಸಲು ಶಿಬಿರ ಆಯೋಜಿಸಲಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಂಡತಿಯನ್ನು ಹೊಗಳುವುದಕ್ಕಿಂತ, ಜವಾಬ್ದಾರಿ ಹಂಚಿಕೊಳ್ಳಿ



ಸ್ವಾಮಿನಾಥನ್
ಮೊ:9880041516



ಕಳೆದ ಭಾನುವಾರ (20 ನೇ ತಾರೀಖು ')ಹೆಂಡತಿಯರ ಮೆಚ್ಚುಗೆಯ ದಿನ'ದ (Wife Appreciation Day) ಪ್ರಯುಕ್ತ ಹೆಂಡತಿಯ ಬಹುಮುಖ ಪ್ರತಿಭೆಯನ್ನು ಕುರಿತು ಒಂದು ಲೇಖನ ಬರೆದಿದ್ದೆ.

ಅವಳು ಮಾಸ್ಟರ್ ಚೆಫ್, ಮನೆಯ ಹಣಕಾಸು ಸಚಿವರು, ಮಕ್ಕಳ ಮಾರ್ಗದರ್ಶಕಿ, ಆರೋಗ್ಯ ಸಚಿವರು, ಕುಟುಂಬದ ನೆನಪಿನ ಪುಸ್ತಕ, ಎಲ್ಲರ ಕಾರ್ಯಕ್ರಮಗಳ ಸಂಯೋಜಕಿಹೀಗೆ ಮನೆಯೊಳಗೆ ಅವಳು ನಿರ್ವಹಿಸುವ ಹಲವು ಪಾತ್ರಗಳನ್ನು ಬರೆದಿದ್ದೆ.

ಲೇಖನ ಓದಿದ ಕೆಲವು ಜನರು "ಲೇಖನ ಬಹಳ ಚೆನ್ನಾಗಿದೆ, ಹೆಂಡತಿಯರ ನಿಜವಾದ ಚಿತ್ರಣ" ಎಂದರು.

ಆದರೆ, ನನ್ನ ಮಗಳು ಲೇಖನವನ್ನು ಓದಿ ಒಂದು ಸರಳವಾದ, ಆದರೆ ತೀಕ್ಷ್ಣವಾದ ಪ್ರಶ್ನೆ ಕೇಳಿದಳು:

ಡ್ಯಾಡ್ (ಅವಳು ನನ್ನನು ಹಾಗೆ ಕರೆಯುವುದು) , ಮನೆಯ ಎಲ್ಲ ಕೆಲಸವನ್ನೂ ಹೆಂಡತಿಯೇ ಮ್ಯಾನೇಜ್ ಮಾಡಬೇಕು, ಉಳಿದವರು ಅವಳಿಗೆ ಸಹಾಯ ಮಾಡಬೇಕು ಎನ್ನುವುದು ಯಾಕೆ ಮನೆ ಎಲ್ಲರದ್ದಾದರೆ, ಅದರ ಜವಾಬ್ದಾರಿಯೂ ಎಲ್ಲರದ್ದೇ ಅಲ್ಲವೇ

ಯೋಚಿಸಿ ನೋಡಿದಾಗ ಇದೊಂದು ಗಹನವಾದ ಪ್ರಶ್ನೆ ಎನಿಸಿತು . ಆ ಸಣ್ಣ ಪ್ರಶ್ನೆಯೊಳಗೆ ದೊಡ್ಡ ಅರ್ಥವಿತ್ತು. ಅದು ನನ್ನನ್ನು ಆಳವಾಗಿ ಯೋಚಿಸುವಂತೆ ಮಾಡಿತು.

ನನ್ನ ಹೆಂಡತಿ ಉಷಾ ನನ್ನ ಲೇಖನಗಳ ಮೊದಲ ಓದುಗಳು ಮತ್ತು ಕಟು ವಿಮರ್ಶಕಿ ಕೂಡ . ಅವಳು ಹೇಳಿದ್ದು ಗೃಹಿಣಿಯರ (Home Makers)ಶ್ರಮವನ್ನು ಸಮಾಜ ಇಂದಿಗೂ ಗುರುತಿಸುವುದಿಲ್ಲ. ಅವರ ಕೆಲಸವನ್ನು ಯಾರೂ ಹಂಚಿಕೊಳ್ಳುವುದೂ ಇಲ್ಲ. ಆ ಬಗ್ಗೆ ಯೋಚನೆ ಸಹ ಮಾಡುವುದಿಲ್ಲ

ನನ್ನ ವೃತ್ತಿ ಜೀವನದಲ್ಲಿ ಯಶಸ್ವಿಯಾಗಲು ಕಾರಣರಾದ ವಿಪ್ರೊ ಕಂಪನಿಯಲ್ಲಿ ನನ್ನ ಮ್ಯಾನೇಜರ್ ಆಗಿದ್ದ ನನ್ನ ಆತ್ಮೀಯರಾದ ರಾಜೇಂದ್ರ ತೊದಲಬಾಗಿಯವರ ಅಭಿಪ್ರಾಯ ಹೀಗಿದೆ .

ನಮ್ಮ ಕುಟುಂಬಗಳು ಗಂಡು ಹೆಣ್ಣು ಮಕ್ಕಳನ್ನು ಸಮಾನವಾಗಿ ಕಾಣಬೇಕು. ನಮ್ಮ ಪೀಳಿಗೆ ಹೆಣ್ಣುಮಕ್ಕಳಿಗೆ ಸಮಾನ ಅವಕಾಶ ನೀಡಿದರೂ, ಗಂಡುಮಕ್ಕಳಿಗೆ ಹೆಣ್ಣುಮಕ್ಕಳನ್ನು ಸಮಾನರಾಗಿ ಗೌರವಿಸುವ ಮನೋಭಾವ ಕಲಿಸುವಲ್ಲಿ ಹಿಂದೆ ಬಿದ್ದಿದ್ದೇವೆ. ಪೋಷಕರು ಗಂಡುಮಗುವಿಗೆ ಹೆಚ್ಚಿನ ಆದ್ಯತೆ ನೀಡುವ ಮನೋಭಾವ ತೊರೆಯಬೇಕು. ಕುಟುಂಬದಿಂದಲೇ ಸಮಾನ ಹಕ್ಕು, ಜವಾಬ್ದಾರಿ ಮತ್ತು ಗೌರವದ ಸಂಸ್ಕೃತಿ ಆರಂಭವಾದಾಗ ಮಾತ್ರ ನಿಜವಾದ ಬದಲಾವಣೆ ಸಾಧ್ಯ.

ಇದೆಲ್ಲ ಅತ್ಯಂತ ಸೂಕ್ತವಾದ ಅಭಿಪ್ರಾಯಗಳು ಎಂದೆನಿಸಿ , ನನ್ನ ಹಿಂದಿನ ಲೇಖನಕ್ಕೆ ಪೂರಕವಾಗಿ ಈ ಲೇಖನವನ್ನು ಬರೆದಿದ್ದೇನೆ .

ನಾವು ಹೆಂಡತಿಯನ್ನು ಸೂಪರ್ ವುಮನ್ ಎಂದು ಹೊಗಳುತ್ತೇವೆ. ಅವಳು ಒಂದೇ ಸಮಯದಲ್ಲಿ ಮನೆ, ಮಕ್ಕಳು, ಗಂಡ, ಹಿರಿಯರು, ಉದ್ಯೋಗ, ಹಣಕಾಸು, ಆರೋಗ್ಯ ಎಲ್ಲವನ್ನೂ ಒಬ್ಬಳೇ ನಿಭಾಯಿಸುತ್ತಾಳೆ ಎಂದು ಹೆಮ್ಮೆಪಡುತ್ತೇವೆ. ಆದರೆ ಒಂದು ಕ್ಷಣ ನಿಂತು ಯೋಚಿಸಿದರೆ, ಅವಳು ಇವೆಲ್ಲವನ್ನೂ ಒಬ್ಬಳೇ ನಿಭಾಯಿಸಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿರುವುದೇ ನಾವಲ್ಲವೇ ಇದು ನಾವು ಮಾಡುವ ತಪ್ಪಲ್ಲವೇ

ಹೊಗಳಿಕೆಯ ನೆಪದಲ್ಲಿ ಮತ್ತಷ್ಟು ಹೊರೆಯನ್ನು ಅವಳ ಹೆಗಲ ಮೇಲೆ ಏರಿಸುತ್ತಿದ್ದೇವೆಯೇ

'ಸಹಾಯ' ಮಾಡುವುದಲ್ಲ, ಜವಾಬ್ದಾರಿ ಹಂಚಿಕೊಳ್ಳುವುದು!

ನಾನು ಹೆಂಡತಿಗೆ ಮನೆಕೆಲಸದಲ್ಲಿ ತುಂಬಾ ಸಹಾಯ ಮಾಡುತ್ತೇನೆ ಎಂಬ ಮಾತನ್ನು ಗಂಡಂದಿರು ಆಗಾಗ್ಗೆ ಹೇಳುವುದನ್ನು ಕೇಳುತ್ತೇವೆ. ಆದರೆ ಇಲ್ಲೇ ಸಣ್ಣ ಭಾಷಾ ಬದಲಾವಣೆಯ ಅಗತ್ಯವಿದೆ ಎನ್ನಿಸುತ್ತದೆ.

ಹೆಂಡತಿಗೆ 'ಸಹಾಯ' ಮಾಡುವುದಲ್ಲ; ಮನೆಯ ಜವಾಬ್ದಾರಿಯನ್ನು 'ಹಂಚಿಕೊಳ್ಳುವುದು'.

ಅಡುಗೆ ಮಾಡುವುದು, ಪಾತ್ರೆ ತೊಳೆಯುವುದು, ಮಕ್ಕಳನ್ನು ನೋಡಿಕೊಳ್ಳುವುದು, ದಿನಸಿ ತರುವುದು, ಬಿಲ್‌ಗಳನ್ನು ಪಾವತಿಸುವುದು, ಮನೆಯ ಹಣಕಾಸು ನಿರ್ವಹಣೆ, ವಯಸ್ಸಾದ ತಂದೆ-ತಾಯಿಯ ಆರೈಕೆ ಇವೆಲ್ಲವೂ ಕುಟುಂಬದ ಪ್ರತಿಯೊಬ್ಬರ ಅಗತ್ಯಗಳು. ಹಾಗಿದ್ದಾಗ ಗಂಡ ಅಡುಗೆ ಮಾಡಿದರೆ ಅದು ಹೆಂಡತಿಗೆ ಮಾಡಿದ 'ಉಪಕಾರ'ವಲ್ಲ, ಹೆಂಡತಿ ಮನೆಯ ಹಣಕಾಸು ನೋಡಿಕೊಂಡರೆ ಅದು ಗಂಡನಿಗೆ ಮಾಡಿದ 'ಸಹಾಯ'ವಲ್ಲ. ಇಬ್ಬರೂ ತಮ್ಮ ಮನೆಯ ಬದುಕಿನ ಸಮಾನ ಪಾಲುದಾರರು.

ಅಣು (ನ್ಯೂಕ್ಲಿಯರ್ )ಕುಟುಂಬ ಮತ್ತು ಬದಲಾಗುತ್ತಿರುವ ಬದುಕು

ಹಿಂದೆ ಅನೇಕ ಕುಟುಂಬಗಳಲ್ಲಿ ಜಂಟಿ ಕುಟುಂಬದ ವ್ಯವಸ್ಥೆ ಇತ್ತು. ಮನೆಯಲ್ಲೇ ಅಜ್ಜ-ಅಜ್ಜಿ, ಮಾವ-ಅತ್ತೆ, ಸಹೋದರ-ಸಹೋದರಿಯರ ಬೆಂಬಲವಿರುತ್ತಿತ್ತು. ಆದರೆ ಇಂದು ಬಹುತೇಕ ಕುಟುಂಬಗಳು ಅಣು ಕುಟುಂಬಗಳಾಗಿ (Nuclear Families)ಜೀವಿಸುತ್ತಿವೆ. ಮಕ್ಕಳ ಆರೈಕೆ, ಮನೆಯ ನಿರ್ವಹಣೆ, ಹಿರಿಯರ ಜವಾಬ್ದಾರಿ ಎಲ್ಲವೂ ದಂಪತಿಯ ಹೆಗಲ ಮೇಲೆಯೇ ಇದೆ.

ಇದರ ಜೊತೆಗೆ ಮಹಿಳೆಯರ ಬದುಕಿನಲ್ಲೂ ದೊಡ್ಡ ಬದಲಾವಣೆ ಬಂದಿದೆ. ಅವಳು ಶಿಕ್ಷಣ ಪಡೆಯುತ್ತಾಳೆ, ಉದ್ಯೋಗ ಮಾಡುತ್ತಾಳೆ, ವೃತ್ತಿಯಲ್ಲಿ ಬೆಳೆಯುತ್ತಾಳೆ. ಹೀಗಿರುವಾಗ ಮನೆಯ ಹಳೆಯ ಸಮೀಕರಣ ಮಾತ್ರ ಬದಲಾಗದೆ ಉಳಿಯಲು ಸಾಧ್ಯವೇ ಹೊರಗೆ ಇಬ್ಬರೂ ದುಡಿಯುತ್ತಿದ್ದರೆ, ಮನೆಯೊಳಗಿನ ಕೆಲಸವೂ ಇಬ್ಬರದ್ದಾಗಬೇಕಲ್ಲವೇ

**ಗೃಹಿಣಿಯರ ಚೌಕಟ್ಟಿಲ್ಲದ ದುಡಿಮೆ**

ಇಲ್ಲಿ ಮತ್ತೊಂದು ಪ್ರಮುಖ ಸತ್ಯವನ್ನು ನಾವು ನೆನಪಿಸಿಕೊಳ್ಳಬೇಕು. ಉದ್ಯೋಗಸ್ಥ ಮಹಿಳೆಯರ ಶ್ರಮ ನಮಗೆ ಸುಲಭವಾಗಿ ಕಾಣಿಸುತ್ತದೆ; ಆದರೆ "ನಮ್ಮಮ್ಮ/ನನ್ನ ಹೆಂಡತಿ ಸುಮ್ಮನೆ ಮನೆಯಲ್ಲಿದ್ದಾಳೆ" ಎಂದು ಸುಲಭವಾಗಿ ಹೇಳಿಬಿಡುವ ಗೃಹಿಣಿಯರ (Home Makers) ಶ್ರಮ ಸಮಾಜಕ್ಕೆ ಇಂದಿಗೂ 'ಅದೃಶ್ಯ'!

ಆಫೀಸ್‌ಗೆ ಹೋಗುವವರಿಗೆ ಕೆಲಸದ ಗಂಟೆಗಳು, ವಾರಾಂತ್ಯದ ರಜೆ ಮತ್ತು ಸಂಬಳದ ರೂಪದಲ್ಲಿ ಗುರುತಿಸುವಿಕೆ ಇರುತ್ತದೆ. ಆದರೆ ಮನೆಯಲ್ಲೇ ಇದ್ದು ಇಡೀ ಕುಟುಂಬವನ್ನು ಕಾಯುವ ಗೃಹಿಣಿಗೆ ಬೆಳಿಗ್ಗೆ 5 ಗಂಟೆಯಿಂದ ರಾತ್ರಿ ಎಲ್ಲರೂ ಮಲಗುವವರೆಗೂ ಯಾವುದೇ ನಿಗದಿತ ಗಂಟೆಗಳಿಲ್ಲದ, ರಜೆಯಿಲ್ಲದ, ಯಾವುದೇ ವೇತನವಿಲ್ಲದ ಸುದೀರ್ಘ 'ಪಾಳಿ' ಇರುತ್ತದೆ.

"ಅವಳು ಆಫೀಸ್‌ಗೆ ಹೋಗುವುದಿಲ್ಲವಲ್ಲ, ಮನೆ ಕೆಲಸ ತಾನೇ ಮಾಡುವುದು " ಎಂಬ ಹಗುರವಾದ ಧೋರಣೆ ನಿಲ್ಲಬೇಕು. ಮನೆಯ ಕೆಲಸವೂ ಕೂಡ ಶ್ರಮದಾಯಕವಾದ, ಗೌರವಾರ್ಹವಾದ ಕೆಲಸವೇ. ಗೃಹಿಣಿಯರಿಗೂ ಮನೆಯ ಕೆಲಸದಲ್ಲಿ ಶ್ರಮ ಹಂಚಿಕೆ ಬೇಕು; ಅವರಿಗೂ ವಿಶ್ರಾಂತಿ, ಮನರಂಜನೆ, ಅವರಿಗೆ ಇಷ್ಟ ಕಡೆ ಹೋಗಿಬರುವ ಸ್ವಾತಂತ್ರ್ಯ , ಸ್ನೇಹಿತರ ಜೊತೆ ಕಳೆಯುವ ಸಮಯ ಮತ್ತು ಪ್ರಾಮಾಣಿಕವಾದ ಮೆಚ್ಚುಗೆಗಳ ಅಗತ್ಯವಿದೆ.

ದ್ವಿಗುಣ ಹೊಣೆಗಾರಿಕೆ ಮತ್ತು 'ಅದೃಶ್ಯ ಮಾನಸಿಕ ಹೊರೆ' (Invisible Mental Load)

ಉದ್ಯೋಗಸ್ಥ ಮಹಿಳೆ ಎದುರಿಸುವ ಸವಾಲು ಕೇವಲ ಕೆಲಸದ ಗಂಟೆಗಳದ್ದಲ್ಲ. ಆಫೀಸ್‌ನ ಕೆಲಸ ಮುಗಿಸಿ ಮನೆಗೆ ಬಂದ ನಂತರ ಮತ್ತೊಂದು ಕೆಲಸದ 'ಪಾಳಿ' ಆರಂಭವಾಗುತ್ತದೆ.

ಮನೆಯ ಕೆಲಸ ಎಂದರೆ ಕೇವಲ ಶಾರೀರಿಕ ಶ್ರಮವಲ್ಲ; ಅದಕ್ಕಿಂತ ಮಿಗಿಲಾಗಿ "ನಾಳೆ ಏನು ಅಡುಗೆ ಮಾಡಬೇಕು ಮಗುವಿನ ಶಾಲೆಯ ಲೇಖನ ಸಾಮಗ್ರಿಗಳಿವೆಯೇ ಹಬ್ಬಕ್ಕೆ ಏನು ಸಿದ್ಧಪಡಿಸಬೇಕು ಮನೆಯ ಯಾವ ಬಿಲ್ ಬಾಕಿಯಿದೆ " ಎಂದು ನಿರಂತರವಾಗಿ ಯೋಜಿಸುವ 'ಅದೃಶ್ಯ ಮಾನಸಿಕ ಹೊರೆ' (Invisible Mental Load) ಇರುತ್ತದೆ. ಈ ಮಾನಸಿಕ ಒತ್ತಡ ಇಂದಿಗೂ ಹೆಚ್ಚಾಗಿ ಮಹಿಳೆಯರ ಮೇಲೆಯೇ ಉಳಿಯುತ್ತದೆ.

ಇದರ ಜೊತೆಗೆ 'ಅಪರಾಧ ಪ್ರಜ್ಞೆ' (Guilt)ಆಕೆಯನ್ನು ನಿರಂತರವಾಗಿ ಕಾಡುತ್ತದೆ. ಆಫೀಸ್‌ನಲ್ಲಿ ಹೆಚ್ಚು ಸಮಯ ಕಳೆದರೆ ಮಕ್ಕಳಿಗೆ ಸಮಯ ಕೊಡಲಿಲ್ಲವೇ ಎಂಬ ಚಿಂತೆ, ಮನೆಗೆ ಆದ್ಯತೆ ನೀಡಿದರೆ ವೃತ್ತಿಯಲ್ಲಿ ಹಿಂದುಳಿದೆನೇ ಎಂಬ ಪ್ರಶ್ನೆ. ಮಕ್ಕಳನ್ನು ಮತ್ತು ಮನೆಯನ್ನು ಕೇವಲ ಮಹಿಳೆಯ ಜವಾಬ್ದಾರಿ ಎನ್ನುವುದನ್ನು ಬಿಟ್ಟಾಗ ಮಾತ್ರ ಆಕೆ ಈ ಅಪರಾಧ ಪ್ರಜ್ಞೆಯಿಂದ ಹೊರಬರಲು ಸಾಧ್ಯ.

ಪೆಪ್ಸಿಕೋ ಕಂಪನಿಯ ಮಾಜಿ ಸಿಇಒ ಇಂದಿರಾ ನೋಯಿಯವರು ಒಂದು ಸಂದರ್ಶನದಲ್ಲಿ ಹೇಳಿದ್ದರು .ಇದನ್ನು ನೀವು ಯೂಟ್ಯೂಬ್ನಲ್ಲಿ ನೋಡಬಹುದು.

ಇಂದ್ರಾ ನೂಯಿ ಅವರು ಮಹಿಳೆಯರು "ಎಲ್ಲವನ್ನೂ ಪಡೆಯಬಹುದು" (have it all) ಎಂಬ ಭ್ರಮೆಯನ್ನು ಸವಾಲು ಮಾಡಿದ್ದಾರೆ. ಒಬ್ಬ ತಾಯಿಯಾಗಿರುವುದು ಪೂರ್ಣ ಸಮಯದ ಕೆಲಸವಾದರೆ, ಸಿಇಒ ಆಗಿರುವುದು ಒಂದೇ ಬಾರಿಗೆ ಮೂರು ಪೂರ್ಣ ಸಮಯದ ಕೆಲಸಗಳನ್ನು ಮಾಡಿದಂತೆ ಎಂದು ಅವರು ವಿವರಿಸಿದ್ದಾರೆ. ಈ ಎರಡೂ ಕ್ಷೇತ್ರಗಳನ್ನು ನಿಭಾಯಿಸಲು ಅವರು ಭದ್ರವಾದ ಬೆಂಬಲ ವ್ಯವಸ್ಥೆ (solid support system) ಬೇಕು ಎಂದು ಹೇಳಿದ್ದರು . ಪತಿ, ಕುಟುಂಬದ ಸದಸ್ಯರು ಮತ್ತು ನೆಂಟರ ಬಲವಾದ ಬೆಂಬಲವಿಲ್ಲದೆ ಉನ್ನತ ವೃತ್ತಿಜೀವನ ಮತ್ತು ಕುಟುಂಬವನ್ನು ಒಟ್ಟಿಗೆ ನಿಭಾಯಿಸಲು ಸಾಧ್ಯವೇ ಇಲ್ಲ ಎಂದು ಅವರು ಒತ್ತಿ ಹೇಳಿದ್ದಾರೆ.

ಜೊತೆಗೆ, ತಮ್ಮ ಆತ್ಮಕಥೆ "ಮೈ ಲೈಫ್ ಇನ್ ಫುಲ್" ನಲ್ಲಿ ಅವರು ತಮ್ಮ ತಾಯಿ ನೀಡಿದ "ಕಿರೀಟವನ್ನು ಗ್ಯಾರೇಜ್‌ನಲ್ಲಿ ಬಿಡುವುದು" (crown in the garage) ಎಂಬ ಪ್ರಸಿದ್ಧ ಸಲಹೆಯನ್ನು ಹಂಚಿಕೊಂಡಿದ್ದಾರೆ. ಕಂಪನಿಯಲ್ಲಿ ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ, ಮನೆಗೆ ಬಂದಾಗ ಮೊದಲು ಹೆಂಡತಿ, ತಾಯಿ ಮತ್ತು ಮಗಳು ಎಂಬುದನ್ನು ಅವರ ತಾಯಿ ನೆನಪಿಸುತ್ತಿದ್ದರು. ಈ ಸಲಹೆಯು ಅವರು ಪ್ರತಿದಿನ ನಿಭಾಯಿಸಬೇಕಾದ ವಿಭಿನ್ನ ಜವಾಬ್ದಾರಿಗಳನ್ನು ನೆನಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಇದು ಮಹಿಳೆ ಇಂದಿನ ಜಗತ್ತಿನಲ್ಲಿ ಎಷ್ಟು ಒತ್ತಡದಲ್ಲಿರುತ್ತಾರೆ ಎಂದು ತಿಳಿಸುತ್ತದೆ.

ಬದಲಾವಣೆ ಮಕ್ಕಳಿಂದಲೇ ಆರಂಭವಾಗಲಿ

ಲಿಂಗ ಸಮಾನತೆಯ ಪಾಠವನ್ನು ದೊಡ್ಡ ವೇದಿಕೆಗಳಲ್ಲಿ ಹೇಳುವುದಕ್ಕಿಂತ ಮೊದಲು ಮನೆಯಲ್ಲೇ ಕಲಿಸಬೇಕು. ಮಗಳಿಗೆ ಅಡುಗೆ ಕಲಿಸುವಂತೆ ಮಗನಿಗೂ ಕಲಿಸೋಣ. ಮಗಳು ತನ್ನ ಬಟ್ಟೆಗಳನ್ನು ಜೋಡಿಸಿಕೊಳ್ಳುವಂತೆ ಮಗನಿಗೂ ಕಲಿಸೋಣ. ತನ್ನ ತಟ್ಟೆಯನ್ನು ತಾನೇ ತೊಳೆಯುವುದು, ಕೋಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಇವೆಲ್ಲವೂ ಹುಡುಗ-ಹುಡುಗಿಯರಿಬ್ಬರಿಗೂ ಸಮಾನವಾಗಿ ಬೇಕಾದ ಅತ್ಯಗತ್ಯ ಜೀವನ ಕೌಶಲ್ಯಗಳು. ಮಗನಿಗೆ ಸ್ವಾವಲಂಬನೆ ಕಲಿಸುವುದೇ ನಾವು ಆತನಿಗೆ ಕೊಡುವ ನಿಜವಾದ ಸಂಸ್ಕಾರ.

**ಹಿರಿಯರು ಯುವ ಪೀಳಿಗೆಯಿಂದ ಕಲಿಯಬೇಕಾದ ಪಾಠ**

ಇಂದಿನ ಕೆಲವು ಯುವ ದಂಪತಿಗಳ ಬದುಕಿನಲ್ಲಿ ಬದಲಾವಣೆಯ ಸುಳಿವು ಕಾಣುತ್ತಿದೆ. ಗಂಡ ಅಡುಗೆಮನೆಯಲ್ಲಿದ್ದರೆ, ಹೆಂಡತಿ ಮಕ್ಕಳ ಓದನ್ನು ಅಥವಾ ಮನೆಯ ಹಣಕಾಸನ್ನು ನೋಡಿಕೊಳ್ಳುತ್ತಿರುತ್ತಾಳೆ. "ಇದು ಗಂಡಿನ ಕೆಲಸ, ಇದು ಹೆಣ್ಣಿನ ಕೆಲಸ" ಎಂಬ ಗೆರೆ ನಿಧಾನವಾಗಿ ಅಳಿಸಿಹೋಗುತ್ತಿದೆ. ಇದು ಒಂದು ಸಕಾರಾತ್ಮಕ ಬೆಳವಣಿಗೆ.

ಹಿರಿಯರು ಇದನ್ನು ನೋಡಿ ಆಶ್ಚರ್ಯಪಡುವ ಬದಲು, ಸ್ವಾಭಾವಿಕವಾಗಿ ಸ್ವೀಕರಿಸಬೇಕಾಗಿದೆ. ಬದಲಾವಣೆ ಎಂದರೆ ಹಿಂದಿನ ಪೀಳಿಗೆಯನ್ನು ತಪ್ಪಿತಸ್ಥರನ್ನಾಗಿ ಮಾಡುವುದಲ್ಲ. ಹಿಂದಿನ ಅನುಭವವನ್ನು ಗೌರವಿಸುತ್ತಲೇ, ಮುಂದಿನ ಪೀಳಿಗೆಗೆ ಇನ್ನಷ್ಟು ಸಮಾನತೆಯ ಬದುಕನ್ನು ಕಟ್ಟಿಕೊಡುವುದು.

ಹೆಂಡತಿಗೂ ತನ್ನದೇ ಆದ ಸ್ಥಳ ಬೇಕು

ಕುಟುಂಬದ ನಡುವೆಯೂ ಅತ್ಯಂತ ಮುಖ್ಯವಾದ ಪ್ರಶ್ನೆಯೊಂದಿದೆ: ಒಬ್ಬ ಮಹಿಳೆಯ ಗುರುತು ಕೇವಲ ಹೆಂಡತಿ, ತಾಯಿ ಅಥವಾ ಗೃಹಿಣಿ ಎಂಬುದಕ್ಕಷ್ಟೇ ಸೀಮಿತವಾಗಬೇಕೇ

ಅವಳಿಗೂ ತನ್ನದೇ ಆದ ಆಸೆಗಳು, ಕನಸುಗಳು, ಹವ್ಯಾಸಗಳು ಮತ್ತು ವೈಯಕ್ತಿಕ ಸಮಯ (Personal Space) ಬೇಕು. ಪುಸ್ತಕ ಓದಲು, ಸಂಗೀತ ಕೇಳಲು, ಗೆಳತಿಯರೊಂದಿಗೆ ಮಾತನಾಡಲು ಅಥವಾ ಸುಮ್ಮನೆ ಕುಳಿತುಕೊಳ್ಳಲು ಆಕೆಗೆ ಸಿಗುವ ಸಮಯ ಕುಟುಂಬಕ್ಕೆ ಮಾಡಿದ ಅನ್ಯಾಯವಲ್ಲ; ಅದು ಅವಳ ಬದುಕಿನ ಹಕ್ಕು.

ನಿಜವಾದ 'Wife Appreciation' ಎಂದರೇನು

ವರ್ಷಕ್ಕೊಮ್ಮೆ ಒಂದು ಸಂದೇಶ ಕಳುಹಿಸುವುದು, "ನೀನೇ ನಮ್ಮ ಮನೆಯ ದೇವತೆ" ಎಂದು ಹೊಗಳುವುದು ಸುಂದರವೇ. ಆದರೆ ಅದರಾಚೆಗೂ ಒಂದು ಹೆಜ್ಜೆ ಹೋಗೋಣ.

ಅವಳು ಪ್ರತಿದಿನ ಅಡುಗೆ ಮಾಡುತ್ತಿದ್ದಾಳೆ ಎಂದು ಹೊಗಳುವುದರ ಜೊತೆಗೆ, ಅವಳ ಕೆಲಸಗಳನ್ನು ಹಂಚಿಕೊಳ್ಳೋಣ. ಅವಳು ಮನೆಯ ಎಲ್ಲ ವಿಷಯಗಳನ್ನು ನೆನಪಿಟ್ಟುಕೊಂಡಿದ್ದಾಳೆ ಎಂದು ಹೆಮ್ಮೆ ಪಡುವ ಜೊತೆಗೆ, ಮನೆಯ ಬಗ್ಗೆ ಯೋಚಿಸುವ ಜವಾಬ್ದಾರಿಯನ್ನೂ ಹಂಚಿಕೊಳ್ಳೋಣ.

ಹೆಂಡತಿಗೆ ನೀಡಬಹುದಾದ ಅತ್ಯುತ್ತಮ ಮೆಚ್ಚುಗೆ ಎಂದರೆ, ಅವಳಿಗೆ ಸೂಪರ್ ವುಮನ್ ಎಂಬ ಬಿರುದು ನೀಡುವುದಲ್ಲ; ಅವಳು ಸೂಪರ್ ವುಮನ್ ಆಗಬೇಕಾದ ಅಗತ್ಯವೇ ಇಲ್ಲದಂತಹ ಮನೆಯನ್ನು ಕಟ್ಟುವುದು.

ಅಲ್ಲಿ ಮನೆ ಕೆಲಸ ಒಬ್ಬಳ ಜವಾಬ್ದಾರಿಯಲ್ಲ, ಮಕ್ಕಳು ಒಬ್ಬರ ಹೊಣೆಗಾರಿಕೆಯಲ್ಲ, ಮನೆಯ , ಮಾನಸಿಕ ಹೊರೆ ಒಬ್ಬರ ತಲೆಯಲ್ಲ. ಅಲ್ಲಿ ಗಂಡ-ಹೆಂಡತಿ ಇಬ್ಬರೂ ಮನೆಯ ಸಮಾನ ಪಾಲುದಾರರು.

ಹೆಂಡತಿಯ ಮೇಲಿನ ಮೆಚ್ಚುಗೆ ಒಂದು ದಿನದ ಆಚರಣೆಯಾಗದೆ, ಪ್ರತಿದಿನದ ಬದುಕಿನ ಸಂಸ್ಕಾರವಾದಾಗ ಅದು ಕೇವಲ ಆಕೆಗೆ ನೀಡುವ ಗೌರವವಾಗುವುದಿಲ್ಲ, ಇಡೀ ಕುಟುಂಬದ ಬದುಕಿಗೆ ಹೊಸ ಬೆಳಕಾಗುತ್ತದೆ.

---

# ಗೊತ್ತಿಲ್ಲದ ನಾಳೆಯೆಡೆಗೆ, ನೂರೆಂಟು ಕನಸುಗಳ ಪಯಣ!





ಶಿವಬಸಪ್ಪ ಗು ಜಂಗಾಲಿ
ಲೇಖಕರು ಹಾಗೂ ಸಾಹಿತಿ

ಬೆಳಗಿನ ಜಾವ ಕಣ್ಣು ತೆರೆದಾಗ ನಮ್ಮ ಮುಂದಿರುವ ದಿನವು ಇನ್ನೂ ಬರೆಯದಿರುವ ಖಾಲಿ ಹಾಳೆಯಂತಿರುತ್ತದೆ. ಆ ಹಾಳೆಯಲ್ಲಿ ಯಾವ ಸಾಲು ಮೂಡಬೇಕು, ಯಾವ ತಿರುವಿನಲ್ಲಿ ಸಂತೋಷ ಎದುರಾಗಬೇಕು, ಯಾವ ಕ್ಷಣದಲ್ಲಿ ಕಣ್ಣೀರು ಕಣ್ಣಂಚಿಗೆ ಬರಬೇಕು ಎಂಬುದು ಯಾರಿಗೂ ತಿಳಿದಿರುವುದಿಲ್ಲ. ಆದರೂ ಮನುಷ್ಯ ಪ್ರತಿದಿನ ಎದ್ದು ನಿಲ್ಲುತ್ತಾನೆ. ನಿನ್ನೆಗಿನ ನೋವನ್ನು ಮಡಚಿ ಬದಿಗಿಟ್ಟು, ಇಂದಿನ ಭರವಸೆಯನ್ನು ಹೃದಯದಲ್ಲಿ ತುಂಬಿಕೊಂಡು ನಾಳೆಯೆಡೆಗೆ ಹೆಜ್ಜೆ ಹಾಕುತ್ತಾನೆ. ಇದೇ ಬದುಕಿನ ಅದ್ಭುತ ಪಯಣ.

ಮನುಷ್ಯನ ಬದುಕಿನ ಮೊದಲ ಸಂಗಾತಿಯೇ ಕನಸು. ಪುಟ್ಟ ಮಗು ಆಕಾಶದಲ್ಲಿ ಹಾರುವ ವಿಮಾನವನ್ನು ನೋಡಿ ತಾನೂ ಒಮ್ಮೆ ಹಾರಬೇಕು ಎಂದು ಕನಸು ಕಾಣುತ್ತದೆ. ಶಾಲೆಯ ವಿದ್ಯಾರ್ಥಿ ವೈದ್ಯ, ಇಂಜಿನಿಯರ್, ಶಿಕ್ಷಕ ಅಥವಾ ಪೊಲೀಸ್ ಅಧಿಕಾರಿಯಾಗಬೇಕೆಂದು ಬಯಸುತ್ತಾನೆ. ಯುವಕನ ಕನಸು ಉದ್ಯೋಗ, ಸ್ವಂತ ಮನೆ, ಕುಟುಂಬ ಮತ್ತು ನೆಮ್ಮದಿಯ ಬದುಕಿನತ್ತ ಸಾಗುತ್ತದೆ. ವಯಸ್ಸು ಬದಲಾದಂತೆ ಕನಸುಗಳ ರೂಪ ಬದಲಾಗಬಹುದು; ಆದರೆ ಕನಸು ಕಾಣುವ ಮನಸ್ಸು ಮಾತ್ರ ಎಂದಿಗೂ ವೃದ್ಧಿಯಾಗಬಾರದು.

ಕನಸುಗಳಿಗೆ ವಯಸ್ಸಿನ ಗಡಿ ಇಲ್ಲ. ಹದಿನೆಂಟರಲ್ಲಿ ಕಂಡ ಕನಸು ಬೇರೆ; ನಲವತ್ತರಲ್ಲಿ ಹುಟ್ಟುವ ಕನಸು ಬೇರೆ. ಅರವತ್ತು ದಾಟಿದ ಮೇಲೂ ಹೊಸ ಕನಸು ಮೊಳೆಯಬಹುದು. ವರ್ಷಗಳಿಂದ ಬರೆಯಬೇಕೆಂದುಕೊಂಡ ಪುಸ್ತಕವನ್ನು ಬರೆಯುವುದು, ನೋಡಬೇಕೆಂದುಕೊಂಡ ಊರಿಗೆ ಹೋಗುವುದು, ಮಕ್ಕಳನ್ನು ಸ್ವಾವಲಂಬಿಗಳಾಗಿ ನೋಡುವುದು?ಇವೆಲ್ಲವೂ ಕನಸುಗಳೇ. ಕನಸು ಎಂದರೆ ಕೇವಲ ಹಣ, ಆಸ್ತಿ, ಹುದ್ದೆ ಅಥವಾ ಐಶ್ವರ್ಯವಲ್ಲ. ಮನಸ್ಸಿಗೆ ನೆಮ್ಮದಿ ನೀಡುವ ಪ್ರತಿಯೊಂದು ಸಾರ್ಥಕ ಆಸೆಯೂ ಒಂದು ಸುಂದರ ಕನಸೇ.

ಆದರೆ ಬದುಕು ನಾವು ಹಾಕಿಕೊಂಡ ನಕ್ಷೆಯಂತೆ ಎಂದಿಗೂ ಸಾಗುವುದಿಲ್ಲ. ನಾವು ಆರಿಸಿಕೊಂಡ ದಾರಿಯ ಬದಲು ಪರಿಸ್ಥಿತಿ ಮತ್ತೊಂದು ದಾರಿಯನ್ನು ತೋರಿಸಬಹುದು. ನಂಬಿದ ವ್ಯಕ್ತಿ ದೂರವಾಗಬಹುದು. ನಿರೀಕ್ಷಿಸಿದ ಅವಕಾಶ ಕೈತಪ್ಪಬಹುದು. ವರ್ಷಗಳ ಪರಿಶ್ರಮದ ನಂತರವೂ ಯಶಸ್ಸು ತಡವಾಗಬಹುದು. ಆಗ ?ನನ್ನ ಕನಸುಗಳೆಲ್ಲ ಮುಗಿದವೆಯೇ?? ಎಂಬ ಪ್ರಶ್ನೆ ಮನಸ್ಸನ್ನು ಕಾಡುತ್ತದೆ. ಆದರೆ ಒಂದು ಕನಸು ಕೈತಪ್ಪಿದರೆ ಬದುಕೇ ಮುಗಿದಂತಲ್ಲ. ಒಂದು ಬಾಗಿಲು ಮುಚ್ಚಿದಾಗ, ಮತ್ತೊಂದು ಬಾಗಿಲು ತೆರೆದುಕೊಳ್ಳಲು ಕಾಯುತ್ತಿರಬಹುದು.

ಜೀವನದ ಕೆಲವು ಉತ್ತರಗಳು ತಕ್ಷಣ ಸಿಗುವುದಿಲ್ಲ. ಕಾಲವೇ ಅವುಗಳಿಗೆ ಅರ್ಥ ನೀಡುತ್ತದೆ. ಇಂದು ನೋವಿನಂತೆ ಕಾಣುವ ಘಟನೆ, ನಾಳೆ ನಮ್ಮ ಬದುಕಿನ ಮಹತ್ವದ ತಿರುವಾಗಿರಬಹುದು. ಹಿಂದೆ ನೋಡಿದಾಗ ?ಅದು ಆಗದೇ ಇದ್ದದ್ದು ಒಳ್ಳೆಯದೇ ಆಯಿತು? ಎನ್ನುವ ಸಂದರ್ಭಗಳು ಪ್ರತಿಯೊಬ್ಬರ ಬದುಕಿನಲ್ಲೂ ಇರುತ್ತವೆ. ಆದ್ದರಿಂದ ಪ್ರತಿಯೊಂದು ವಿಫಲತೆಯನ್ನೂ ಅಂತ್ಯವೆಂದು ಭಾವಿಸದೆ, ಹೊಸ ಆರಂಭದ ಸಂಕೇತವೆಂದು ನೋಡುವ ಮನಸ್ಸು ಬೇಕು.

ಕನಸು ಕಾಣುವುದು ಸುಲಭ; ಅದನ್ನು ಜೀವಂತವಾಗಿಡುವುದು ಕಷ್ಟ. ಆರ್ಥಿಕ ಸಮಸ್ಯೆಗಳು, ಕುಟುಂಬದ ಜವಾಬ್ದಾರಿಗಳು, ಉದ್ಯೋಗದ ಒತ್ತಡ, ಸಮಾಜದ ಟೀಕೆ ಮತ್ತು ಇತರರ ನಿರಾಶಾದಾಯಕ ಮಾತುಗಳು ನಮ್ಮ ಹೆಜ್ಜೆಗಳನ್ನು ನಿಧಾನಗೊಳಿಸಬಹುದು. ?ನಿನ್ನಿಂದ ಸಾಧ್ಯವಿಲ್ಲ? ಎನ್ನುವ ಮಾತುಗಳು ಕೆಲವೊಮ್ಮೆ ಮನಸ್ಸಿನ ಬಾಗಿಲನ್ನೇ ಮುಚ್ಚಿಬಿಡುತ್ತವೆ. ಆದರೆ ನಮ್ಮ ಸಾಮರ್ಥ್ಯವನ್ನು ನಿರ್ಧರಿಸುವುದು ಹೊರಗಿನವರ ಧ್ವನಿಯಲ್ಲ; ನಮ್ಮೊಳಗಿನ ನಂಬಿಕೆಯ ಧ್ವನಿ.

ಕನಸುಗಳಿಗೆ ರೆಕ್ಕೆಗಳಿದ್ದರೆ, ಪರಿಶ್ರಮವೇ ಅದರ ಹಾರಾಟ. ಪ್ರತಿದಿನದ ಸಣ್ಣ ಪ್ರಯತ್ನಗಳೇ ದೊಡ್ಡ ಸಾಧನೆಗಳ ಬೀಜಗಳು. ಒಂದು ಪುಟ ಓದುವುದು, ಒಂದು ಹೊಸ ವಿಷಯ ಕಲಿಯುವುದು, ತಪ್ಪಿನಿಂದ ಪಾಠ ಕಲಿಯುವುದು, ಮತ್ತೆ ಪ್ರಯತ್ನಿಸುವುದು?ಇವೆಲ್ಲವೂ ಗುರಿಯತ್ತ ಸಾಗುವ ಹೆಜ್ಜೆಗಳೇ. ಯಶಸ್ಸು ಬಹುಶಃ ಒಂದೇ ದಿನದಲ್ಲಿ ಕಾಣಿಸಿಕೊಳ್ಳಬಹುದು; ಆದರೆ ಅದರ ಹಿಂದೆ ಅನೇಕ ದಿನಗಳ ಮೌನ ಪರಿಶ್ರಮ ಅಡಗಿರುತ್ತದೆ.

ಇಂದಿನ ಸಾಮಾಜಿಕ ಜಾಲತಾಣಗಳ ಯುಗದಲ್ಲಿ ಮತ್ತೊಬ್ಬರ ಬದುಕಿನೊಂದಿಗೆ ನಮ್ಮ ಬದುಕನ್ನು ಹೋಲಿಸುವುದು ಹೆಚ್ಚಾಗಿದೆ. ಯಾರಿಗೋ ದೊಡ್ಡ ಮನೆ, ಮತ್ತೊಬ್ಬರಿಗೆ ವಿದೇಶ ಪ್ರವಾಸ, ಇನ್ನೊಬ್ಬರಿಗೆ ಹೊಸ ಕಾರು, ಮತ್ತೊಬ್ಬರಿಗೆ ಉನ್ನತ ಹುದ್ದೆ. ಆದರೆ ನಮಗೆ ಕಾಣುವುದು ಅವರ ಬದುಕಿನ ಹೊಳೆಯುವ ಕ್ಷಣಗಳು ಮಾತ್ರ; ಅವರ ಹೋರಾಟದ ದಿನಗಳು ಕಾಣುವುದಿಲ್ಲ. ಆದ್ದರಿಂದ ನಮ್ಮ ಪಯಣವನ್ನು ಮತ್ತೊಬ್ಬರ ಪಯಣದೊಂದಿಗೆ ಅಳೆಯಬಾರದು. ಪ್ರತಿಯೊಬ್ಬರಿಗೂ ಅವರದೇ ಆದ ಕಾಲ, ದಾರಿ ಮತ್ತು ಕಥೆಯಿದೆ.

ನಾಳೆ ಏನಾಗುತ್ತದೆ ಎಂಬುದು ಗೊತ್ತಿಲ್ಲ. ಆದರೆ ಇಂದು ಏನು ಮಾಡಬೇಕು ಎಂಬುದು ನಮ್ಮ ಕೈಯಲ್ಲಿದೆ. ಭವಿಷ್ಯದ ಚಿಂತೆಯಲ್ಲಿ ವರ್ತಮಾನವನ್ನು ಕಳೆದುಕೊಳ್ಳಬಾರದು. ನಾಳೆಗಾಗಿ ಯೋಜನೆ ಇರಲಿ; ಆದರೆ ಇಂದಿನ ಕ್ಷಣವನ್ನೂ ಬದುಕೋಣ. ನಮ್ಮವರೊಂದಿಗೆ ಮಾತನಾಡೋಣ, ತಂದೆ-ತಾಯಿಯೊಂದಿಗೆ ಸಮಯ ಕಳೆಯೋಣ, ಮಕ್ಕಳೊಂದಿಗೆ ನಗೋಣ, ಮನಸ್ಸಿಗೆ ಸಂತೋಷ ನೀಡುವ ಕೆಲಸಗಳಿಗೆ ಸಮಯ ನೀಡೋಣ. ಏಕೆಂದರೆ ಬದುಕು ಕೇವಲ ಗುರಿ ತಲುಪುವುದಲ್ಲ; ಗುರಿಯತ್ತ ಸಾಗುವ ದಾರಿಯಲ್ಲಿನ ಸುಂದರ ಕ್ಷಣಗಳನ್ನೂ ಅನುಭವಿಸುವುದಾಗಿದೆ.

ನಮ್ಮ ಬಳಿ ನೂರೆಂಟು ಕನಸುಗಳಿರಲಿ. ಕೆಲವು ನನಸಾಗಬಹುದು, ಕೆಲವು ಬದಲಾಗಬಹುದು, ಇನ್ನೂ ಕೆಲವು ಹೊಸ ಕನಸುಗಳ ಬೀಜವಾಗಬಹುದು. ಆದರೆ ಕನಸು ಕಾಣುವುದನ್ನು ಮಾತ್ರ ನಿಲ್ಲಿಸಬಾರದು. ಏಕೆಂದರೆ ಕನಸುಗಳಿಲ್ಲದ ಬದುಕು ದಿಕ್ಕಿಲ್ಲದ ದೋಣಿಯಂತೆ; ಕನಸುಗಳಿರುವ ಬದುಕು ದಡ ಕಾಣದಿದ್ದರೂ ದಿಕ್ಕನ್ನು ಹುಡುಕುತ್ತ ಸಾಗುವ ಪಯಣಿಕನಂತೆ.

ಗೊತ್ತಿಲ್ಲದ ನಾಳೆಯ ಬಾಗಿಲು ಇನ್ನೂ ತೆರೆದಿಲ್ಲ. ಅದರಾಚೆ ಏನಿದೆ ಎಂಬುದೂ ನಮಗೆ ತಿಳಿದಿಲ್ಲ. ಆದರೂ ಭಯದಿಂದ ಹಿಂದಿರುಗದೆ, ಭರವಸೆಯ ಕೈಯಲ್ಲಿ ಕನಸುಗಳ ದೀಪ ಹಿಡಿದು ಮುಂದೆ ಸಾಗೋಣ. ನಾಳೆ ಹೇಗಿರುತ್ತದೆ ಎಂಬುದು ಗೊತ್ತಿಲ್ಲ; ಆದರೆ ಅದನ್ನು ಹೇಗಾಗಿಸಬೇಕು ಎಂಬ ಪ್ರಯತ್ನ ಇಂದು ನಮ್ಮ ಕೈಯಲ್ಲಿದೆ.

ಗೊತ್ತಿಲ್ಲದ ನಾಳೆಯೆಡೆಗೆ, ನೂರೆಂಟು ಕನಸುಗಳೊಂದಿಗೆ ಹೆಜ್ಜೆ ಹಾಕೋಣ; ಬದುಕಿನ ಪ್ರತಿಯೊಂದು ಹೆಜ್ಜೆಯನ್ನೂ ಅರ್ಥಪೂರ್ಣವಾಗಿಸೋಣ.

---

# ಭಾವಪೂರ್ಣ ಶ್ರದ್ಧಾಂಜಲಿ






ಪುಷ್ಪ ಪ್ರಸಾದ್

ಅರೆ, ಪುಸ್ತಕದ ಹೆಸರು ಕೇಳಿಯೇ ಶಾಕ್ ಆಯ್ತು ಅಲ್ವಾ? ನಾನೂ ಕೂಡ ಪುಸ್ತಕದ ಹೆಸರು ನೋಡಿ ಒಮ್ಮೆ ಶಾಕ್ ಆಗಿದ್ದೆ. ಗೆಳತಿ ಶೃತಿ ಮಧುಸೂದನ್ ರವರು ನನಗೆ ಈ ಪುಸ್ತಕ ಓದಿ ಅಭಿಪ್ರಾಯ ಹೇಳಿ ಅಂತ ಹೇಳಿದ್ದರು. ಇದನ್ನು ಓದಿದ ಮೇಲೆ ವಿಮರ್ಶೆ ಬರೆಯಲೇಬೇಕಾಯಿತು. ಹೌದು ನಿಜಕ್ಕೂ ಇದು ಬರೀ ಪುಸ್ತಕವಲ್ಲ. ಭರಪೂರ ಭಾವನೆಗಳ ಧಾರಾಕಾರದಿ ಸುರಿಯುವ ಮಳೆ. ಪೂರ್ತಿ ಪುಸ್ತಕ ಓದುವುದರೊಳಗೆ ಹೃದಯದ ಮೋಡಗಳು ಭಾರವಾಗಿ ಕಣ್ಣಂಚಿನ ಮಳೆಯ ಹನಿಗಳು ಸುರಿಯುವುದು ಖಂಡಿತ. ಆ ಭಾವನೆಗಳನ್ನು ಕೇಳಿದರಷ್ಟೇ ಸಾಲದು. ಓದಿಯೇ ತೀರಬೇಕು. ಒಂದೊಂದು ಅನುಭವ ಕಥನಗಳೂ ಕೂಡ ಮನಸ್ಸಿಗೆ ತುಂಬಾ ಹತ್ತಿರವಾಗುತ್ತವೆ. ಈ ಪುಸ್ತಕವನ್ನು ಓದುತ್ತಿರಬೇಕಾದರೆ ನಾವೂ ಕೂಡ ಆ ಭಾವಗಳನ್ನು ಅನುಭವಿಸಿದಂತೆಯೇ ಭಾಸವಾಗುತ್ತದೆ. ಅಜೀವ ಆತ್ಮಗಳ ಅನಂತತೆಗೆ ಅರ್ಪಣೆ ಈ ಸಾಲಿನ ಹಾಗೆಯೇ ಬದುಕಲ್ಲಿ ಬಂದ ಅಜೀವ ವಸ್ತುಗಳನ್ನೂ ಸಹ ಜೀವವಿರುವ ವ್ಯಕ್ತಿಗಳಂತೆಯೇ ಪ್ರೀತಿಸಿ ಅವುಗಳ ಕೊನೆಗಾಲಕ್ಕೊಂದು ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುವುದಿದೆಯಲ್ಲ ನಿಜಕ್ಕೂ ಹೃದಯ ತಟ್ಟಿದ ಭಾವನೆ. ಹಾಗಾದರೆ ಏನೇನಿದೆ ಈ ಪುಸ್ತಕದಲ್ಲಿ ಅನ್ನುವುದಾದರೆ ಅಮ್ಮನ ಪ್ರೀತಿ, ಅಪ್ಪನ ಕಾಳಜಿ, ಬರವಣಿಗೆಯ ಬಗೆಗಿನ ಅಂತರಾಳದ ಅನಿಸಿಕೆ, ಹರೆಯದ ಮನಸಿನ ನವ ತಲ್ಲಣ, ಚಿಗುರಿದ ಪ್ರೀತಿ, ಅಜ್ಜಿಯ ಮಮತೆ, ತಾತನ ವಾತ್ಸಲ್ಯ, ಅಜ್ಜಿ ಕಾಲದ ಕತೆಗಳು, ಅಜ್ಜಿ ಮನೆಯಲ್ಲಿ ಬೆಳೆದ ವಾತಾವರಣ, ನೆರೆಹೊರೆಯವರ ಆತ್ಮೀಯತೆ, ಭಯ ಹುಟ್ಟಿಸುವ ದೆವ್ವದ ಕತೆಗಳು,ವಸ್ತುಗಳನ್ನೂ ಪ್ರೀತಿಸಿದ ರೀತಿ ಅಬ್ಬಾ ಒಂದೇ ಎರಡೇ ಓದುತ್ತಾ ಹೋದಂತೆಲ್ಲಾ ಭಾವಗಳ ಶರಧಿಯೊಳಗೆ ಮುಳುಗುವುದು ಖಂಡಿತ. ನಗುವೂ ಇದೆ, ಅಳುವೂ ಇದೆ, ತಲ್ಲಣವಿದೆ, ನೋವಿದೆ, ನಲಿವಿದೆ, ಭಯವೂ ಇದೆ. ಎಲ್ಲಾ ತರಹದ ಭಾವಗಳನ್ನ ಅನುಭವಿಸದಂತಾಗುತ್ತದೆ. ಈ ತರಹದ ಎಲ್ಲಾ ಪಾತ್ರಗಳಿಗೂ ಲೇಖಕಿ ಇಲ್ಲಿ ಸವಿಯಾದ ಶ್ರದ್ಧಾಂಜಲಿ ಅರ್ಪಿಸಿರುವುದು ತುಂಬಾ ವಿಶೇಷವಾಗಿ ಗಮನ ಸೆಳೆಯುತ್ತದೆ. ಓದುಗನ ಮನಸ್ಸನ್ನು ಹಿಡಿದಿಡುವಂತಹ ಒಂದೊಂದು ಸಾಲಿನ ಪದಗಳು ಎದೆಯೊಳಗೆ ಇಳಿದು ಸುಂದರ ಸಂಚಲನವನ್ನೇ ಉಂಟು ಮಾಡಬಲ್ಲದು. ಬದುಕು. ಒಟ್ಟಾರೆಯಾಗಿ ಹೇಳಬೇಕೆಂದರೆ ಒಂದೊಳ್ಳೆ ಸಾಹಿತ್ಯದ ರಸದೌತಣವನ್ನು ಅನುಭವಿಸಿ ಬಂದಂತಾಯ್ತು. ಶೃತಿಯವರ ಈ ಪುಸ್ತಕ ಅತ್ಯದ್ಭುತವಾಗಿ ಮೂಡಿರುವುದು ಓದುಗರು ಇದರ ಸವಿಯನ್ನು ಉಣ್ಣದೆ ಇರಲಾರರು. ಮುಂದೆಯೂ ಇವರ ಲೇಖನಿಯಿಂದ ಹೊಸ ಹೊಸ ಕೃತಿಗಳು ಹೊರ ಹೊಮ್ಮಲಿ ಎಂದು ಹಾರೈಸುತ್ತೇನೆ. ನಿಮಗೂ ಈ ಪುಸ್ತಕ ಓದುವ ಆಸೆಯಾಗಿದ್ದರೆ ಖಂಡಿತಾ ಲೇಖಕಿ ಶೃತಿ ಮಧುಸೂದನ್ ರವರನ್ನು ಸಂಪರ್ಕಿಸಿ, Mob: 9591889261

---

# ಕಬಡ್ಡಿ ಪಂದ್ಯಾವಳಿಗೆ ಚಾಲನೆ

**ಮಂಡ್ಯ:** ನಗರದ ಪಿಇಎಸ್ ಕಾಲೇಜಿನ ಪಿಇಟಿ ಕ್ರೀಡಾಂಗಣದಲ್ಲಿ ಜಿಲ್ಲಾ ಅಮೆಚೂರ್ ಕಬಡ್ಡಿ ಸಂಸ್ಥೆ, ದಿ.ಡಾ.ಎಚ್.ಡಿ.ಚೌಡಯ್ಯ ಅವರ ಅಭಿಮಾನಿ ಬಳಗದ ಸಹಯೋಗದಲ್ಲಿ ಎಚ್.ಡಿ.ಚೌಡಯ್ಯ ಸ್ಮರಣೆ ಅಂಗವಾಗಿ ಆಯೋಜಿಸಿದ್ದ ಎಚ್‌ಡಿಸಿ ಕಬಡ್ಡಿ ಕಪ್ ಪಂದ್ಯಾವಳಿಗೆ ರಾಜ್ಯ ಒಕ್ಕಲಿಗರ ಅಭಿವೃದ್ಧಿ ನಿಗಮ ಅಧ್ಯಕ್ಷ ಎಂ.ಎಸ್.ಆತ್ಮಾನಂದ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಯಾರೇ ಗೆಲುವು ಪಡೆಯಲಿ ಉತ್ತಮವಾಗಿ ಹಾಗೂ ಪ್ರಾಮಾಣಿಕವಾಗಿ ಆಟ ಆಡುವ ಮನೋಭಾವ ಬೆಳೆಸಿಕೊಳ್ಳಬೇಕು. ಕಬಡ್ಡಿ ಆಟಕ್ಕೆ ಹೆಚ್ಚು ಒತ್ತು ನೀಡಿರುವ ನಿಮಗೆ ಶುಭವಾಗಲಿ. ತಂಡದ ಗೆಲುವಿಗೆ ಕಠಿಣ ಶ್ರಮ ಹಾಗೂ ತರಬೇತಿ ಇರಬೇಕು. ಅದು ನಿರಂತ ಅಭ್ಯಾಸದಿಂದ ಸಾಗಲಿ ಎಂದು



ಸಲಹೆ ನೀಡಿದರು.

ರಾಜ್ಯ ಸರ್ಕಾರವು ಉತ್ತಮ ಕ್ರೀಡಾ ಪಟುಗಳಿಗೆ ಹಲವು ಸೌಲಭ್ಯ ನೀಡಿದೆ. ಸರ್ಕಾರಿ ಹುದ್ದೆಯನ್ನೇ ಕ್ರೀಡಾ ಪಟುಗಳಿಗೆ ಮೀಸಲಿಡಲಾಗಿದೆ. ಮಂಡ್ಯದ ಹಿರಿಯ ಅನುಭವಿ ಕಬಡ್ಡಿ ತಂಡದ ಆಟಗಾರರು ಇದ್ದಾರೆ ಅವರ ಸಲಹೆ ಸಹಕಾರವನ್ನು ಕ್ರೀಡಾ ಪಟುಗಳು ಪಡೆದುಕೊಳ್ಳಬೇಕು. ಆ ಮೂಲಕ ತಮ್ಮ ಆಟವನ್ನು ಉತ್ತಮಪಡಿಸಿಕೊಳ್ಳಬೇಕು. ಕಬಡ್ಡಿ ಆಟದಲ್ಲಿ ಉತ್ತಮ ಪಟುಗಳಾಗಿ ಹೊರಹೊಮ್ಮಬೇಕು ಎಂದರು.

ಇದೇ ಸಂದರ್ಭದಲ್ಲಿ ದೈಹಿಕ ಶಿಕ್ಷಣ ನಿರ್ದೇಶಕ ಚಿನ್ನೇಗೌಡ ಮಾತನಾಡಿ, ಪಾಂಡವಪುರ, ಮಂಡ್ಯ, ಮದ್ದೂರು, ಮಳವಳ್ಳಿ ನಾಲ್ಕು ತಾಲ್ಲೂಕುಗಳಿಂದ 21 ತಂಡಗಳು ಭಾಗವಹಿಸಿವೆ. ಸೋಲು ಗೆಲುವು ಎನ್ನದೇ ಭಾಗವಹಿಸುವುದು ಕ್ರೀಡಾ ಪಟುಗಳಿಗೆ ಮುಖ್ಯವಾಗಬೇಕು. ಚೌಡಯ್ಯ ಅವರ ಹೆಸರಿನಲ್ಲಿ ಕಬಡ್ಡಿ ಪಂದ್ಯಾವಳಿ ಆಯೋಜಿಸಿರುವುದು 11ನೇ ವರ್ಷವಾಗಿದೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಸಹಕಾರ ನೀಡಲಾಗುತ್ತಿದೆ ಎಂದರು.

ಕಾರ್ಯಕ್ರಮದಲ್ಲಿ ಹಿರಿಯ ಕ್ರೀಡಾ ಪಟುಗಳಾದ ಕೆ.ಬಿ.ಮುದ್ದೇಗೌಡ, ಉಮೇಶ್, ಶಿವಾನಂದ್, ಚೌಡಯ್ಯ ಅವರ ಮೊಮ್ಮಗ ಉದಯ್ ಪ್ರಸದ್ ಸೇರಿದಂತೆ ಕ್ರೀಟಾ ಪಟುಗಳು ಭಾಗವಹಿಸಿದ್ದರು.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,